05 ಚಿಂಬಾನ್ನ Rar

(ಕಾದಂಬರಿ)

:- ಎಂ. ಎಸ್. ನಾಗರಾಜ್

1957

N. Sharada Devi

ಚುಂಬನ

(ಕಾದಂಬರಿ)

ಲೇಖಕ;

ಎಂ. ಎಸ್. ನಾಗರಾಜ

★

...ತ್ರ,
...ಶ್ರ).
ಶಿವರಾಂಪೇಟೆ, ಮೈಸೂರು.

1957.

ಎಂ. ಎಸ್. ನಾಗರಾಜರ ಮತ್ತೊಂದು ಭವ್ಯ ಮಹಾಕೃತಿ:

"ಆತ್ಮ-ವಿಜ್ಞಾನ"

ಜಗತ್ತಿನ ಮಾನವ ಜನಾಂಗವನ್ನು ಕತ್ತಲಿನಿಂದ ಬೆಳಕಿಗ
ದುಃಖದಿಂದ ಸುಖಕ್ಕೆ, ಸಾವಿನಿಂದ ಜೀವನಕ್ಕೆ ಎಳೆದು ತಂದ ವಿಶ್ವದ
ಏಕಮಾತ್ರ ಐನ್‌ಸ್ಟೈನನನ್ನು ಮೀರಿದ ವಿಜ್ಞಾನಿ, ಪ್ರಾಯ್ಡನನ್ನು ಮೀರಿದ
ಮನಶ್ಶಾಸ್ತ್ರಜ್ಞನಾದ ಭಗವಾನ್ ಬುದ್ಧನ ರೋಮಾಂಚಕಾರಿ ಜೀವನ
ಕಥಾನಕವೇ.

"ಆತ್ಮ-ವಿಜ್ಞಾನ"

ಜೀವಧರ್ಮಗಳನ್ನು ಶುದ್ಧ ವೈಜ್ಞಾನಿಕ ಆಧಾರಗಳ ಮೇಲೆ ರಚ
ಸಿರುವ ಬುದ್ಧನ ಜೀವನವನ್ನು ಅತಿ ತೀಕ್ಷ್ಣವಾದ ದುರ್ಬೀನಿಂದ ಪ್ರತ್ಯ
ಸಾಹಿತಿ ನಾಗರಾಜರು ತುಂಬಾ ವಿವೇಚನೆಯಿಂದ ವೀಕ್ಷಿಸಿದ್ದಾರೆ
ಪ್ರತಿಯೊಬ್ಬರಲ್ಲೂ ಮನೆಮಾಡಿರುವ, ಅಜ್ಞಾನ, ಅಂಧಕಾರ, ಅಂಧ
ಶ್ರದ್ಧೆಗಳನ್ನು ಬುಡಸಹಿತ ಕಿತ್ತೊಸೆಯುವ ಸಲುವಾಗಿ, ಪ್ರತಿಯೊಬ್ಬ
ಹೃದಯದ ಬಾಗಿಲನ್ನು ಬಡಿದು ಎಲ್ಲರನ್ನು ಎಚ್ಚರಿಸಬರಲಿ; ಪ್ರತಿ
ಸಾಹಿತಿ ನಾಗರಾಜರ 'ಆತ್ಮ-ವಿಜ್ಞಾನ'

ಪ್ರಕಾಶಕರ ನುಡಿ.

'ಚುಂಬನ' ಕಳೆದ ವರ್ಷ ನವೆಂಬರ್ ತಿಂಗಳಲ್ಲೇ ಹೊರ ಬೇಕಾಗಿತ್ತು. ಕಾರಣಾಂತರದಿಂದ ತಡವಾಯಿತು. ಕೃಪೆಮಾಡಿ ರುಗರು ಎಂದಿನಂತೆ....ಸಹಕರಿಸುವರೆಂದು ನಂಬಿದ್ದೇನೆ.

'ಚುಂಬನ'ದ ಗ್ರಂಥಕರ್ತರಾದ ಪುಟ್ಟಸಾಹಿತಿ ಶ್ರೀ ಎಂ. ್. ನಾಗರಾಜರು ಮೈಸೂರಿನ ವಿಶ್ವವಿದ್ಯಾನಿಲಯದಲ್ಲಿ ವಿಜ್ಞಾ ನ್ನು ಅಭ್ಯಸಮಾಡುತ್ತಾ, ಸಾಹಿತ್ಯವನ್ನೂ ತರಗತ ಮಾಡಿಕೊಂ ರೆ. ವಯಸ್ಸಿಗೆ ಮೀರಿದ ಪ್ರತಿಭೆ ಪಾಂಡಿತ್ಯಗಳು ಇವರಲ್ಲಿ ಮನೆ ಾಡಿವೆ

ಹುಟ್ಟು ಮೈಸೂರಿಗರೂ, ಅಚ್ಚ ಕನ್ನಡಿಗರೂ ಆದ ಶ್ರೀ ನಾಗ ಜರು ಶ್ರೇಷ್ಠವಾಗ್ಮಿಗಳು ಉತ್ತಮ ಲೇಖಕರು. ಪತ್ರಿಕೆಗಳಲ್ಲಿ ಚಾರ ಪ್ರಚೋದಕವಾದ ಅನೇಕ ಲೇಖನಗಳನ್ನು ಬರೆದು ಕನ್ನಡಿ ಅಭಿಮಾನ ಆದರಗಳನ್ನು ಈ ಚಿಕ್ಕ ವಯಸ್ಸಿಗೇ ಗಳಿಸಿಕೊಂಡಿ ರೆ.

ಕೆಲವು ನಾಟಕಗಳನ್ನೂ, ಸಣ್ಣಕತೆಗಳನ್ನೂ, ಕವಿತೆಗಳನ್ನೂ, ನ್ನೂ ನಾಲ್ಕು ಕಾದಂಬರಿಗಳನ್ನೂ ಬರೆದಿರುವ ಶ್ರೀಯುತರ ಭವಿಷ್ಯ ್ಯವಾಗಿವೆ. ಈ 'ಚುಂಬನ' ವನ್ನು ಹಿಂಬಾಲಿಸಿ ಇವರ ಎಲ್ಲ ಹಿತ್ಯವೂ ಬೇಗ ಬೆಳಕಿಗೆ ಬರು ಎಂದು ಬಯಸುತ್ತೇನೆ.

ನಮ್ಮ ಮೇಲೆ ಅಭಿಮಾನಪಟ್ಟು 'ಚುಂಬನ' ವನ್ನು ಬರೆದು ಟ್ಟ ಶ್ರೀ ನಾಗರಾಜರಿಗೆ ನಾನು ಋಣಿ.

ಇತಿ ಪ್ರಕಾಶಕ:

ಯಂ. ಯನ್. ಮಹದೇವಯ್ಯ.

10—8—1957.

ಇದೋ ನಿಮಗಾಗಿ ಅಚ್ಚಿನಲ್ಲಿದೆ.

ಎಂ. ಎಸ್. ನಾಗರಾಜರ ಒಂದು ಶ್ರೇಷ್ಠ ಕಲಾಕೃತಿ.

"ಚೈತನ್ಯಗೀತ"

ಮಹಾಕವಿ ಕಾಳಿದಾಸನ ಅಮರ ಕಲಾಕೃತಿ "ಕುಮಾರ ಸಂಭವ" ವಿಶ್ವದಲ್ಲೇ ಮೊಟ್ಟಮೊದಲು ಬಾರಿಗೆ 'ಕಾವ್ಯಕಾದಂಬರಿ' ಯಾಗಿ ಪ್ರಟ್ಟಸಾಹಿತಿ ಶ್ರೀ ಎಂ. ಎಸ್. ನಾಗರಾಜರವರಿಂದ ಭವ್ಯತೆ ದಿವ್ಯತೆಗಳ ಮಧ್ಯೆ, ಮೃದುಮಧುರ ಮನೋಹರವಾದ ಮಾನಸ ಸರೋವರದಂತೆ ತಿಳಿಯಾದ ಶ್ರೇಷ್ಟಶೈಲಿಯಲ್ಲಿ ತಡೆಯಲ್ಪಟ್ಟು, ಗಂಗಾತರಂಗದಂತೆ ಸಾಹಿತ್ಯ ವಿಶ್ವದ ಬಯಲಲ್ಲಿ ಹರಿದು, ದಡದ ಇಕ್ಕೆಲದ ಭೂಮಿಯನ್ನೂ ಫಲವತ್ತಾಗಿ ಮಾಡುವ ಸಲುವಾಗಿಯೆ ಬರಲಿದೆ. ಕಾಳಿದಾಸನ ಕಾವ್ಯಮಯವಾದ ಭಾಷೆಯಲ್ಲಿ ಪಾರ್ವತಿ ಪರಮೇಶ್ವರರ ಪ್ರಣಯ ಕಥೆ ನಾಗರಾಜರ ರಸವತ್ತಾದ, ಕಣ್ಣಿಗೆ ಬಗೆ ಬಗೆ ವರ್ಣವರ್ಣಗಳಲ್ಲಿ ಕಟ್ಟಲಿರುವ ರಸವತ್ತಾದ ಚಿತ್ರಣಗಳಲ್ಲಿ, ಅನುಪಮ ಶೈಲಿಯಲ್ಲಿ ರೂಪಿತವಾಗಿದೆ ಎಂದರೆ ಓದುಗರು ಕೃತಿಯನ್ನು ಓದುತ್ತಿದ್ದಂತೆಯೆ ಉಸಿರುಕಟ್ಟಿ ನಿಂತು ಕಾದಂಬರಿಯ ಭವ್ಯತೆಗೆ ತಲೆಬಾಗಿ, ದಿವ್ಯತೆಗೆ ತಲೆದೂಗಿ, ರಮ್ಯತೆಯ ಬ್ರಹ್ಮಾನಂದದಲ್ಲಿ ಲೀನರಾಗಿ ಮೂಕರಾಗಿ ನಿಲ್ಲಬೇಕಾಗುತ್ತದೆ.

ಜಗತ್ತಿನ ನಿತ್ಯಪ್ರಣಯಿಗಳಾದ ಉಮಾಶಂಕರ ಸುಂದರವಾದ ಪ್ರೇಮಕಥೆಯನ್ನು ಓದುತ್ತಿದ್ದಂತೆಯೇ ಮೈ ಜುಂ ಜುಂ ಎನ್ನಬೇಕಾಗಿದೆ: ಚೈತನ್ಯಗೀತ ಕಾಳಿದಾಸನನ್ನು ಓದಿದವರಿಗಾಗಿ, ಓದದವರಿಗಾಗಿ ಬರಲಿದೆ; ಚೈತನ್ಯಗೀತ,

ನಾಗರಾಜರ ಬರಲಿರುವ ಕಾದಂಬರಿಗಳು:—

ಭ್ರಮರಗೀತ—ತುಟಿದುಂಬಿ—ಇರುಳಹಕ್ಕಿ.

ಹಕ್ಕುಗಳು ಲೇಖಕರವು.

ಈ ಕೃತಿ ಶುದ್ಧ ಕಾಲ್ಪನಿಕ—ಲೇಖಕ.

'ನಿನಗೊಂದು ಓಲೆ'

ೕದರಾ,

ಮೊದಲಿಗೆ ಹೇಳುತ್ತೇನೆ: "ಇದು ನನ್ನ ಆತ್ಮಕಥೆ; ಮೇಲು ತಿಯವನೊಬ್ಬ ನನ್ನನ್ನು ಮದುವೆಯಾದ; ಅಷ್ಟೇ ಅಲ್ಲ ನನ್ನನ್ನು ನನ್ನ ಮಿಗೆ ಕೊಟ್ಟು ಮದುವೆ ಮಾಡಿದ"

ಇದು ಈ ಕಾದಂಬರಿಯ ಕಥಾವಸ್ತು. ಈ ಮಾತನ್ನು ಕೇಳಿದ ನೀನು; ಯಕಾಲದ ಸಂಪ್ರದಾಯದಲ್ಲಿ ಅತಿ ಭಕ್ತಿಯುಳ್ಳ ನೀನು; ಭಾರತೀಯ ತನ ಧರ್ಮವನ್ನು ಅರಿಯಬೇಕಾದ ರೀತಿಯಲ್ಲಿ ಅರಿಯದ ನೀನು ಕಿಡಿಕಿಡಿ ಗಿರುವೆ ಅಲ್ಲವೆ?

ನನಗೆ ಗೊತ್ತು. ವೇಶ್ಯಾ ಜೀವನದ ಮೇಲೆ ನನ್ನ ಸೋದರರು; ತಿಗಳು ಬರೆದ ಕೃತಿಗಳನ್ನು ನೋಡಿ ಕೋಪಗೊಂಡು ಕುಣಿದಾಡಿದ ು ಈ ಪುಸ್ತಕದ ಕಥಾವಸ್ತು ತಿಳಿದು ಇನ್ನೆಷ್ಟು ಕೋಪೋನ್ಮತ್ತನಾಗುವೆ ಬುದನ್ನು ನಾನು ಚೆನ್ನಾಗಿಯೂ ಬಲ್ಲೆ.

ಕೊಂಚ ತಾಳು ಸೋದರ; ಕುಪಿತನಾಗುವ ಬದಲು ಕೊಂಚ ನಾನ್ನು ುವ ಮಾತನ್ನು ಸಾವಧಾನದಿಂದ ಕೇಳು.

ಹೆಣ್ಣು! ಹೆಣ್ಣು!! ಹೆಣ್ಣು!!!

---ಎಂದರೆ ಪ್ರಾಚೀನ ಭಾರತೀಯರ ಹಾಗೂ ಅರ್ವಾಚೀನ ಭಾರ ುರ ಮನಸ್ಸನ್ನು ಅರಿತಿದ್ದೇನೆ. ಅವರುಗಳು ನನ್ನ ಜನಾಂಗಕ್ಕೆ ಇತ್ತ ವವನ್ನೂ, ಅಗೌರವವನ್ನೂ ನಾನೂ ಕೇಳಿದ್ದೇನೆ. ಅನಾದಿಯಿಂದ ನ್ನು, ಎಂದರೆ ನನ್ನ ಜಾತಿಯನ್ನು, ಎಂದರೆ ಸ್ತ್ರೀಜಾತಿಯನ್ನು ನೀನು ೕಡುವ ಕಣ್ಣನ್ನು ನಾನು ನೋಡಿದ್ದೇನೆ.

ಪ್ರಾಚೀನ ಭಾರತ! ಮನುಧರ್ಮಶಾಸ್ತ್ರ!! ಹೇಳಿದಮಾತು:

" ಯತ್ರ ನಾರ್ಯಸ್ತು ಪೂಜ್ಯನ್ತೆ ರಮನ್ತೆ ತತ್ರ ದೇವತಾಃ |
ಯತ್ರೈತಾಸ್ತು ನ ಪೂಜ್ಯನ್ತೆ ಸರ್ವಾಸ್ತತ್ರಾ ಫಲಾಃ ಕ್ರಿಯಾಃ ||

ಶೋಚನ್ತಿ ಜಾಮಯೊ ಯತ್ರ ವಿನಶ್ಯತ್ಯಾಶು ತತ್ಕುಲಮ್ |
ನ ಶೋಚನ್ತಿತು ಯತ್ರೈತಾ ವರ್ಧತೆ ತದ್ಧಿ ಸರ್ವದಾ ||"

—"ಎಲ್ಲಿ ಹೆಂಗಸರನ್ನು ಪೂಜ್ಯದೃಷ್ಟಿಯಿಂದ ಕಾಣುವರೋ ಅಲ್ಲಿ ದೇವತೆಗಳು ಸುಪ್ರೀತರಾಗುವರು. ಎಲ್ಲಿ ಅವರಿಗೆ ಅಗೌರವ ತೋರಿಸಲ್ಪಡುವುದೋ ಅಲ್ಲಿ ಪುರುಷರು ಮಾಡುವ ಯಾವ ಕರ್ಮವೂ ಸಿದ್ಧಿಸದು. ಎಲ್ಲಿ ಹೆಂಗಸರು ಕಣ್ಣೀರಿಡುವರೋ, ಅಲ್ಲಿ ಆ ಕುಲವೇ ನಾಶವಾದಂತೆ. ಎಲ್ಲಿ ಅವರು ಆನಂದಿಗಳೋ ಅಲ್ಲಿ ಆ ಕುಲ ಅಭಿವೃದ್ಧಿಯಾಗುವುದು".

ನೋಡು ಸೋದರ ಇಲ್ಲಿ ಮನು ಹೆಣ್ಣಿಗಿತ್ತಿರುವ ಬೆಲೆಯನ್ನು "ಇಲ್ಲಿ ಅವಳು ಪೂಜ್ಯನೀಯಳು". ಈ ಮಾತನ್ನು ಮರೆಯಬೇಡ. ಇಷ್ಟೇ ಅಲ್ಲ ಇವರುಗಳು ಪೆಣ್ಣಿಗೆ ತೋರಿರುವ ಗೌರವ—

"ಶತಾಪರಾಧೈಃ ವನಿತಾಂ ಪುಷ್ಪೇಣಾಪಿ ನ ತಾಡಯೇತ್
ದೋಷಾಂ ನಗಣಯೇತ್ ಸ್ತ್ರೀಣಾಂ ಗುಣಾನ್ಯೈವ ಪ್ರಕಾಶಯೇತ್ ||"

"ಹೆಣ್ಣು ನೂರು ತಪ್ಪು ಮಾಡಲಿ ಅವಳನ್ನು ಹೂವಿನಿಂದ ಕೂಡ ಹೊಡೆಯಬೇಡ. ಸ್ತ್ರೀಯ ದೋಷಗಳನ್ನು ಮರೆತು ಗುಣಗಳನ್ನು ಮಾತ್ರ ಪ್ರಕಾಶಿಸು".

—ಎಂದು ತಂತ್ರಶಾಸ್ತ್ರದ ಹಾದಿ ತುಳಿದವರು ತಮ್ಮ ಅಸಂಬದ್ಧ ಪ್ರಲಾಪವನ್ನು ತೋಡಿಕೊಂಡಿದ್ದಾರೆ. ನಾನು ನೂರು ತಪ್ಪು ಮಾಡಿದಾಗಲೂ ನನ್ನನ್ನು ಕುಸುಮದಿಂದ ಕೂಡ ಹೊಡೆಯಬೇಡ ಎಂದು ಕೇಳಿಕೊಳ್ಳುವವಳು ನಾನಲ್ಲ. ನಾನೂ ನಿನ್ನಂತೆ ಮಾನವಳು. ತಪ್ಪಿತಸ್ಥರು ಯಾರಾದರೇನು ಶಿಕ್ಷಿಸು. ನಾನು ನೂರುತಪ್ಪು ಮಾಡಿದಾಗಲೂ ನೀನು ಹೊಡೆಯದೇ ಇರಲು ಕಾರಣ?........ಸಂತೋಷ ಇದು ನಿನ್ನ ಅತಿಮಾನವತ್ವವನ್ನು ಅಥವಾ ದೇವತ್ವವನ್ನು ತೋರಿಸುತ್ತವೆ.

ಆದರೆ ಇಷ್ಟೊಂದು ರೀತಿಯಲ್ಲಿ ನನ್ನನ್ನು ಪುರಸ್ಕರಿಸಿದ ನೀನು, ನೀನು ಸೋದರ—

ನೀನೇ--! ಅದೇ ಹೆಣ್ಣನ್ನು—

"ಬೀಜಂ ಭವಸ್ಯ ನರಕದ್ವಾರಸ್ಯ ದೀಪಿಕಾ |
ಶುಚಾಂಕನ್ದಃ ಕಳೇರ್ಮೂಲಂ ದುಃಖಾನಾಂ ಖನಿರಂಗನಾ ||"

" ಸ್ತ್ರೀಯೆ ಸಂಸಾರಕ್ಕೆ ಬೀಜ. ನರಕದ ದಾರಿಯನ್ನು ಬೆಳಗುತ್ತಿರುವ ಂಜು. (ನನ್ನನ್ನು ಒಯ್ಯಲು) ಇವಳೇ ಅಶುಚಿಯ ಬೆಟ್ಟ; ಕೊಳೆಯ ಮೂಲ ಃಖದ ಗಣಿ "

—ಎಂದು ಅತಿ ತುಚ್ಛವಾಗಿ ಕರೆಯುವೆ ಏಕೆ? ನಾನು ಅಷ್ಟು ಳವೆಯೆ? ಒಂದು ಕಡೆ ನಾನು ನಿನಗೆ ಪೂಜನೀಯಳು. ಮಗದೊಂದು ಡೆನೂರು ತಪ್ಪು ಮಾಡಿದಾಗಲೂ ನಿರಪರಾಧಿನಿ, ಆದರೆ ಈಗ ನರಕಕ್ಕೆ ೂಯ್ಯುವ ಪಂಜು; ದುಃಖದ ಗಣಿ; ಕೊಳೆಯ ಮೂಲ; ಅಶುಚಿಯಬೆಟ್ಟ ಂಸಾರಕ್ಕೆ ಬೀಜ ಎಂದು ಅಲ್ಲಗಳೆಯುವೆ. ಇದೇಕೆ? ಒಂದು ಕಡೆ ರಸ್ಕಾರ; ಇನ್ನೊಂದು ಕಡೆ ತಿರಸ್ಕಾರ. ಒಂದು ಕಡೆ ನಾನು ದೇವಿ; ಗದೊಂದು ಕಡೆ ಸಂಸಾರಕ್ಕೆ ಬೀಜ. ನರಕದರ್ಶಿನಿ.

ಸಂಸಾರಕ್ಕೆ ಬೀಜ!

ಸಂಸಾರ ನನ್ನಿಂದಲೇ ಹುಟ್ಟಲಿಲ್ಲ. ಅದನ್ನು ಮೊದಲು ತಿಳಿ. ಂಸಾರ ನಿನ್ನ ದೃಷ್ಟಿಯಲ್ಲಿ ಹೇಯವಾದುದಾದರೆ, ಈ ಹೇಯವಾದುದಕ್ಕೆ ರಣ ನಾನೊಬ್ಬಳೇ ಅಲ್ಲ. ನೀನೂ ಸೇರಿದ್ದೀಯೆ. ಇದರಲ್ಲಿ ನಿನ್ನದೂ) ಭಾಗ ಪಾಲಿದೆ ಎಂಬುದನ್ನು ಮರೆತೆಯಾ? ಇದನ್ನು ಮರೆತು—

" ಈ ಮೋಹಿನಿ ಎಲ್ಲಿಯವಳು? "

" ಕೇನೇಶ ನಿರ್ಮಿತಂ ನಾರಿ ಮೋಹಿನಿ "

-ಎಂದು ಹೇಳುತ್ತಿರುವೆಯಾ?

ಎರಡು ಕೈ ಸೇರದೆ ಚಪ್ಪಾಳೆಯ ಸದ್ದು ಕೇಳದು ಎಂಬುದನ್ನು ಮರೆ ಯಾ? ಅಣ್ಣ.

ಸೋದರ, ನೀನೊಬ್ಬನೇ ಅಲ್ಲ ನನ್ನನ್ನು ಈ ರೀತಿ ಅಲ್ಲಗಳೆದವನು; ನ್ನ ದೇಶಮಾತ್ರವಲ್ಲ; ಇಡೀ ವಿಶ್ವ!

ಈ ಕೀರ್ತಿ ಇಡೀ ವಿಶ್ವದ ನಿನ್ನ ಜನಾಂಗಕ್ಕೆ ಸೇರತಕ್ಕದ್ದು.

ಕ್ರೈಸ್ತರ ದೃಷ್ಟಿಯಲ್ಲಿ! ನಾನು........ಅಬ್ಬ!

ನಾನು Eve—

ನಾನು ಗಂಡನ್ನು Adam ನನ್ನು ಕೆಣಕಿದವಳು. ನಾನು ಈ ಕೆಲಸ ಮಾಡದೇ ಇದ್ದಿದ್ದರೆ ? !........ನಾನು ತಪ್ಪಿತಸ್ಥಳು.

ಅಂದು ನೀನು ಏನೂ ಅರಿಯದ ಇಂದು ಬಾಯಿಗೆ ಬೆರಳಿಟ್ಟರೆ ಕಚ್ಚಲೂ ಬಾರದ ಕಂದಮ್ಮ! ನಾಗಿದ್ದೆಯಾ ?

ಇಂದೂ ನಾನು ಅವರ ದೃಷ್ಟಿಯಲ್ಲಿ 'ಸೈತಾನನ ಸೋದರಿ'

ಅಷ್ಟೇ ಅಲ್ಲ........

—ಸೀಜರ್ ನಿರಂಕುಶ ಪ್ರಭುವಿನ ಪಾಲಿಗೆ ಮೃತ್ಯು !

ಇಷ್ಟೂ ಅಲ್ಲ.......

—ಟ್ರಾಯ್ ನಗರದ ವಿನಾಶಿಸಿ !!

ಇನ್ನೇನೆಂದರೆ........

—ಜೇಬಿಲಾನಿನ ವಿಧ್ವಂಸಿನಿ !!!

ತಿಳಿದೆಯಾ ತಮ್ಮ,

ಆರೇಬಿಯನ್ನರ ದೃಷ್ಟಿಯಲ್ಲಿ—

ನಾನೊಂದು ಸ್ವತ್ತು. ಮಾರಬಹುದಾದ ಸಾಮಾನು. ಸುಂದರಿ ಅರೇಬಿಯನ್ನರ ಸಾವಿರಾರು ರೂಗಳ ಚರಸ್ವತ್ತು.

ಇನ್ನೂ ಹೇಳುವುದಿದೆ. ಅವಸರಪಡಬೇಡ.

ನನ್ನ ನಿನ್ನ ಸಂಬಂಧ (ವ್ಯಾಜ್ಯ) ಇಂದು-ನಿನ್ನೆಯದಲ್ಲ. ಅನಾದಿ ಕಾಲದ್ದು.

ಕೆಲವರ ದೃಷ್ಟಿಯಲ್ಲಿ—ನಾನು ಸೌಂದರ್ಯದ ಗಣಿ—

ಕೈಯ್ಯಲ್ಲಿ 'ಕಾಮಪಾಶ' ಹಿಡಿದ ನಿನ್ನ ಮುಂದೆ ಸುತ್ತುತ್ತಿರುವ ಭೋಗದ ಗಣಿ........ಮನೋಹರವಾದ ಉಬ್ಬುತಗ್ಗುಗಳುಳ್ಳ ಅಪ್ಸರೆ—ನನ್ನ ಸೌಂದರ್ಯವನ್ನುವರ್ಣಿಸುವುದರಲ್ಲೇ ನಿರತವಾದ ಎಲ್ಲ ಲೇಖನಿಗಳ ದೃಷ್ಟಿಯಲ್ಲಿ.

ಜಗತ್ತಿನ ಎಲ್ಲ ಸೌಂದರ್ಯಮಯವಾದ ವಸ್ತುಗಳನ್ನು ಒತ್ತಟ್ಟಿಗೆ ತಂದು ಒಂದು ಭಾರೀ ಮೂಸೆಯಲ್ಲಿಟ್ಟು, ಕುದಿಸಿ, ಬಂದ ಮಹಾ 'ಸೌಂದರ್ಯ ರಸ' ದಿಂದ ತಯಾರಿಸಲ್ಪಟ್ಟ, ಅತಿ ಸುಂದರ ; ಸುಮನೋಹರ ; ಸುಪ್ರಶಾಂತ ; ಅತಿಸ್ನಿಗ್ಧ ; ಮುಗ್ಧ ; ಅನುಪಮ ಸುಂದರಿ.

—ಇನ್ನು ಹೆಚ್ಚು ಹೇಳಲಾರೆ ತಮ್ಮ ಈ ಬಗ್ಗೆ.

ನೋಡು ಸೋದರಾ,

ಒಂದೆಡೆ ನಾನು ದೇವಾದಿದೇವಿ ; ಮಗದೊಂದೆಡೆ ಯಾವುದಕ್ಕೂ ಬೇಡವಾದ ಪಾಪದ ಕೂಪದ ನರಕದರ್ಶಿನಿ.

ಈ ರೀತಿ ನೀನು ಅನಾದಿಯಿಂದ ನನ್ನನ್ನು ನೋಡುತ್ತ ಬಂದಿದ್ದೀಯೆ.

ಕಾಳಿದಾಸ, Shakespeare ಇವರಿಂದ ಹಿಡಿದು ಈ ದಿನದ ಕವಿಗಳ ಕಾದಂಬರಿಕಾರರ, ನಾಟಕಕಾರರ ದೃಷ್ಟಿಯಲ್ಲಿ ಕೂಡ ನಾನು ಒಂದೆಡೆ ದೇವಿ, ಅಪ್ಸರೆ, ಪಾಪವಿಲ್ಲದ ಮನೋಹರಿ ಆದರೆ ಮಗದೊಂದೆಡೆಯಲ್ಲಿ—

ಅದೇ........ಅಶುಚಿಯ ಬೆಟ್ಟ........

ಇದೆಲ್ಲವನ್ನು ನಿನಗೆ ಹೇಳಲು ಅನೇಕ ಕಾರಣಗಳಿವೆ. ಕೇಳು. ಇಂದು ಭಾರತದಲ್ಲಿ ಸ್ತ್ರೀ ಸ್ವತಂತ್ರ ವಿರಾಟಸ್ವರೂಪ ತಳೆದು ನಿಂತಿದೆ. ಇದಕ್ಕೆ ಕಾರಣ ?

ಕಾರಣ ತಿಳಿದುಕೊಳ್ಳುವುದು ಉಚಿತವಲ್ಲವೆ ?

ಭಾರತದಲ್ಲಿ ಪ್ರಾಚೀನ ಕಾಲದಲ್ಲಿ ಒಂದು ದಿನ ಸ್ತ್ರೀ, ವೇದಾಧ್ಯಯನ ಮಾಡಬಹುದಿತ್ತು—

ಗಂಡಿನ ಜೊತೆ ಆಟಪಾಟಗಳಲ್ಲಿ ಕೂಡಬಹುದಾಗಿತ್ತು—ಪುನರ್ ವಿವಾಹಕ್ಕೆ ಗಂಡಿನಂತೆ ಹೆಣ್ಣಿಗೂ ಹಕ್ಕಿತ್ತು—ದ್ರೌಪದಿ ಐವರನ್ನು ಕೂಡ ಬಹುದಿತ್ತು—

ಆದರೆ ಈ ದಿನ ನಮ್ಮ ಸಮಾಜದಲ್ಲಿ—

ಹೆಣ್ಣು ಯಾರು ?

ಪುನರ್ ವಿವಾಹಕ್ಕೆ ಅವಕಾಶವಿಲ್ಲದವಳು—ಗಂಡಿನೊಡನೆ ಆಟಪಾಟ ಗಳಲ್ಲಿ ಭಾಗವಹಿಸಲು ಹೊರಟಾಗ ನಾನು 'ಹೊಸಲುದಾಟಿದ ಹೆಣ್ಣು'—

ನನ್ನದು "ಜಾರಿದ ಕಾಲು"

ಇದೇಕೆ ಈ ಬುದ್ಧಿ ನಿನಗೆ ?

ಬಾಲ್ಯದಲ್ಲಿ ನಾನು ತಂದೆತಾಯಿಗಳ ಅಧೀನದಲ್ಲಿ; ಪ್ರಾಯದಲ್ಲಿ ಗಂಡನ ಅಧೀನದಲ್ಲಿ ; ವೃದ್ಧಾಪ್ಯದಲ್ಲಿ ಮಕ್ಕಳ ಅಧೀನದಲ್ಲಿ ನನ್ನನ್ನು ಇಟ್ಟಿರುವ ಈ ಸಮಾಜ. ಇಂದಿನ ಸಮಾಜ ನಾನು ಪ್ರೀತಿಸಿದವನೊಡನೆ ನನಗೆ ವಿವಾಹವಿಲ್ಲ.

ನಾನು ನಿನ್ನ ಇಚ್ಛೆಯಂತೆ ನಡೆಯಬೇಕಾದ 'ಯಜ್ಞಪಶು' ಇದು ಸಾಧ್ಯವಿಲ್ಲ.

ಹೆಣ್ಣನ್ನು ಹೆಣ್ಣಾಗಿ ನೋಡಲಾರೆಯಾ ?

ನನ್ನ ಜೀವನವನ್ನೇ ವಿಮರ್ಶಿಸು :—

ನಾನು ಹೆಣ್ಣುಜೀವಿ. ಒಬ್ಬನನ್ನು ಪ್ರೀತಿಸಿದೆ; ಪ್ರೇಮಿಸಿದೆ; ಕಾಮಿಸಿದೆ. ಆದರೆ ನಮ್ಮಿಬ್ಬರದೂ ಗುಪ್ತಪ್ರೇಮ. ಸಮಾಜ—ಈ ಕ್ರೂರ ಸಮಾಜದ ದೆಸೆಯಿಂದ, ನನಗೆ ಪ್ರೀತಿಯಿಲ್ಲದವನನ್ನೇ ನಾನು ಮದುವೆಯಾಗ ಬೇಕಾಯಿತು. ಬೇರೆ ದಾರಿಯೇ ಇರಲಿಲ್ಲ.

ಆದರೆ ಈ ವಿವಾಹದಿಂದ ನಾನಾಗಲಿ, ನನ್ನ ಕೈಹಿಡಿದವರಾಗಲಿ ಇದರಿಂದ ಸುಖಪಡಲಿಲ್ಲ. ನನ್ನಂಥ ನಿರ್ಭಾಗ್ಯರು ಈ ಸಮಾಜದಲ್ಲಿ ಲೆಖ್ಖವಿಲ್ಲ ದಷ್ಟು ಮಂದಿ ಇದ್ದಾರೆ.

ಅವರೆಲ್ಲರ ಗತಿ ? ಅದಕ್ಕೆ ಕಾರಣ ?

ಇದೆಲ್ಲವನ್ನೂ ಸಂಪೂರ್ಣವಾಗಿ ಕಾದಂಬರಿಯಲ್ಲಿ ಕಾದಂಬರಿಕಾರರು ವಿವೇಚಿಸಿದ್ದಾರೆ.

ನನ್ನ ಕೈಹಿಡಿದ ಪತಿ, ನನ್ನನ್ನು ಕಡೆಗೊಂದು ದಿನ ನನ್ನ ಪ್ರೇಮಿಗೆ ಕೊಟ್ಟು ನನ್ನ ಮನಸ್ಸನ್ನು ಸಂತೋಷಪಡಿಸಿದ.

ನನ್ನ ಪ್ರೇಮಿಯನ್ನು ನಾನು ಪಡೆಯಲು ಸಾಧ್ಯವಾಗದಿದ್ದಲ್ಲಿ....... ನನ್ನ ಜೀವನ ಹಾಳಾಗುತ್ತಿತ್ತು.

ಅಲ್ಲವೇ ?

ಹೋ ! ಇದೇಕೆ ಇಷ್ಟು ಕೋಪ.

ಹೋ ! ಕೈಯಲ್ಲಿ ಕಲ್ಲು !

ಇದೇಕೆ ?

ಕಾದಂಬರಿಕಾರರಿಗೆ ಹೊಡೆಯಲೋ ?

ಸರಿ. ಹೊಡೆ. ಹೋ ಕೈಯಲ್ಲಿ ಗಾಜು, ಬಕ್ಕರೆ, ಕೊಚ್ಚೆ ಇದೆಲ್ಲದ ರಿಂದಲೂ ಹೊಡೆಯುವ ಬಯಕೆಯೇ ?

ಹೊಡಿ.

—ಸಂ........ತೋ........ಷ.

ಆದರೆ ಹೊಡೆಯುವ ಮುನ್ನ, ನನ್ನಂಥ ಮಾನವ ಜೀವಿಗಳ ಬಾಳನ್ನು, ಬಾಲ ವಿಧವೆಯಾದ ಶೈಲಜಳ ಬಾಳನ್ನು ಸರಿಪಡಿಸಲು ಒಂದು ಮಾರ್ಗವನ್ನು ಸೂಚಿಸು.

ಇದೇಕೆ ನಿಂತೆ ?

ಉತ್ತರಿಸು.

ಉತ್ತರಿಸಲಾರೆಯಾ ?

ನನಗೂ ನಿನಗೂ ಇರುವ ಸಂಬಂಧವನ್ನು ನೀನು ಬಲ್ಲೆಯಾ ? ನೀನು ಉರಿಯಾದರೆ ನಾನು ಬೆಳಕು ; ನೀನು ಹೂವಾದರೆ ನಾನು ಸುಗಂಧ ; ನೀನು 'ಸೆಲ್ಲು' ಎಂದಾದರೆ ನಾನು ಬಲ್ಬು. ಈ ಸಂಬಂಧವನ್ನು ಮಹಾಕವಿಕಾಳಿದಾಸ ವಾಗ್-ಅರ್ಥಗಳಿಗೆ ಹೋಲಿಸಿಲ್ಲವೆ ? ಗಂಡು ಶಿವ-ವಾಕ್ ಹೆಣ್ಣು-ಪಾರ್ವತಿ ಅರ್ಥ.

ಉತ್ತರಿಸು. ಸುಮ್ಮನೆ ನಿಂತೆಯಾ ?

ಉತ್ತರ ಕೊಡಲಾರೆಯಾ ?

ಇದೇಕೆ ಮೂಕನಾದೆ ?

ಯೋಚಿಸು.

ಹೆಣ್ಣನ್ನು ಗೆಲ್ಲುವುದು ಪ್ರೀತಿಯಿಂದ ಪ್ರೇಮದಿಂದ.

ಹೆಣ್ಣನ್ನು ನೀನು ನೋಡಬೇಕಾದುದು ಹೆಣ್ಣಾಗಿ. ತಿಳಿಯಿತೇ ?

ಅವಳು ದೇವಾದಿದೇವಿ ಅಲ್ಲ ಕೊಳೆಯ ಮೂಲವು ಅಲ್ಲ. ಹೆಣ್ಣು ಹೆಣ್ಣೇ.

ನೀನು ಹೆಣ್ಣನ್ನು ಹೆಣ್ಣಾಗಿ ನೋಡು ಅಂದು ನಾನು ನಿನಗೆ ಹೆಚ್ಚು ಪ್ರಿಯಳಾಗುವೆನು.

ನನಗೂ ನಿನಗೂ ಬಲು ಅಂತರವಿದೆ. ಆ ಅಂತರವನ್ನರಿತು ನನ್ನೆಡೆ ಬಾ.

ನನ್ನ ಭಾವಾತಿರೇಕ, ಭಾವೋದ್ವೇಗ, ಕೋಪ, ಶಾಂತಗುಣ ಇವುಗಳು ನಿನ್ನಿಂದ ಬೇಕಾದುವು. ನನ್ನ ಜಾತಿಯೇ ಬೇರೆ. ನಿನ್ನ ಜಾತಿಯೇ ಬೇರೆ.

ನೀನು ಹೆಣ್ಣನ್ನು ಬಲಾತ್ಕಾರದಿಂದ ನಿನ್ನ "ಕಾಮುಯಜ್ಞ" ಕ್ಕೆ ಪಶುವಾಗಿಯಾಗಲಿ ಅಥವಾ....ಯಾವುದಕ್ಕೆ ಆಗಲಿ ಪಡೆಯಲು. ಯತ್ನಿಸಬೇಡ.

ಅವಳನ್ನು ಪ್ರೀತಿಯಿಂದ ; ಪ್ರೇಮದಿಂದ ಗೆಲ್ಲು ; ಇದು ಮಿಕ್ಕೆಲ್ಲ ಮಾರ್ಗಗಳಿಗಿನ್ನ ಸುಲಭ ಹಾಗೂ ಉಪಯುಕ್ತವಾದುದು.

ಹೆಣ್ಣು ನಿನ್ನನ್ನು ಪ್ರೇಮಿಸಿದರೆ, ನಿನ್ನ ಮೋಹದ ಬಲೆಯಲ್ಲಿ ಬಿದ್ದರೆ, ಅವಳು ನಿನ್ನ ಸೇವಕಿಯಾಗಿ, ದಾಸಿಯಾಗಿ, ಪ್ರೇಮಿಯಾಗಿ, ತಾಯಿಯಾಗಿ, ವೇಶ್ಯೆಯಾಗಿ, ಗುರುವಾಗಿ ನಿನ್ನ ಉದ್ಧಾರಕ್ಕೆ ನಿಲ್ಲುವಳು.

ನೀನು ಹೆಣ್ಣನ್ನು ಹೆಣ್ಣಾಗಿ ಕಂಡರೆ ಸಾಕು. ಅದೇ ನನ್ನ ಕೋರಿಕೆ. ಮದುವೆಯಾದ ಗಂಡು ಹೆಣ್ಣನ್ನು ಮಗದೊಬ್ಬರಿಗೆ ಕೊಟ್ಟು ಮದುವೆ ಮಾಡುವುದು ರೂಢಿಗೆ ವಿರುದ್ಧ—ನಿನ್ನ Rule ಗೆ ಅಸಂಬದ್ಧ.

ಕಾರಣ ನೀನು ಸಂಪ್ರದಾಯಕ್ಕೆ ಶರಣುಹೋದ ವಿಭೂತಿ. ಈಗಲಾದರೂ ಸಂಪ್ರದಾಯವೆಂಬ ಭೂತದ ಬಾಯಿಂದ ದೂರಬಂದು ನೋಡು. ಇಲ್ಲವಾದಲ್ಲಿ ನನ್ನಂಥವರಿಗೆ ಉಳಿಗಾಲವಿಲ್ಲ.

ನಿಜ ! ಈ ಸಂಪ್ರದಾಯ ಅನೇಕ ತಲೆಯಿಂದ ಬಂದುದು. ಬಿಡುವುದು ಕಷ್ಟ. ಸಮಾಜದ ದೃಷ್ಟಿಯಲ್ಲಿ ಪಾಪ.

ಆದರೆ ಅಪ್ಪಹಾಕಿದ ಸಂಪ್ರದಾಯವೆಂಬ ಆಲದಮರಕ್ಕೆ ನೇಣುಹಾಕಿಕೊಳ್ಳುವುದೇಕೆ ?

ಸಂಪ್ರದಾಯವೆಂಬೀ ಹಳೆಯ ಮನೆಯಲ್ಲಿರುವ ಚಿನ್ನದ ಕತ್ತಿಗೆ, ಇದು ಚಿನ್ನದ ಕತ್ತಿ ಎಂದು ಕತ್ತನೇಕೆ ಒಡ್ಡುವೆ ?

ರೇಗಬೇಡ. ಹೆಣ್ಣು ಮಾರಿಯಲ್ಲ, ಕಾಳಿಯಲ್ಲ, ದೇವಾದಿದೇವಿಯೂ ಅಲ್ಲ. ಹೆಣ್ಣಿನ ಹೃದಯವೇ ಬೇರೆ ಅದನ್ನು ಗೆಲ್ಲಲು ಮಾರ್ಗ ಬೇಕಾದರೆ ನಿಧಾನವಾಗಿ ಕಾದಂಬರಿ ಓದು. ಈ ವಿಷದ ಬಳ್ಳಿ ನಿನ್ನ ಬಾಳಹಾದಿಯಲ್ಲಿ ಇರುವುದು ಬೇಡ. ಇದನ್ನು ಮೊದಲು ಆಚೆದೂಡು. ಇಲ್ಲವಾದಲ್ಲಿ ಇಂದಲ್ಲ ನಾಳೆ ನಿನ್ನ ಕಾಲಿಗೂ ಇದು ಬಡಿಯಬಹುದು. ನಾನು ಬರುತ್ತೇನೆ ಇನ್ನು.

—ಇತಿ ಶಾಂತ.

ಚಿತ್ರಕ್ಕೆ ಚೌಕಟ್ಟು

ನನ್ನ ಮೊದಲ ನಾಲ್ಕು ಕೃತಿಗಳು ಹೊರಬರುವ ಮುನ್ನ, ಬೆಳಕು ಕಾಣುತ್ತಿರುವ 'ಚುಂಬನ' ಉದಯವಾದ ಕನ್ನಡನಾಡಿಗೆ ನಾನಿತ್ತ ಮೊದಲ ಉಡುಗೊರೆ.

ಈ ಕೃತಿಯನ್ನು ಹೊಸ ವಿಧಾನದಲ್ಲಿ ರಚಿಸಿದ್ದೇನೆ. ಪೂರ್ಣಕತೆಯನ್ನು ಮೂವರು ಪ್ರಧಾನ ವ್ಯಕ್ತಿಗಳು ಆತ್ಮಕತೆಯ ರೂಪದಲ್ಲಿ ನಿವೇದಿಸಿಕೊಂಡಿವೆ. ಇದರಿಂದ ನನ್ನ ಕಾದಂಬರಿ ಹೆಚ್ಚು ಪರಿಣಾಮಕಾರಿಯಾಗಿ ಮೂಡಿದೆ ಎಂದು ನನ್ನ ಭಾವನೆ. ಆದರೆ ಹೊಸ ರಚನೆಯಲ್ಲಿ ನಾನು ಸಫಲನೋ ವಿಫಲನೋ ಎಂಬುದನ್ನು ನಿರ್ಧರಿಸಬೇಕಾದವರು ಓದುಗರು.

ಕೃತಿಯನ್ನು ಬರೆದ ನಾನು ಓದುಗರಿಂದ ವಿಮರ್ಶಕರಿಂದ ಬರಬಹುದಾದ ವಿಮರ್ಶೆಯ ರೂಪವನ್ನು ಊಹಿಸಿದ್ದೇನೆ. ನನ್ನ ಕೃತಿಗೆ ಓದುಗರು ಈಯುವ ಹೊಗಳಿಕೆ-ತೆಗಳಿಕೆಗಳೆರಡನ್ನೂ ತೆರದ ಹೃದಯದಿಂದ ಸ್ವಾಗತಿಸುವೆ.

ಆದರೆ ಅನಾಮಧೇಯವಾದ್ದ(ಪತ್ರ ಬರೆವ ಹೆಣ್ಣೆದೆಯವರನ್ನು ಕನ್ನಡಮ್ಮ ಒಪ್ಪಳು. ಧೈರ್ಯವಾಗಿ ಖಂಡಿಸಬೇಕಾದ ಸಂಗತಿ ಏನಿದ್ದರೂ ತಮ್ಮ ವಿಳಾಸಗಳನ್ನಿತ್ತು ಖಂಡಿಸಿ ಬರೆಯಲಿ. ತಪ್ಪಿದ್ದರೆ ಮುಂದಣ ಮುದ್ರಣಕ್ಕೆ ಸರಿಪಡಿಸೋಣ. ಇಲ್ಲವಾದಲ್ಲಿ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವ.

ಈ ಕೃತಿಯನ್ನು ಪ್ರಕಾಶಕರ ಕೈಸೇರಿಸಿದ ಸಾಹಿತಿ ಎಸ್. ಎ. ಗುರುರಾಜಾಚಾರ್ಯರಿಗೂ, ಕೃತಿಯನ್ನು ಓದಿದ ಎಸ್. ಪಿ. ಸುಂದರರಾಜ್‌ರವರಿಗೂ, ಮುನ್ನುಡಿಯನ್ನು ಓದಿ ಸಲಹೆ ಇತ್ತ ಗೆಳೆಯ ಕೆ. ಎಸ್. ಎಂ. ಸ್ವಾಮಿ ಇವರಿಗೂ ನನ್ನ ವಂದನೆಗಳು.

ನನ್ನ ಸಾಹಿತ್ಯ ಕೃಷಿಯ ಬಗ್ಗೆ ತುಂಬಾ ಅಭಿಮಾನಿತರೂ, ನನ್ನ ಹಿತೈಷಿಗಳೂ ಆದ ನಾಡಿನ ಪ್ರಸಿದ್ಧ ಹಿರಿಯ ಸಾಹಿತಿಗಳಾದ ಬಸವರಾಜ

ಕಟ್ಟೀಮನಿ, ತ. ರಾ. ಸು, ನರೇಂದ್ರಬಾಬು, 'ಮರುಳಸಿದ್ಧ'ರಿಗೂ, ನನ್ನ ವಿಜ್ಞಾನದ ದಾಹವನ್ನು ಇಂಗಿಸಲು ಶ್ರಮಿಸುತ್ತಿರುವ ಡಬ್ಲ್ಯು. ಜೆ. ದೇವ ಕುಮಾರರಿಗೂ ನಾನು ಅಭಾರಿ.

ಕೃತಿಯನ್ನು ಹೊರತಂದಿರುವ ಎಂ. ಎಙ್. ಮಹಾದೇವಯ್ಯನವರಿಗೂ, ಸಲಹೆಗಳೊಡನೆ ಸಹಕರಿಸಿದ ಶ್ರೀ ಶಾಮಸಿಂಗ್ ಅವರಿಗೂ ಮುಖಚಿತ್ರ ಕಲಾವಿದರಿಗೂ, ಸಕಾಲದಲ್ಲಿ ಮುದ್ರಿಸಿಕೊಟ್ಟ ಎಂ. ವಿ. ಪಿ. ಪ್ರೆಸ್ಸಿನವರಿಗೂ ನನ್ನ ನೆನಕೆಗಳು.

ಒಂಟಿಯಾಗಿದ್ದ ಜೀವಕ್ಕೆ ಅಂಟುಬಿದ್ದು ಜೀವನದ ಕತ್ತಲು ಬೆಳಕಿನಲ್ಲಿ ಒಂದೇ ಸಮನೆ ನನ್ನೊಡನೆ ದುಡಿಯಬಯಸುವ ಆತ್ಮೀಯ ನಾರಾಯಣ ನಿಗೂ, ನನ್ನ ಏಳಿಗೆಯನ್ನು ವಿಶ್ವಾಸದಿಂದ ಜಾತಕಪಕ್ಷಿಯಂತೆ ನೋಡುತ್ತಿರುವ ಬಂಧುಗಳು, ಆಪ್ತರು, ಪರಿಚಯಸ್ಥರು, ಸಾಹಿತಿಗಳು, ಕವಿಗಳು ಈ ಎಲ್ಲ ಅಸಂಖ್ಯಾತ ಬಳಗಕ್ಕೂ ನನ್ನ ನೆನಕೆಗಳು.

ನಾಡು ನವೋದಯವಾದ ಈ ದಿನದಲ್ಲಿ ಹೊಸ ನಾಡಿನ ಎಲ್ಲ ಕನ್ನಡಿಗ ರಿಗೂ ನನ್ನ ತುಂಬುಹೃದಯದ ದೀಪಾವಳಿಯ ಶುಭಾಶಯಗಳು.

"ಆತ್ಮೋಪನಿಷತ್"
117 ಮಾಡಲ್ ಹೌಸ್,
ರಾಮಾನುಜಾ ರೋಡ್, ಮೈಸೂರು.

—ಎಂ. ಎಸ್. ನಾಗರಾಜ.
ನವೆಂಬರ್, ೧–೫೬.

ಅರ್ಪಣೆ

" ಘೋರ ಕತ್ತಲ ಮಧ್ಯದಲ್ಲೂ ಬೆಳಕಿದೆ
ಸಾವಿನ ಮಧ್ಯದಲ್ಲೂ ಜೀವನವಿದೆ
ಇದನ್ನು ಕಾಣಬೇಕಾದವನು ನೀನು "

—ಎಂದು ಬೋಧಿಸಿ, ಈ ನಿರಾಶಾವಾದಿಯನ್ನು
ಆಶಾವಾದಿಯನ್ನಾಗಿ ಮಾಡಿದ
ಅಂತರಾತ್ಮದೇವನಿಗೆ

—ಎಂ. ಎಸ್. ನಾಗರಾಜ.

ಮೊದಲಿಗೆ—

ನೀನಾರು? ಎಲ್ಲಿಂದ ಏಕೆಬಂದೆ?....

ನಾನು—ಶಾಂತ.

ಶಾಂತ. ಹುಚ್ಚಿ.... ಛೆ! ಅಲ್ಲ.

ಪ್ರೇಮಮಧೂನ್ಮಾದಿನಿ.

'ಪ್ರೇಮ' ಎಂದರೇನು?

Love is God.

ಪ್ರೇಮವೇ ದೇವರು.

ನಾನು ಶಾಂತ, ಶಾಂತ ಹುಚ್ಚಿ! ಹುಚ್ಚಿ!! ಹೊಡಿಯಬೇಡಿ, ಕಲ್ಲು, ಮಣ್ಣು, ಕೊಚ್ಚೆ. ಬೇಡಿ ನನ್ನನ್ನು ಹೊಡೆಯಬೇಡಿ. ಅಯ್ಯೋ! ಬೀದಿಯಲ್ಲಿ ಅಲೆಯುತ್ತಿದ್ದೇನೆ. "ನೀನು ಯಾರು" ಎಂದು ಕೇಳಬೇಡಿ ನಾನು ಪ್ರೇಮ ವೆಂಬ ಮಧು ಕುಡಿದು ಉನ್ಮತ್ತಳಾಗಿರುವೆ. ಅಬ್ಬ ಕಲ್ಲು. ದೊಡ್ಡ ಕಲ್ಲು!! ಹೊಡೆಯಬೇಡಿ. ನಾನು ಹುಚ್ಚಿಯಲ್ಲ, ಅಯ್ಯೋ! ಹಣೆಯ ಮೇಲೆ ಬಿತ್ತು. ಕಲ್ಲು, ರಕ್ತ, ಅಬ್ಬ! ರಕ್ತ ಈ ರಕ್ತ ಎಲ್ಲಿಂದ ಬಂತು?

ನನ್ನ ದೇಹದಿಂದ! ಈ ದೇಹ ಎಲ್ಲಿಂದ ಬಂತು?

ಈ ಪ್ರಪಂಚ ಸೃಷ್ಟಿ ಎಲ್ಲಿಂದ ಆಯಿತು? ಪ್ರಪಂಚಸೃಷ್ಟಿ!

ಸುಂದರಿ ನಿನಗೆ ಎಲ್ಲಿಯದು ಈ ರೂಪು? ರೂಪು; ಸೌಂದರ್ಯ; ಮಾಧುರ್ಯ; ಮನೋಹರತೆ; ಪ್ರಶಾಂತತೆ ಎಲ್ಲಿಂದ ಬಂತು ಇದೆಲ್ಲಾ?

"Beauty is God"....ಹ್ಞೂ Beauty ಇರಲಿ ನೀನೆಲ್ಲಿಂದ ಬಂದೆ?

—ನನ್ನ ತಂದೆ ತಾಯಿಗಳಿಂದ.

ನಿನ್ನ ತಂದೆತಾಯಿಗಳೋ?

ಅವರ ತಂದೆ ತಾಯಿಗಳಿಂದ....ಹೀಗೆಯೇ ಹಾಗಾದರೆ ಅವರ ತಂದೆ ತಾಯಿಗಳು ಯಾರು? ಅವರಿಗೆ ಕಾರಣ?

ನಿನ್ನದು ವಿಚಿತ್ರ ಪ್ರಶ್ನೆ: Adam ಮತ್ತು Eve ಇವರಿಂದ ಇರಬೇಕು.

ಇಲ್ಲ, ಅದು ಕ್ರೈಸ್ತರ ಭಾವನೆ.

ಮತ್ತೆ? ಹಿಂದೂಗಳಲ್ಲಿ???

ಅದೆಲ್ಲ ಬೇಡ ನಾನು ಹೇಳುವುದನ್ನು ಕೇಳು ನಾನು ಬಂದುದು: "ಒಂದು ಗಂಡು ಒಂದು ಹೆಣ್ಣುಗಳು ರುದ್ರಕಾಮದಿಂದ ಮಹೋಗ್ರ ಪ್ರೇಮದಿಂದ ಕೂಡಿದಾಗ, ಇಬ್ಬರೂ ನೋವಿನ ಸುಖ ಅನುಭವಿಸಿದಾಗ ನಾನು ಹುಟ್ಟಿದೆ."

ಇದಕ್ಕೆ ಕಾರಣ?........ಪ್ರಕೃತಿ, ಏತಕ್ಕಾಗಿ?

ಆ ಪ್ರಕೃತಿಯ ತೃಪ್ತಿಗಾಗಿ; ದೀಪ್ತಿಗಾಗಿ ನೀನು ಹುಟ್ಟಿದ್ದು?

ಹೇಳಿದೆನಲ್ಲ ಪ್ರೇಮದಿಂದ.

ಹೌದಾ??........

ಹೌದು.

ನೀನೇ ನೋಡು ಆಕಾಶವನ್ನು ಮೋಡವೂ, ಸಮುದ್ರವನ್ನೂ, ನದಿಗಳೂ, ನಕ್ಷತ್ರಗಳನ್ನೂ, ಚಂದ್ರನೂ ಚುಂಬಿಸುತ್ತಲಿಲ್ಲವೆ?

ಈ ಚುಂಬನಕ್ಕೆ ಕಾರಣ?

ಪ್ರೇಮ.

Love.

ಕಾದಲ್.

ವಿಜ್ಞಾನಿಗಳು ಈ ಬಗ್ಗೆ ಏನೇಳಿದ್ದಾರೆ.

"ಪ್ರೇಮದ ಕೈಕೊಂಬೆಗಳು ನಾವು."

ಇದು ಅವರ ಉತ್ತರ.

ಹಾಗಾದರೆ ಪ್ರೇಮ ಯಾವುದು? ಎಂತಹದು??

ಪ್ರೇಮವೇ ದೇವರು. ಅದು ನಿತ್ಯವಾದುದು; ಅಮರವಾದುದು.

Love is God.

ಹಾಗಾದರೆ ನೀನು? ನಾನು ಬಂದುದು ಪ್ರೇಮದಿಂದ. ನಾನು ಬಂದುದು ಪ್ರೇಮಕ್ಕಾಗಿ.

ನಾನು........ದೇವದೇವನ ಒಂದು ಮಹಾಪ್ರೇಮದ ಅಣು ನಾನೂ ಒಂದು ಪ್ರೇಮ; ದೇವರು.

ಮೊದಲ ರಾತ್ರಿ

ಕನ್ನಡಿ ಕೈತಪ್ಪಿ ಹನ್ನೆರ್ಡ ಚೂರಾಗಿ
ಹೆಣ್ಣಿನ ಮನವು ಎರಡಾಗಿ ದಾಳಿಂಬೆ
ಹಣ್ಣಾದರೇನು ಫಲವಿಲ್ಲ.

—ಜನಪದಗೀತೆ.

ಡಾ|| ಪ್ರಕಾಶ್ ಮತ್ತು ಶಾಂತಾ ಇವರಿಬ್ಬರ ಮದುವೆ ನೂರು ದಿನದಲ್ಲೇ " ಪಶ್ಚಿಮವಾಹಿನಿ "ಯಲ್ಲಿ ಮುಗಿಯಿತು.

" ಪ್ರಸ್ತ "ದ ಶಾಸ್ತ್ರವನ್ನೂ ಈಗಲೇ ಮುಗಿಸಿಬಿಡುವುದು ಒಳ್ಳೆಯದು ಎಂದು ಶಾಸ್ತ್ರಿಗಳು ಹೇಳಿದ್ದರಿಂದ ಪ್ರಸ್ತದ ಶಾಸ್ತ್ರವನ್ನೂ ಆ ದಿನವೇ ಮುಗಿಸಲು ಸಿದ್ಧತೆಗಳೆಲ್ಲಾ ನಡೆದುವು.

ಪ್ರಕಾಶ್ ಮತ್ತು ಶಾಂತಾ ಇಬ್ಬರೂ ಮೊದಲ ಭಾರಿಗೆ ಕೂಡುವ ಸುದಿನ ಅಂದು. ತಮ್ಮ ಭವ್ಯ ಭವಿಷ್ಯದ ಬಾಳಿಗೆ ಪೀಠಿಕೆ ಹಾಕಲಿರುವ ಸುಹಾದಿನ ಅದು. ಪಕ್ಕದಲ್ಲಿ ಸಪ್ಪೆ ಮುಖಹೊತ್ತು ಕುಳಿತಿರುವ ಶಾಂತಾಳನ್ನು ಕುರಿತು " ಶಾಂತಾ " ಎಂದ ಪ್ರಕಾಶ್.

ನಿರುತ್ತರ !

" ಶಾಂತಾ " ಮತ್ತೆ ಅದೇ ಕೂಗು.

ಮತ್ತೆ ನಿರುತ್ತರ ! !

ಮೌನ.

" ಇದೇನಿದು " ಎಂದುಕೊಂಡು ಪ್ರಕಾಶ್ ಶಾಂತಳ ಬಳಿಗೆ ಬಂದು " ಶಾಂತ " ಎಂದು ಮೃದುವಾಗಿ ಕೂಗಿದ.

ನಿರುತ್ತರವೇ ಶಾಂತ ಕೊಟ್ಟ ಉತ್ತರ.

" ಮಾತನಾಡುವುದಿಲ್ಲವೇ ಶಾಂತ ? "

" ಮಾತನಾಡದೆ ಏನು ! "

ಪ್ರಕಾಶನಿಗೆ ಹೋದಜೀವ ಮತ್ತೆ ಬಂದಂತಾಯಿತು. ಮೆಲ್ಲನೆ ಅವಳ ಪಕ್ಕದಲ್ಲೇ ಕುಳಿತು, ಅವಳ ಎರಡು ಕೈಗಳನ್ನೂ ಹಿಡಿದು,

" ನನ್ನೊಡನೆ ಕೋಪವೇ ? "— ಎಂದ.

" ಇಲ್ಲ ಖಂಡಿತ ಇಲ್ಲ. "

" ಮಾತನ್ನೇಕೆ ಆಡಲಿಲ್ಲ ? "

" ಯಾವುದೋ ಯೋಚನೆಯಲ್ಲಿದ್ದೆ "

" ಏನು ಯೋಚನೆ ? "

" ಯಾವುದೋ ಯೋಚನೆ---ನಿಮ್ಮೊಡನೆ ಹೇಳುವಂತಹದಲ್ಲ "

" ನನ್ನೊಡನೆ ಹೇಳದೆ ಮತ್ತಾರೊಡನೆ ಹೇಳಬೇಕೆಂದಿರುವೆ ಶಾಂತಾ ?"

" ಯಾರೊಡನೆ....ಹೇ....ಳು....ವೆನೋ ದೇವರೇ ಬಲ್ಲ ? "

---ಈ ಮಾತನ್ನಾಡುವಾಗ, ಅವಳ ಹೃದಯದಲ್ಲಿ ಯಾವುದೋ ನೋವು ಇತ್ತು.!

" ಶಾಂತ " ಎಂದು ಅವಳ ಹತ್ತಿರ ಸೇರಿ ತನ್ನೆಡೆಗೆ ಅವಳನು ಎಳೆದುಕೊಂಡ.

" ಹಾ !....ಹಾ !....ನಿಮ್ಮ ಕಾಲಿಗೆ ಬೀಳುತ್ತೇನೆ. ದಯವಿಟ್ಟು ನನ್ನನ್ನು ಮುಟ್ಟಬೇಡಿ, ಮುಟ್ಟಬೇಡಿ ಸ್ವಾಮಿ "

—ಪ್ರಕಾಶನಿಗೆ ಸಿಡಿಲು ಬಡಿದಂತಾಯಿತು ಈ ಮಾತು ಕೇಳಿ.

" ಇದೇಕೆ ಶಾಂತ ಈ ರೀತಿ ಆಡುತ್ತಿರುವೆ ?"

" ನಿಮ್ಮನ್ನು ಬೇಡಿಕೊಳ್ಳುತ್ತೇನೆ. ದಯವಿಟ್ಟು ನನ್ನನ್ನು ಮುಟ್ಟಬೇಡಿ, ಅಷ್ಟು ಮಾಡಿಕೊಡಿ, ಈ ಪಾಪಿಯನ್ನು ಕ್ಷಮಿಸಿ, ನಾನು ನಿಮಗೆ ಯೋಗ್ಯಳಲ್ಲ."

—ಎಂದು ಶಾಂತ ಪ್ರಕಾಶನ ಕಾಲಮೇಲೆ ಬಿದ್ದು ಅಳುತ್ತಾ ಕೇಳಿ ಕೊಂಡಳು.

ಪ್ರಕಾಶ್ ಶಾಂತಳನ್ನು ಮೆಲ್ಲಗೆ ಹಿಡಿದೆತ್ತಿ.

" ಇದೇನು ಶಾಂತ, ಏಕೆ ಇಷ್ಟು ಅಳುವೆ ? "—ಎಂದ.

" ಏಕೆ ಎಂದು ಕೇಳಬೇಡಿ, ಅದು ನನ್ನ ಹೃದಯವನ್ನೇ ಇರಿಯುತ್ತದೆ. ನನಗಾಗಿ ಅಷ್ಟು ಮಾಡಲಾರಿರಾ ? "

" ಶಾಂತಾ........ನೀನೆಷ್ಟು ಸುಂದರಿ ಬಲ್ಲೆಯಾ ? ಇದು ನಮ್ಮಿಬ್ಬರ ಜೀವನದಲ್ಲೇ ಮೊದಲ ರಾತ್ರಿ—ಇಡೀ ಬಾಳಿಗೇ ಒಂದೇ ಒಂದು ದಿನ. ಈ ದಿನವೂ ಹೀಗೆ ಆಡುತ್ತಿರುವೆ ಏಕೆ ? "

ಹೌದು, ನಿಜಕ್ಕೂ ಶಾಂತ ಸುಂದರಿಯಾದ ಹೆಣ್ಣು. ಅವಳ ದೇಹದ ಬಣ್ಣ, ಅವಳ ಆ ಸುಂದರ ಮುಖ, ಆ ಸುಂದರ ಅಂಗಗಳ ಸೌಷ್ಠವತೆ,

ಎಂತಹ ಬ್ರಹ್ಮಚಾರಿಯ ಮನವನ್ನು ಬೇಕಾದರೂ ಕಲಕಬಲ್ಲುದು---ಅಂತಿದ್ದುವು.

" ನೀವು ಹೇಳುವ ಮಾತು ನಿಜ, ಆದರೆ ಈ ಪಾಪಿಗೆ ಭಾಗ್ಯವಿಲ್ಲ, ನನಗಾಗಿ ಅಷ್ಟು ಮಾಡಲಾರಿರಾ ? ನನ್ನ ಉದ್ಧಾರ ಮಾಡಲಾರಿರಾ ? "

" ಇದೇನು ಶಾಂತ ನೀನು ಕೇಳುವ ಪ್ರಶ್ನೆ. ಇದಕ್ಕಾಗಿಯೇ ನಾನು ನಿನ್ನ ಕೈಹಿಡಿದುದು ? ಶಾಂತಾ, ನಿನಗಾಗಿ ಈ ಪ್ರಾಣವನ್ನು ಬೇಕಾದರೂ ಕೊಡಬಲ್ಲೆ."

" ಹಾಗಿದ್ದರೆ ದಯವಿಟ್ಟು ನನ್ನ ಇಚ್ಛೆಯನ್ನು ನೆರವೇರಿಸಿಕೊಡಿ."

" ಏನು ನಿನ್ನ ಇಚ್ಛೆ ? "

" ನನ್ನನ್ನು ಮುಟ್ಟಬೇಡಿ, ನೀವು ಸುಖವಾಗಿ ಮಲಗಿ, ಇಷ್ಟೇ ನಿಮ್ಮ ದಾಸಿ ನಿಮ್ಮನ್ನು ಕೇಳಿಕೊಳ್ಳುವುದು."

ಪ್ರಕಾಶನ ಜೀವನದ ಮೊದಲ ಸುದಿನ, ಬಹುದಿನದಿಂದ ಬಯಸುತ್ತಿದ್ದ 'ಮೊದಲ ರಾತ್ರಿ' ಅವರ ರಕ್ತದ ಕಣಕಣವೂ ಸಿದ್ಧವಾಗಿ, " ಯಾವ ಘಳಿಗೆಯಲ್ಲಿ " ? ಎಂದು ಕೇಳುತ್ತ ನಿಂತಿವೆ. ನರನರಗಳೂ ಮಿಡಿಮಿಡಿದು ಕಾಡುತ್ತಿವೆ. ಉದ್ವೇಗ ಉದ್ರೇಕ ಎರಡೂ ಹೆಚ್ಚುತ್ತಿದೆ. ಹಸಿದ ದೇಹ ಬಯಸುತ್ತಿದೆ. ಮುಂದೆ ಮೂರು ಲೋಕಗಳನ್ನೂ ಮೋಹಿಸುವ ಸುಂದರಿ ಅಳುತ್ತಿದ್ದಾಳೆ, ಕಾರಣ ? ಮನಸ್ಸು ಒಪ್ಪದು, " ಇದಕ್ಕಾಗಿನಾನು ಇವಳನ್ನು ಮದುವೆಯಾದೆನೆ ? " ಎಂದು ಮಗದೊಂದು ಮನಸ್ಸು ಹೇಳುತ್ತಿದೆ.

" ಆಗಲಿ ಶಾಂತ, ನೀನು ಏನೋ ಬಳಲಿದ್ದೀಯೆ ಮಲಗು "---ಎಂದು ಶಾಂತಳನ್ನು ಹೊದ್ದಿಸಿ ಮಲಗಿಸಿ ತಾನು ಯೋಚಿಸುತ್ತ ಕುಳಿತ ಪ್ರಕಾಶ.

" ಇದೆಂತಹ ಮದುವೆ ? ಹೆಣ್ಣನ್ನು ನೋಡಿದರೆ ಇನ್ನಿಲ್ಲದ ರೂಪು, ರೂಪು ಏತಕ್ಕೇ ? ಬಯಸಿದ ಸುಖವಿಲ್ಲದ ಬಾಳು ಏಕೆ ! "

" ದುಡುಕಬೇಡ ಪ್ರಕಾಶ್, ನಿನ್ನಂತೆಯೇ ಅವಳೂ ಮನುಷ್ಯಳು. ಅವಳಲ್ಲೂ ರಾಗ-ದ್ವೇಷಗಳಿವೆ. ಆದರೆ ಯಾವುದೋ ಕಾರಣದಿಂದ ಅವಳು ಹೀಗೆ ಮಾತಾಡಿದ್ದಾಳೆ. ಕಾರಣ ತಿಳಿ, ಅನಂತರ ದಾಂಪತ್ಯ ಜೀವನ ಇದ್ದೇ ಇದೆ."

" ಹೇ, ಡಾಕ್ಟರ್ ! "ನಾನೊಬ್ಬ ಆದರ್ಶವಾದಿ", ಎಂದು ಕೊಚ್ಚುತ್ತಿದ್ದೆಯಲ್ಲಾ, ಈಗ ನಿನ್ನ ಆದರ್ಶ ತೋರು, ಪಶುಗಳೂ ದೇಹತೃಪ್ತಿ ಬಯಸುತ್ತವೆ. ನೀನೂ ಬಯಸುತ್ತೀ, ಮೊದಲು ಆ ಹೆಣ್ಣು ಆ ರೀತಿ ಆಡಲು ಕಾರಣ ತಿಳಿ."

" ಅವಳು ಅದೇಕೆ ಹಾಗೆ ವರ್ತಿಸಿದಳು, ಅವಳು ಹೆಣ್ಣಲ್ಲವೆ ? ಮತ್ತೆ ದಾರಿ ತಪ್ಪಿರುವಳೆ ? ಇರಬಹುದೇನೋ ಶಾಸ್ತ್ರಿಗಳು ಮೋಸಮಾಡಿದರೆ ? ಅವರು ಛೆ ! ಎಂದಿಗೂ ಇರಲಾರದು. "

" ನೋಡೋಣ ಕೈಹಿಡಿದಿದ್ದೇನೋ ಆಯಿತು, ಅವಳು ಎಂತಹವಳಾದರೂ ನನ್ನವಳೇ, ಅನುಭವಿಸಲೇ ಬೇಕು. ಅವಳ ಮನಸ್ಸಿನ ಈ ಬಗೆಯ ಬದಲಾವಣೆಗಳಿಗೆ ಕಾರಣಗಳೇನು ಕಂಡು ಹಿಡಿಯಲೇಬೇಕು. ಸೈಕಾಲಜಿ ತಿಳಿದವನು ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದೆ. ಈಗ ಶಾಂತಳ ಮನಸ್ಸನ್ನು ಅರಿತು ನಡೆಯಬೇಕು."

" ಶಾಂತ ಅದೇಕೆ ಹಾಗೆ ವರ್ತಿಸಿದಳು, ಶಾಂತ....ನನ್ನ ಬಾಳ ಗೆಳತಿ, ಶಾಸ್ತ್ರಿಗಳೇ ಮೋಸಮಾಡಿರುವರೆ ? ಶಾಂತಾ ಹುಚ್ಚಿಯೇ ? ಛೆ ! ಇರಲಾರದು ಬಂಗಾರದಂತಹ ಹೆಣ್ಣು ಹುಚ್ಚಿಯಾಗಲು ಸಾಧ್ಯವಿಲ್ಲ."

" ಹುಚ್ಚಿ ಅಲ್ಲದೆ ಮತ್ತೇನು ? ಮತ್ತೇನು ? ? "

" ಅಭಿಸಾರಿಕೆ ? ಛೇ ! ಎಂತಹ ಕೆಟ್ಟ ನಾಲಿಗೆ. "

" ಕಾಲುಜಾರಿದವಳೆ ? ಛೆ, ಸುಂದರಿಯನ್ನು ನಾನು ಈ ರೀತಿ ಹೇಳಬಾರದು. ಎಂತಹ ಕೆಟ್ಟ ಮನಸ್ಸು ನನ್ನದು ! "

" ಏನಾದರಾಗಿರಲಿ ಎಂಥಾದ್ದಾದರೂ ಇವಳ ಬಾಳನ್ನು—ಈ ರೂಪಸಿಯ ಬಾಳನ್ನು ಸರ್ವಾಂಗಸುಂದರವಾಗಿ ಈ ಆದರ್ಶವಾದಿ ಮಾಡಿಯೇ ತೀರುತ್ತಾನೆ ! " ಹಾಗೆಯೇ ಕುಳಿತೇ ಇದ್ದ—ಯೋಚಿಸುತ್ತಾ ಪ್ರಕಾಶ್.

ಶಾಂತಳಿಗೆ ನಿದ್ರೆಬಾರದು, ಯೋಚನೆಗಳು ಮಾತ್ರ ಸುಳಿಯುತ್ತಿವೆ.

ಶಾಂತಳ ಯೋಚನೆ ಕ್ಷಣ ಕ್ಷಣಕ್ಕೂ ಹೆಚ್ಚತೊಡಗಿತು. ಯೋಚನೆ ಅಲೆ ಅಲೆಯಾಗಿ ಬಂದು ಅವಳ ತಲೆಯನ್ನು ಅಪ್ಪಳಿಸತೊಡಗಿತು. ಸುಳಿ ಸುಳಿಯಾಗಿ ಸುತ್ತತೊಡಗಿತು. ಬೆಟ್ಟದಿಂದ ಝಾಡಿಸಿ ಝಾಡಿಸಿ ಬಂದು ಬೀಳುವ ನದಿಯಂತೆ ಭೋರ್ಗರೆಯುತ್ತಾ ಪ್ರವಹಿಸತೊಡಗಿತು

ಶಾಂತ ಬಿಕ್ಕಿ ಬಿಕ್ಕಿ ಅತ್ತಳು. ತನ್ನ ಈ ಅಳುವಿಗೆ ಕಾರಣ ಯಾವುದು? ಉತ್ತರಿಸಬೇಕೆ? 'ಮನಸ್ಸೆ ನಿನಗೇ ನನ್ನ ಕತೆ ಹೇಳುತ್ತೇನೆ, ಯಾವುದು ಆ ಕತೆ? ಕೇಳುವೆಯಾ ಕೇಳು,' ಶಾಂತಾ ಯೋಚನೆಯ ತೊಡಕಿನಲ್ಲಿ ಸಿಕ್ಕಿದಳು.

ಆ ಯೋಚನೆ ಯಾವುದು?..........

ಶಾಂತ

ಕೆಂಪಾನೆ ಹೆಣ್ಣಿಗೆ ಸಂಪಿಗೆ ಹೂವಿಗೆ
ಅಂತರದಲ್ಲಿರುವ ಗಜನಿಂಬೆ ಹಣ್ಣಿಗೆ
ಎಂಥೋರು ಬಾಯ ಬಿಡುವ್ರೋರ ?

—ಜನಪದಗೀತೆ

ಶಾಂತ—ಇದು ನನ್ನ ಹೆಸರು. ನನ್ನ ತಂದೆ ಎಸ್. ಆರ್. ಶಾಮಣ್ಣ ಇವರು ಪ್ರೈಮರಿ ಸ್ಕೂಲ್ ಮಾಸ್ಟರ್, ಸರಿ ನಾನು ಬಡವನ ಮಗಳು ಎಂದು ಹೇಳಬೇಕಾದ್ದೇ ಇಲ್ಲ. ನಾನು ಅಪ್ಸರೆಯಷ್ಟೇ ಸುಂದರಿ. ನನ್ನ ರೂಪಿಗೆ ತಕ್ಕಂತಹ ಬುದ್ಧಿಶಕ್ತಿಯನ್ನು ದೇವರು ದಯಪಾಲಿಸಿದ್ದ. ಇದರಿಂದಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಫಸ್ಟ್ ರ್‍ಯಾಂಕ್ ತೆಗೆದುಕೊಂಡೆ: ಆಗ ನನಗೆ ಹದಿನಾರು ವರ್ಷ. ಹಣವಿದ್ದಿದ್ದರೆ ತಂದೆ ನನ್ನ ಮದುವೆ ಮಾಡಿ ಬಿಡುತ್ತಿದ್ದರು. ಹಣವಿಲ್ಲದ ಕಾರಣ ನನ್ನ ತಾಯಿ ರಮಾಬಾಯಿ ನನ್ನ ಕಡೆ ನಿಂತು ತಂದೆಯ ಜೊತೆ ವಾದಿಸಿದ ಫಲವಾಗಿ ನಾನು ಕಾಲೇಜ್ ಮೆಟ್ಟಲನ್ನು ಹತ್ತಿದೆ.

ಇಲ್ಲಿಂಧ ನನ್ನ ಜೀವನದ ಎರಡನೇ ಅಧ್ಯಾಯ ಪ್ರಾರಂಭವಾಯಿತು.

ನಾನು ಆದರ್ಶವಾದಿನಿ. ಒಳ್ಳೆಯ ಧ್ಯೇಯಗಳನ್ನು ಮುಂದಿಟ್ಟುಕೊಂಡು ಕಾಲೇಜ್ ಹತ್ತಿದೆ.

ಮೊದಲಸಾರಿ ಕ್ಲಾಸ್ ಪರೀಕ್ಷೆಯಲ್ಲಿ ನಾನು ಮೊದಲಿಗಳಾಗಲು ಸಾಧ್ಯವಾಗಲಿಲ್ಲ. ನನ್ನ ಸ್ಥಾನವನ್ನು ಸುರೇಶ್ ಹೊಡೆದುಕೊಂಡ. ಅಲ್ಲಿಯ ವರೆಗೂ ನಾನು ಅವನ ಮುಖ ಸಹ ನೋಡಿರಲಿಲ್ಲ. ಅಂದಿನಿಂದ ಅವನನ್ನು ಕಂಡರೆ ದ್ವೇಷ ಮೂಡತೊಡಗಿತು.

ದಿನಗಳು ಉರುಳಿತು. ಜೂನಿಯರ್ ಇಂಟರ್‌ನ ಪ್ರೊಮೋಷನಲ್ ಪರೀಕ್ಷೆ ಕೂಡ ನಡೆಯಿತು. ಅದರಲ್ಲೂ ಅವನೇ ಮೊದಲಿಗ ಎಲ್ಲಾ ಟೆಸ್ಟ್‌ಗಳಲ್ಲೂ ಅವನೇ ಮೊದಲಿಗ. ನಾನು ಎರಡನೆಯವಳಾಗುತ್ತಿದ್ದೆ. ಇದರಿಂದ ನಾನು ಅವನನ್ನು ತುಂಬಾದ್ವೇಷಿಸಲು ಆರಂಭಿಸಿದೆ. ಸೀನಿಯರ್ ಇಂಟರ್‌ಗೆ ಸೇರಿದ ವರುಷ ಅದು. ಇಷ್ಟು ದಿನವೂ ನಾನು ಯಾರನ್ನು ದ್ವೇಷಿಸುತ್ತಿದ್ದೆನೋ ಅವನನ್ನು ಪ್ರೀತಿಸಲಾರಂಭಿಸಿದೆ. ಇದಕ್ಕೆ ಕಾರಣ ವಯಸ್ಸೇ ಇರಬೇಕು. ಸುರೇಶ್ ಸುಂದರ. ಹುಬ್ಬಿನಂತಹ ಚಿಗುರುಮೀಸೆ ಅವನದು.

ಹೇಮವರ್ಣನು ಅವನು ; ಕೋಮಲಾಂಗನು ಅವನು ; ಜಗವೆಲ್ಲ ಮೋಹಿಸ ತಕ್ಕ ಚೆನ್ನಿಗನು ಅವನು.

ಸಾಮಾನ್ಯವಾಗಿ ಹೆಣ್ಣುಗಳ ರೂಪು ಗಂಡುಗಳಿಗೆ ಚೆನ್ನ ; ಗಂಡುಗಳ ರೂಪು ಹೆಣ್ಣುಗಳಿಗೆ ಚೆನ್ನ. ಆದರೆ ಇವನ ರೂಪು ಗಂಡು ಹೆಣ್ಣು ಎರಡನ್ನೂ ಮೋಹಿಸುತ್ತಿತ್ತು........

ಇತ್ತೀಚೆಗೆ ನಾನು ಸಮಯ ಸಿಕ್ಕಿದಾಗಲೆಲ್ಲಾ ಅವನನ್ನು ನೋಡಲು ಪಕ್ರಮಿಸಿದೆ. ಅವನನ್ನು ನೋಡದೆ ಹಿಂತಿರುಗಿದ ದಿನ ಮನಸ್ಸಿಗೆ ಶಾಂತಿ ಇರುತ್ತಿರಲಿಲ್ಲ. ಕಾಂತೆಯರ ಕನಸಾಗಿದ್ದ ಅವನು.

ಇತ್ತೀಚೆಗೆ ಅವನನ್ನು ಬಹಳ ನೋಡಲು ಪ್ರಾರಂಭಿಸಿದ್ದೆ. ಆದರೆ ಆ ವ್ಯಕ್ತಿ ಮಾತ್ರ ನನ್ನನ್ನು ನೋಡುತ್ತಿರಲಿಲ್ಲ.

ಕೆಲವು ದಿನ ' ಟೆನ್ನಿಸ್ ' ಆಟ ನೋಡುವ ನೆಪದಿಂದ, ಟೆನ್ನಿಸ್ ಆಡುವ ಆತನನ್ನೇ ನೋಡುತ್ತಾ ನಿಂತು ಕಾಲ ತಳ್ಳುತ್ತಿದ್ದೆ.

ಈ ನಮ್ಮ ಕಾಲೇಜಿನಲ್ಲಿ ಅಂತರ ಕಾಲೇಜ್ ಕನ್ನಡ ಚರ್ಚಾಸ್ಪರ್ಧೆಯನ್ನು ಏರ್ಪಡಿಸಿದ್ದರು. ನಮ್ಮ ಕಾಲೇಜಿನ ಪ್ರತಿನಿಧಿಗಳು ನಾನು ಮತ್ತು ಸುರೇಶ್ ಎಂದು ಇಡೀ ಕಾಲೇಜಿಗೆ ತಿಳಿದಿತ್ತು. ಅಂದು ಭಾನುವಾರ ಚರ್ಚೆ ಸಂಜೆ ಐದು ಘಂಟೆಗೆ. ಜನರೆಲ್ಲರೂ ಬಂದಿದ್ದರು. ಸ್ಪರ್ಧಿಗಳೆಲ್ಲರೂ ಬಂದಿದ್ದರು. ಆದರೆ ಸುರೇಶ್ ಬಂದಿರಲಿಲ್ಲ. ನಾನು ಅವನಿಗಾಗಿ ಕುಳಿತಲ್ಲೇ ಹುಡುಕಿದೆ. ಆದರೆ ಸಿಗಲಿಲ್ಲ. ' ರೂಪು, ಬುದ್ಧಿ ಎರಡಿದ್ದರೆ ಸಾಕೆ ? ಇಷ್ಟು ಜನರ ಮುಂದೆ ಮಾತಾಡಲು ಎದೆಯೂ ಬೇಕು. ಎಲ್ಲೋ ಹೆಣ್ಣಿಗ ' ಎಂದುಕೊಂಡು ತೆಪ್ಪನಾದೆ. ಚರ್ಚೆ ಪ್ರಾರಂಭವಾಯಿತು. ಕೆಲವರು ಮಾತಾಡಿದ ನಂತರ ಅಧ್ಯಕ್ಷರು ಸುರೇಶನ ಹೆಸರನ್ನು ಕರೆದರು. ಸಭೆಯ ಮಧ್ಯದಿಂದ ಒಬ್ಬ ಖಾದಿಜುಬ್ಬ, ಖಾದಿ ಪಯಿಜಾಮ ಹಾಕಿದ್ದ (ಸಾಹಿತಿ !) ಯುವಕ ಓಡಿ, ಓಡಿ ಬಂದು ವೇದಿಕೆಯನ್ನು ಹತ್ತಿದ. ಆಗ ಆ ವ್ಯಕ್ತಿ ಸುರೇಶ್ ಎಂದು ತಿಳಿದೆ. ದಿನವೂ ಸೂಟ್ ಧರಿಸುತ್ತಿದ್ದ ಈ ವ್ಯಕ್ತಿ ಇಂದು ಖಾಧಿ ಧರಿಸಿ ಗುರುತು ಸಿಗದಂತೆ ಇದ್ದ. ಚರ್ಚೆಗೆ ಪ್ರಾರಂಭಿಸಿದ. ಅಬ್ಬ ! ವಾಗ್ದೇವಿಯ ಮಗ ನಾನು ಎಂದು ಹೇಳಿಕೊಳ್ಳುವಂತೆ ಮಾತಾಡಿದ. ಪ್ರತಿಯೊಂದು

ಮಾತೂ ಅತಿಸ್ಫುಟವಾಗಿ, ಮನೋಹರವಾಗಿದ್ದುವು. ಅವನ ಕಂಠ ದೇವಾಲಯದ ಕಂಚಿನ ಗಂಟೆಯಂತೆ ಇತ್ತು ಅವನ ಆ ಮಾತಿನ ವೇಗ, ಅಬ್ಬ ! ; ಆ ವೇಗಕ್ಕೆ ಅವನ ನಾಲಿಗೆ ಮರದ್ದಾಗಿದ್ದರೆ, ಮುರಿದುಹೋಗುತ್ತಿತ್ತು. ಕಬ್ಬಿಣದ್ದಾಗಿದ್ದರೆ ಸವೆದು ಹೋಗುತ್ತಿತ್ತು. ಸಭೆಯಲ್ಲಿ ಮಧ್ಯೆ ಮಧ್ಯೆ ಜನರು ' ಹಿಯರ್ ' " ಹಿಯರ್ " ಎಂದು ಕೂಗುತ್ತಿದ್ದರು. ಅವನ ಚರ್ಚೆ ನನ್ನೆಡೆಗೆ ಅತಿ ಮನೋಹರವಾಗಿ ಅಲೆ ಅಲೆಯಾಗಿ, ಪುಂಖಾನುಪುಂಖವಾಗಿ ಹಾಲಲ್ಲಿ ಹೂತೇಲಿ ಬರುವಂತೆ ಬರುತ್ತಿತ್ತು. ವಿಶ್ವದ ಸಾಹಿತ್ಯ ಅವನ ಐದು ನಿಮಿಷದ ಚರ್ಚೆಯಲ್ಲಿ ಕ್ರೋಢೀಕೃತವಾಗಿತ್ತು. ಮಧ್ಯೆ ಮಧ್ಯೆ ಜನರನ್ನು ನಗಿಸುತ್ತಿದ್ದ. ಅಳಿಸುತ್ತಲೂ ಇದ್ದ. ಇದ್ದಕಿದ್ದಂತೆಯೇ ಅಧ್ಯಕ್ಷರು ' ಬೆಲ್ ' ಮಾಡಿದರು. ।ಮಿಂಚಿನಂತೆ ಬಂದು ಮಿಂಚಿನಂತೆ ಸುರೇಶ್ ಮಾಯವಾದ.....

ನಾನು ಮಾತಾಡಿದೆ. ಆದರೆ ಅವನ ವಾಕ್ ಪ್ರತಿಭೆಯಮುಂದೆ ನನ್ನದು ಏನು ? ಏನು ?

ಸೂರ್ಯನ ಮುಂದೆ ಸೊಡರೇ ? — ?

ಚರ್ಚೆಯ ತೀರ್ಪುಗಾರರ ತೀರ್ಪಿನಂತೆ ಸುರೇಶನಿಗೆ ಮೊದಲ ಬಹುಮಾನವೂ, ನನಗೆ ವಿಶೇಷ ಬಹುಮಾನವೂ, ನಮ್ಮ ಕಾಲೇಜಿಗೆ ಪರ್ಯಾಯ ಪಾರಿತೋಷಕವೂ ದೊರೆತುವು.

ಎಲ್ಲರೂ ಮನೆ ಕಡೆ ಹೊರಟರು.

ನಾನೂ ಹೊರಟೆ. ಘಂಟೆ ಒಂಭತ್ತು. ಸಾಲದ್ದಕ್ಕೆ ಮಳೆ ಬೇರೆ ಬೀಳುತ್ತಿತ್ತು. ಮನೆಕಡೆ ನಡೆಯಲಾರದೆ ನಡೆಯುತ್ತಿದ್ದೆ. ಮುಂದೆ ಸೈಕಲ್ ಹಿಡಿದು ಯಾರೋ ಹತ್ತಿರ ಇರುವಂತೆ ಭಾಸವಾಯಿತು ಆ ಕತ್ತಲೆಯಲ್ಲಿ. ' ಯಾರು ? ' ಎಂದಿತು ಆ ವ್ಯಕ್ತಿ ಧ್ವನಿ ಸುರೇಶನದೇ ಆಗಿತ್ತು. ಸುರೇಶ್ ನನ್ನೆಡೆಗೆ ಬ್ಯಾಟರಿ ಬಿಟ್ಟು " ನೀವಾ, ಸಾರಿ, ಸಾರಿ " ಎಂದ

" ಕನ್‌ಗ್ರಾಜುಲೇಷ್ "

" ಯಾವುದಕ್ಕೋ "

" ಮೊದಲ ಬಹುಮಾನ ಗಿಟ್ಟಿಸಿದ್ದಕ್ಕೆ "

" ಅದೆಲ್ಲಾ ನಿಮ್ಮ ನಿಜ ಪ್ರತಿಭೆಯಿಂದ. ನೀವು ಸೂರ್ಯನಂತೆ, ನಾವು ಸೂರ್ಯನ ಮುಂದೆ ಒಂದು ಮುರುಕು ಕನ್ನಡಿಯ ಚೂರು ನಮಗೆ ಸ್ವಪ್ರಕಾಶವಿಲ್ಲ. ಸೂರ್ಯನಂತಹ ನಿಮ್ಮಂತಹವರಿಂದ ಬೆಳಕು ನನ್ನ ಮೇಲೆ ಬಿದ್ದರೆ ಆಗ ನಾನು ಪ್ರಕಾಶಿಸುವುದು "

" ನಿಮ್ಮ ಬಹುಮಾನಕ್ಕೂ, ನಮಗೂ, ನಿಮ್ಮ ಮಾತಿಗೂ ಎಲ್ಲಿಗೆ ಎಲ್ಲಿಯ ಸಂಭಂಥ. "

" ಕ್ಷಮಿಸಿ, ನಾನು ಪರ್ಯಾಯ ಪಾರಿತೋಷಕದ ಬಗ್ಗೆ ಮಾತಾಡುತ್ತಾ ಇರುವರೆಂದು ತಿಳಿದೆ. ನಿಂತೇಬಿಟ್ಟರಲ್ಲ. ಮನಗೆ ಹೋಗ-ವುದಿಲ್ಲವೆ ? ಮಳೆ. ಛತ್ರಿ ಬೇಕಾದರೆ ತೆಗೆದುಕೊಂಡು ಹೋಗಿ. ನಾಳೆ ತಂದು ಕೊಟ್ಟರಾಯಿತು "

" ನೀವು ನೆನೆಯ ಬೇಕಲ್ಲ "

" ಪರವಾಗಿಲ್ಲ "

" ಛತ್ರಿ ಹಿಡಿದು ಮನೆಯವರೆಗೂ ಬಂದು ನನ್ನನ್ನು ಬಿಟ್ಟು ಹೋಗಬಹುದಲ್ಲಾ. "

" ಆಗಬಹುದು. ಹೆದರಿಕೆ ಇರಬೇಕು........ಎಳೆ........ಮಗು "

' ಅಬ್ಬ ! ಎಂತಹ ಮಾತು ' ಎಂದುಕೊಂಡೆ. ಅವನ ಜೊತೆ ಮಾತಾಡುವುದೇ ಬೇಕಿತ್ತು. ಗಾಳಿಬಂದಾಗ ತೂರಿಕೊಳ್ಳುವ; ಯೋಚನೆ ಮಾಡಿದೆ.

ಇಬ್ಬರೂ ಹೊರಟೆವು. ಅವನು ನನ್ನನು ಹೊಗಳಿದ. ನಾನು ಅವನನ್ನು ಹೊಗಳಿದೆ.

ಇಬ್ಬರೂ ಬಲುದಿನದ ಪರಿಚಯಸ್ಥರಂತೆ ಮಾತನಾಡಿದೆವು.

ಕೆಲವೊಮ್ಮೆ ಅವನ ಮೈ ನನ್ನ ಮೈಗೆ ಸೋಕುತ್ತಿತ್ತು. ಮೊದಮೊದಲು " ಷಾಕ್ " ಹೊಡೆದಂತೆ.ಆದರೂ ಅನಂತರ ಸರಿ ಹೋಯಿತು.

" ಇಲ್ಲೇ ನಮ್ಮ ಮನೆ ; ಬರುತ್ತೇನೆ " ಎಂದೆ.

" ಸಂತೋಷ ಹೊರಡಿ. "

" ತುಂಬಾ ತೊಂದರೆ ಕೊಟ್ಟೆ ".

" ಈ ರೀತಿಯ ತೊಂದರೆ ಹೆಚ್ಚು ಹೆಚ್ಚು ಕೊಟ್ಟರೆ ಒಳ್ಳೆಯದು "

“ ಮಾತುಗಾರರಿಗೆ ಮಾತು ಕಲಿಸಲು ಸಾಧ್ಯವೇ ಥ್ಯಾಂಕ್ಸ್”

“ ಬರೇ ಬಾಯಲ್ಲೇ ಹೇಳಬೇಡಿ. ” ಎಂದು ಕೈ ಕುಲುಕಿ, ಸೈಕಲ್ ಹತ್ತಿ ಮಾಯವಾದ. ಎಲಾ ‘ ಘಾಟಿ ’ ಎಂದುಕೊಂಡೆ. ಇನ್ನೂ ಫರ್ಲಾಂಗ್ ದೂರ ಇತ್ತು ಮನೆ. ನಮ್ಮ ಮನೆಯವರು ಕಂಡಾರೆಂದು ಅವನನ್ನು ಕಳಿಸಲು ಮನೆ ಸಿಕ್ಕಿತೆಂದು ಸುಳ್ಳು ಹೇಳಿದೆ. ಅವನು ಸಂಪೂರ್ಣ ಮಾಯವಾದ ಮೇಲೆ, ಮನೆಕಡೆ ನಡೆದೆ.

೨

ದಿನಗಳು ಉರುಳಿದುವು, ನಮ್ಮಿಬ್ಬರ ಹೃದಯಗಳು ಹತ್ತಿರ ಹತ್ತಿರ ಸೇರತೊಡಗಿದುವು. ಮೊದಮೊದಲು ಅವನನ್ನು ನೋಡದೇ ಮನೆ ಸೇರಿದರೆ ಮನಸ್ಸು ಅಲ್ಲೋಲ ಕಲ್ಲೋಲವಾಗುತ್ತಿತ್ತು. ಆದರೆ ಈಗ ಅವನೊಡನೆ ಮಾತನಾಡದೆ ಹಿಂತಿರುಗಿದರೆ ಜೀವನವೇ ಬೇಸರದ ಬ್ರಹ್ಮಾಂಡದಲ್ಲಿ ಬೇಯುತ್ತದೆ.

ದಿನ ಕಳೆದಂತೆಲ್ಲಾ ಗೆಳತಿಯರನ್ನೆಲ್ಲಾ ದೂರಮಾಡಿದೆ. ಪಾಠಗಳಂತೂ ನನ್ನನ್ನು ಬಿಟ್ಟು ದೂರ ಓಡಿ ಅನೇಕ ತಿಂಗಳುಗಳು ಉರುಳಿಹೋಗಿತ್ತು. ಸುರೇಶ ಮಾತ್ರ ಹೃದಯಕ್ಕೆ ಹತ್ತಿರವಾದ.

ಇತ್ತೀಚೆಗೆ ಅವನೊಡನೆ, ಕ್ಲಾಸಿಗೆ ಚಕ್ಕರ್ ಹೊಡೆದು ನಂಜನಗೂಡಿಗೊ, ಶ್ರೀರಂಗಪಟ್ಟಣಕ್ಕೊ, ಬೃಂದಾವನಕ್ಕೊ ಹೋಗಿ ಬರತೊಡಗಿದ್ದೆ.

ಸುರೇಶ್ ಟಿ. ನರಸೀಪುರದ ತಾಲ್ಲೋಕ್ ಒಂದು ಹಳ್ಳಿಯ ಭಾರೀ ಹಣವಂತರ ಏಕಮಾತ್ರ ಪುತ್ರ. ನಾವು ಜಾತಿಯಲ್ಲಿ ಬ್ರಾಹ್ಮಣರೇ ಆದರೂ, ಅವರು ಮುದ್ರೆಯವರು ; ನಾವು ಕರ್ನಾಟಕರು. ಸುರೇಶ್ ಭಾರಿ ಬುದ್ಧಿವಂತ ಸಾಹಿತ್ಯದಲ್ಲೂ ವಿಜ್ಞಾನದಲ್ಲೂ ವಯಸ್ಸಿಗೆ ಮೀರಿದ ಜ್ಞಾನ ಸಂಪಾದಿಸಿದ್ದ. ಯಾವುದೊ ಕೆಲವು ಪುಸ್ತಕಗಳನ್ನೂ ಬರೆದು ಪ್ರಕಾಶಕರ ಕೈ ಸೇರಿಸಿದ್ದಾನೆ. ಆದರೆ ಅವು ಹೊರಬಿದ್ದಿಲ್ಲ.

ಕಾಲೇಜಿನಲ್ಲಿ ಓದುವ ಸಲುವಾಗಿ ಮೈಸೂರಿಗೆ ಬಂದು, ಅವರ ತಂದೆಯವರ ಪರಿಚಿತರಾದ ಸುಬ್ಬರಾವ್‌ರವರ ಮನೆಯಲ್ಲಿ ಒಂದು ಕೊಠಡಿಯಲ್ಲಿ ಇದ್ದುಕೊಂಡು, ಹೋಟಲಿನಲ್ಲಿ ಊಟ ಮಾಡುತ್ತಾ ವ್ಯಾಸಂಗ ಸಾಧಿಸುತ್ತಾ ಇದಾನೆ. ಈ ಎಲ್ಲ ವಿಷಯಗಳೂ ದಿನ ಕಳೆದಂತೆ ತಿಳಿಯಿತು.

ಒಮ್ಮೆ ಅವನ ಕೊಠಡಿಗೂ ಹೋಗಿದ್ದೆ. ಆ ಕೊಠಡಿಗೂ ಸುಬ್ಬರಾಯರ ಮನೆಗೂ ಹೆಚ್ಚು ಸಂಪರ್ಕವೇ ಇರಲಿಲ್ಲ. ಸುರೇಶ್‌ನ ಕೊಠಡಿಗೆ ಯಾರು ಬಂದು ಹೋದರೂ ಸುಬ್ಬರಾಯರ ಮನೆಯವರಿಗೆ ತಿಳಿಯುವಂತೆಯೇ ಇರಲಿಲ್ಲ. ಕೊಠಡಿಯಲ್ಲಿ ಒಂದು ಮಂಚ. ಮಂಚದ ಮೇಲೆ ಹಾಸಿಗೆ ಯಾವಾಗಲೂ ಹಾಸಿಯೇ ಇರುತ್ತಿತ್ತು ಈ ಸುಂದರ ಮಂಚದ ಮಗ್ಗುಲಲ್ಲೇ ಒಂದು ಟೇಬಲ್. ಟೇಬಲ್ ಮೇಲೆ ಕೆಲವು ಇಂಗ್ಲಿಷ್ ಕಾದಂಬರಿಗಳು; ಉತ್ತಮ ಪುಸ್ತಕಗಳು, ಪೆನ್, ಪೆನ್ಸಿಲ್ ಮೊದಲಾದವು ಕಲಾ ಪೂರ್ಣವಾಗಿ ಇಡಲ್ಪಟ್ಟಿದ್ದುವು. ಟೇಬಲ್ ಮೇಲ್ಗಡೆ ಒಂದು ಸುಂದರವಾದ ಗಣೇಶನ ವಿಗ್ರಹ, ಎರಡು ಪಕ್ಕಕ್ಕೂ ಗಾಂಧೀಜಿ, ರವೀಂದ್ರನಾಥ್, ವಿವೇಕಾನಂದ, ರಾಮಕೃಷ್ಣ ಪರಮಹಂಸ ಇವರುಗಳ ಚಿತ್ರಪಟಗಳು ಕಲಾಪೂರ್ಣವಾಗಿ ತೂಗುಹಾಕಲ್ಪಟ್ಟಿದ್ದವು. ಆ ಕೊಠಡಿಯ ವೈಭವವನ್ನು ನೋಡಿ ನಾನು ಅದಕ್ಕೆ ಮಾರು ಹೋದೆ.

ಚರ್ಚಾ ಸ್ಪರ್ಧೆ ನಡೆದ ಹದಿನೈದು ದಿನದಲ್ಲಿ ನಮ್ಮ ಕರ್ನಾಟಕಸಂಘದ "ಕಾರ್ಯದರ್ಶಿ ಸ್ಥಾನ" ಹಾಗೂ 'ಸದಸ್ಯ ಸ್ಥಾನ' ಗಳ ಚುನಾವಣೆ ನಡೆಯಿತು. ಕಾರ್ಯದರ್ಶಿಯಾಗಿ ಸುರೇಶನೂ, ಸದಸ್ಯಳಾಗಿ ನಾನೂ ಚುನಾಯಿತರಾದೆವು. ಇದರಿಂದಾಗಿ ನಾವಿಬ್ಬರೂ ಹತ್ತಿರ ಹತ್ತಿರ ಸೇರಲು ಅನುಕೂಲವಾಗತೊಡಗಿತು. ಕಾಲೇಜಿನ ಆವರಣದಲ್ಲಿ ನಾವಿಬ್ಬರೂ ಮಾತಾಡುತ್ತಾ ನಡೆದರೆ ಎಲ್ಲರೂ ನಮ್ಮನ್ನು ನೋಡುವವರೆ.

ಆದಿನ ಬೆಳಗ್ಗೆ ಸುಮಾರು ಹತ್ತೂವರೆ ಇರಬೇಕು. ಕಾಲೇಜಿನ ಕಡೆ ಕೈಯಲ್ಲಿ ಪುಸ್ತಕ ಹಿಡಿದು ಹೊರಟಿದ್ದೆ ದಾರಿಯಲ್ಲಿ ನಾನು ಹೋಗುತ್ತಿರುವಾಗ ಹಿಂಭಾಗದಿಂದ ಯಾರೋ ಸೈಕಲ್ ಮೇಲೆ ಬಂದು ನನ್ನ ಎಗಲ ಮೇಲಿ ಕೈ ಇಟ್ಟರು. ಬೆಚ್ಚಿ ಬಿದ್ದು ತಿರುಗಿನೋಡಿದೆ. ಸುರೇಶ್! ನಾನು ಮಾತಾಡದೆ ಮುಖ ನೋಡಿ ಮುಗುಳ್ನಗೆಯೊಂದನ್ನು ಅವನೆಡೆಗೆ ಎಸೆದು ರಸ್ತೆ ಪಕ್ಕ ಸೇರಿದೆ. ಅವನು ಪ್ರತಿನಗೆ ನಗುತ್ತಾ—

"ಇದೇನು ಇಷ್ಟು ಎದರುತ್ತಾರೆಯೋ ?"—ಎಂದ

"ದಯವಿಟ್ಟು ಬೀದಿಯಲ್ಲಿ ಮಾತು ಬೇಡ"

" ಬರುವಿರೇನು ? ಶ್ರೀರಂಗಪಟ್ಟಣಕ್ಕೆ ಹೋಗಿದ್ದು ನಾಲ್ಕರ ಹೊತ್ತಿಗೆ ವಾಪಸ್ ಬಂದುಬಿಡೋಣ " ಹಿಂದೆ ಒಂದು ದಿನ ಹೀಗೆ ಹಾಗಿತ್ತು. ಹುಚ್ಚು ಚ್ಚಾಗಿ ಕ್ಲಾಸ್ ಬಿಟ್ಟು ಹೋಗಿದ್ದೆ. ಆದಿನ ಯಾವ ಧೈರ್ಯದಿಂದ ಹೊರ ಟೆನೋ ತಿಳಿಯದು. ಆದರೂ ನನ್ನ ಈ ಎಲ್ಲ ನಡನಳಿಕೆಗಳೂ ಸಮಾಜದ ದೃಷ್ಟಿಯಿಂದ ಕೆಟ್ಟದ್ದು. ಆದರೆ ನಿಜವಾದ ಸ್ನೇಹಿತರಾದ ನಮ್ಮಿಬ್ಬರ ದೃಷ್ಟಿ ಯಲ್ಲಿ ಇದು ಸರಿ ಇತ್ತು. ಇದಕ್ಕೆ ಕಾರಣ ನಮ್ಮಿಬ್ಬರನ್ನೂ ಒಂದು ಗೂಡಿಸಿದ ಶಕ್ತಿಃ 'ಪ್ರೇಮ'. ನಮ್ಮಿಬ್ಬರ ಇಷ್ಟು ದಿನದ ಗೆಳೆತನದ ಮಧ್ಯೆ ನಿಜವಾದ ಪ್ರೇಮಾಕರ್ಷಣೆ ಇತ್ತೆ ವಿನಾ ಬೇರೆ ಯಾವುದಕ್ಕೂ ಎಡೆ ಇರಲಿಲ್ಲ ಆದರೆ ದಂಪತಿಗಳ ಜೀವನದಲ್ಲಿ ಪ್ರಕೃತಿ ಲೈಂಗೀಕ ಆಕರ್ಷಣೆಗಳನ್ನು ತಂದೊಡ್ಡಿ ತನ್ನ ಕಾರ್ಯವನ್ನು ಸಾಧಿಸಿಕೊಳ್ಳುತ್ತಾಳೆ. ನಾವಿಬ್ಬರೂ ಆದರ್ಶ ಧ್ಯೇಯವಾದಿಗಳಾದ್ದರಿಂದ ನಮ್ಮ ಮಧ್ಯೆ ಈ ಬಗೆಯ ಆಕರ್ಷಣೆ ಇದ್ದರೂ, ನಾವು ಎಚ್ಚೆತ್ತ ಆದರ್ಶ ಸ್ನೇಹಿತರಾಗಿದ್ದೆವು—ಇದರಿಂದ ವೈಲಿ ದೂರದಾಚೆ ಇದ್ದೆವು.

" ಆಗಲಿ " ಎಂದು ಬಾಯಿಬಿಟ್ಟು ಹೇಳಲಿಲ್ಲ. ಆದರೆ ತಲೆ ಕುಣಿಸಿದೆ. ಕಾರಣ ಸುತ್ತಲೂ ಯಾರಾದರೂ ಗೆಳತಿಯರು ಇರಬಹುದೇನೋ ಎಂಬ ಭಯದಿಂದ.

ಇಬ್ಬರೂ ಯಾಂತ್ರಿಕವಾಗಿ ಅವನ ಕೊಠಡಿಯ ಕಡೆ ನಡೆದೆವು. ಸುಬ್ಬ ರಾಯರ ಮನೆಯ ಮುಂದೆ ಒಂದು 'ಚವರ್‍ಲೆ' ಕಾರ್ ಸಿದ್ಧವಾಗಿತ್ತು. ಅದು ಸುಬ್ಬರಾಯರದೇನೋ ಎಂದುಕೊಂಡೆ. ಸೈಕಲ್ ರೂಂನಲ್ಲಿ ಬಿಟ್ಟು 'ಕ್ಯಾಮರಾ' ಕೈಯಲ್ಲಿ ಹಿಡಿದು ರೂಂಗೆ ಬೀಗ ಹಾಕಿ ಹೊರಬಂದು ಕಾರಿನ ಮುಂಭಾಗದ ಬಾಗಿಲನ್ನು ತೆಗೆದು " ಹತ್ತಿ " ಎಂದ. ನಾನು ಅವನ ಅಪ್ಪಣೆ ಯನ್ನು ಪರಿಪಾಲಿಸಿದೆ.

ಕಾರು ಊರನ್ನು ಮರೆತು ಸುರೇಶನ ಸಾರಥಿತ್ವದಲ್ಲಿ ಬಯಲನ್ನು ಹೊಕ್ಕಿತು.

" ಯಾರದು ಕಾರು ? ".

—ಎಂದೆ, ನಾನೇ ಮೌನವನ್ನು ಮುರಿದು.

" ಇಷ್ಟುದಿನ ನೋಡಿಯೇ ಇರಲಿಲ್ಲ ?

" ನಮ್ಮ ಊರಿನಲ್ಲಿತ್ತು. ಈಗ ಕೆಟ್ಟುಹೋಗಿದೆ ಎಂದು ತಂದೆಯವರು ಇದನ್ನು ಇಲ್ಲಿಗೆ ತಂದು ಬಿಟ್ಟಿದ್ದರು. ರಿಪೇರಿಯಾಯಿತು. ನಾಳೆ ಬಂದು ಅವರು ಕಾರ್ ತೆಗೆದುಕೊಂಡು ಹೋಗುತ್ತಾರೆ. ಈ ದಿನ ಹಾಯಾಗಿ ಕಾರ್ ' ಡ್ರೈವ್ ' ಮಾಡಬೇಕಿನಿಸಿತು. ನಾನು ಕಲಿತಿರುವ ವಿದ್ಯೆ ನಿಮಗೂ ತೋರಿಸೋಣವೆಂದು ನಿಮ್ಮನ್ನೂ ಕರೆದೆ. "

" ಹೀಗೆ ಕ್ಲಾಸಿಗೆ ಚಕ್ಕರ್ ಹೊಡೆದರೆ ಚೆನ್ನಾಗಿರುತ್ತದೆಯೆ ? "

" ನಾವು ದಿನವೂ ಚಕ್ಕರ್ ಹೊಡೆಯುವುದಿಲ್ಲವಲ್ಲ ? "

" ಪಾಠಗಳು ತಪ್ಪಿಹೋಗುವುದಿಲ್ಲವೆ ? "

" What shall I do ? ಮನೆಯಲ್ಲಿ ಓದಿಕೊಂಡರೆ ಆಯಿತು. "

"ಸಾಕು ಸುಮ್ಮನಿರಿ. ಮನೆಯಲ್ಲಿ ಓದಿಬಿಟ್ಟರೆ ಅರ್ಥವಾಗಿಬಿಡುತ್ತದೆಯೆ? ಹಾಗಿದ್ದ ಮೇಲೆ ಕಾಲೇಜಿಗೆ ಬರಬೇಕಾದ್ದೇ ಇರಲಿಲ್ಲ. "

" ಹೋಗಲಿ ಬಿಡಿ. ನೀವು ರಾತ್ರಿ ಎಲ್ಲಾ ಓದುತ್ತೀರಿ ಎನ್ನುವ ಹಾಗೆ ಕಾಣುತ್ತೆ. "

" ಅದು ಹೇಗೆ ಗೊತ್ತು ನಿಮಗೆ "

" ನಿಮ್ಮನೆ ಎದುರುಮನೆ ಶಂಕರ್ ಹೇಳಿದ. "

ನಾನು ಬೆಚ್ಚಿಬಿದ್ದೆ. ನಮ್ಮಿಬ್ಬರ ಈ ಸ್ನೇಹ ಸಂಬಂಧ ಯಾರಿಗೂ ತಿಳಿಯದೇ ಇದ್ದರೆ ಸಾಕು ಎಂದು ನಾನು ಯೋಚಿಸುತ್ತಿರುವಾಗ, ಇವನು ಎದುರು ಮನೆ ಶಂಕರ್ ಎಂದರೆ !

" ಅವರಿಗೆ ನಮ್ಮಿಬ್ಬರ ಪರಿಚಯ ಗೊತ್ತೋ ? " ನಾನೇ ಪ್ರಶ್ನಿಸಿದೆ.

" ಇಡೀ ಕಾಲೇಜಿಗೇ ಗೊತ್ತಿಲ್ಲವೆ ? "

" ಹಾ ! "

" ಹೆದರಬೇಕಾದ್ದೇನಿಲ್ಲರೀ. ನಾನು ಕರ್ನಾಟಕ ಸಂಘದ ಕಾರ್ಯದರ್ಶಿ ನೀವು ಸದಸ್ಯರು. ಮಾತನಾಡಬೇಕಾದ ಪ್ರಸಂಗ ಬೀಳುತ್ತೆ. ಮಾತನಾಡುತ್ತೀವೆ ಎಂದರಾಯಿತಲ್ಲ. "

" ಸರಿ " ಎಂದು ತೆಪ್ಪನಾದೆ.

" ರಾತ್ರಿಎಲ್ಲಾ ಓದಿದರೆ ಕಣ್ಣು ಕೆಡುವುದಿಲ್ಲವೆ ? "

" ಕೆಟ್ಟರೆ ಏನು ಮಹಾ ! ಈಗ ಎರಡು ಕಣ್ಣಿವೆ. ನಾಳೆ ನಾಲ್ಕು ಕಣ್ಣುಗಳಾಗುತ್ತೆ " ಎಂದು ನಾನು ಹಲ್ಲು ಕಿರಿದೆ.

" ರೀ ನೀವು ನಕ್ಕಾಗ ಬಹಳ ಚೆನ್ನಾಗಿ ಕಾಣ್ತಿರ್ರಿ. ನಿಮ್ಮ ಫೋಟೋ Smilling Pose ಒಂದು ತೆಗಿಬೇಕ್ರಿ "

" ಸಾಕು ನಿಮ್ಮ ಹೊಗಳಾಣಿಕೆ. ಗಂಡ ಹೆಂಡ್ತಿಯನ್ನು ಹೊಗೊಳೋ ಹಾಗೆ ಹೊಗಳ್ತಾ ಇದೀರಲ್ಲ. "

" ಗಂಡ ಅಲ್ಲದೆ ಬೇರೆಯವರು ಹೊಗಳ ಬಾರದೇನೊ ? "

" ಹೂಂ........ ನಿಮಗೇನು ? "

" ಮುಖ ಕೆಂಪಾಯಿತಲ್ಲ. ಈಗ ಇನ್ನೂ Beautiful ಆಗಿದೆ ರೀ face ಈಗಿನ ರಂಗೇ ಬೇರೆ "

" ಸಾಕ್ ರೀ ನಿಮ್ಮ ಹೊಗಳಾಣಿಕೆ. "

" ಏಕೆ ? "

" ಮೊದಲೇ ಹೇಳಲಿಲ್ಲವೆ ? ಹೊಗಳುವವರು ಗಂಡದಿರುಮಾತ್ರ ಅಂತ"

" ಈಗ ನೀವು ನನ್ನನ್ನು ನಿಮ್ಮ to be ಅಂತ ತಿಳ್ಕೊಂಡು ತೆಪ್ಪನಾಗಿ "

ಈ ಮಾತನ್ನು ಕೇಳಿದ ಕೊಡಲೇ ನನ್ನ ಶರೀರದಲ್ಲಿ ವಿಪರೀತವಾಗಿ ಏನೋ ಒಂದು ರೀತಿಯಾಯಿತು. ಬೆವರು ಕಿತ್ತು ಬಂತು. ಕಾರಿನ ಚಕ್ರಗಳು ಎತ್ತಲೋ ಉರುಳುತ್ತಲೇ ಇದ್ದುವು. ಕಾರಲ್ಲಿ ಒಂದು ದಿನವೂ ಕೂತಿಲ್ಲದ ನಾನು ಇದೇ ಮೊದಲ ಭಾರಿ ಕಾರಿನ ಸುಖವನ್ನು ಪಡೆಯುತ್ತಾ ಇರುವುದು.

" ರೀ ಈಗ ಇಡೀ ಕಾಲೇಜೇ ನಮ್ಮಿಬ್ಬರನ್ನೂ ಸೇರಿಸಿ ಕತೆ ಕಟ್ಟುತ್ತಾ ಇದೆ. ಈ ಕತೆ ನಾಳೆ ವಿಪರೀತಕ್ಕೆ ಇಟ್ಟು ಕೊಳ್ಳುತ್ತೆ. ಆಗಲೂ ನೀವು ಕೈಬಿಡಬಾರದು "

ಎಂದು ಅಳುಕುತ್ತಾ ಹೇಳಿದೆ.

" ಅಂದರೆ ಸ್ಪಷ್ಟವಾಗಿ ಕೇಳಿ........ "

" ಅಂದರೆ ....ನೀವೆ ನಾಳೆ ನನ್ನ ಕೈ ಹಿಡಿಬೇಕು.... "

ಎಂದು ಕೊರಳು ಕೊಂಕಿಸಿದೆ ನಾಚಿಕೆ ಇಲ್ಲದವಳಾಗಿ—ಇಲ್ಲ ಇತ್ತು.

"ಖಂಡಿತ ಶಾಂತ. ಶಾಂತ ನಾನೆಂದಿಗೂ ನಿನ್ನನ್ನು ಬಿಡುವವನಲ್ಲ. ನಿನ್ನ ಕೈ ಹಿಡಿದಿರುವುದು ಬಿಡುವುದಕ್ಕಲ್ಲ. ಬೇಕಾದರೆ ಭಾಷೆ ಕೊಡುತ್ತೇನೆ. ಶಾಂತ ನೀನೆ ನನ್ನಬಾಳು ಸರ್ವಸ್ವ. ನೀನಿಲ್ಲದೆ ನನ್ನಬಾಳು ಪೂರ್ಣವಾಗದು ಶಾಂತಾ"

ಎಂದು ನನ್ನ ಕೈಮೇಲೆ ತನ್ನ ಕೈಯಿಟ್ಟು ಭಾಷೆ ಹಾಕಿದ. ಅವನ ಕೈಯನ್ನು ನನ್ನ ಎರಡು ಕೈಗಳಲ್ಲೂ ಸ್ವೀಕರಿಸಿ ಕಣ್ಣಿಗೆ ಒತ್ತಿಕೊಂಡೆ. ಕಣ್ಣು ಹನಿಗಳು ಅವನ ಕೈಯನ್ನು ತೇವ ಮಾಡಿದುವು.

" ಇದೇ ನಾನು ಕೊಡುವ ಭಾಷೆ " ಎಂದೆ ಪ್ರೀತಿಯಿಂದ ಸ್ವೀಕರಿಸಿದ. ನನ್ನ ಮನಸ್ಸಿಗೆ ಇನ್ನಿಲ್ಲದ ಆನಂದವಾಯಿತು. ಹೃದಯೋಶ್ವರನನ್ನು ಹೃದಯದಲ್ಲಿ ಬಚ್ಚಿಟ್ಟು ಚುಂಬಿಸಿದೆ.

ಕಾರು ಅಡ್ಡ ಹಾದಿಯಲ್ಲಿತ್ತು.

" ಇದೇನು ಕಾರು ? " ಎಂದೆ ಭಯದಿಂದ.

ಕ್ಷಣದಲ್ಲಿ ಕಾರು ತನ್ನ ಹಾದಿಯನ್ನು ಹಿಡಿಯಿತು.

" ನೀವು ಕಾರ್ ನಡೆಸುವುದರಲ್ಲೂ ಪ್ರವೀಣರು "—ಎಂದೆ.

" ನಿನ್ನಂಥಹವರ ಆಶೀರ್ವಾದ. Dear ಇನ್ನು ಮುಂದೆ ನೀನೂ ನನ್ನನ್ನು ಏಕವಚನದಲ್ಲೇ ಕರೆಯಬೇಕು "

" ಇದು ಹಿಂದೂ ಸ್ತ್ರೀಯರಿಗೆ, ಉತ್ತಮ ಜಾತಿಯವರಿಗೆ ಸರಿಯಲ್ಲ "

" ನಿನ್ನ ಗಂಡನ ಆಜ್ಞೆಯನ್ನು ಪರಿಪಾಲಿಸುವೆಯಾ ? "

" ಕಾಲಲ್ಲಿ ತೋರಿದ್ದನ್ನು ತಲೆಯ ಮೇಲೊತ್ತು ಮಾಡುವೆ. "

" ನನ್ನ ಮೊದಲ ಆಜ್ಞೆ ನೀನು ನನ್ನನ್ನು ಏಕವಚನದಲ್ಲಿ ಕರೆಯಬೇಕು ಎಂಬುದು "

ಸ್ವಾಮಿ ಆಜ್ಞೆಯನ್ನು ಆ ದಿನದಿಂದ ಪರಿಪಾಲಿಸುತ್ತಿದ್ದೇನೆ. ನನ್ನ ಜೀವನದ ಅನ್ಮೃತ ದಿನ ಅದು. ಅಂದಿನಿಂದ ಅವರು ಅವನಾಗಿ ನನ್ನ ಹೃದಯದಲ್ಲಿ ಲೀನ ವಾಗಿಬಿಟ್ಟ.

ಅಬ್ಬ ! ಎಂತಹ ದಿನ ಅದು.

ಜೇನಿನಂತಹ ದಿನ !

ಸುಪ್ರಶಾಂತ ದಿನ !! ಸುಮಧುರ ದಿನ !!! ಅಲ್ಲ ಈ ದಿನ ನನ್ನ ಹೃದಯವನ್ನು ಚುಚ್ಚುತ್ತಿರುವ ನಿಷ್ಕರುಣಿಯಾದ ದಿನ.

೩

ನಮ್ಮ ಪರೀಕ್ಷೆಗೆ ಇನ್ನೂ ಐದು ತಿಂಗಳುಗಳು ಇದ್ದುವು ಮಧ್ಯೆ ನಮ್ಮ ಕರ್ನಾಟಕದ ಸಂಘದ ಕಾರ್ಯಕಲಾಪಗಳ ಪಟ್ಟಿಯಂತೆ ' ನಾಟಕೋತ್ಸವನ್ನು ಆಚರಿಸಬೇಕಾಗಿತ್ತು. ಅ ಸಂಧರ್ಭದಲ್ಲಿ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಒಂದು ದೊಡ್ಡ ನಾಟಕವನ್ನೇ ಆಡಿಸಬೇಕೆಂದು ಸಂಘ ತೀರ್ಮಾನಿಸಿತು. ಆ ಮೇರೆಗೆ ಸುರೇಶ್ " ರಾಜಹಂಸ " ಎಂಬ ನಾಟಕವನ್ನು ಆಡಲು ಬಯಸಿದ. ಅವನ ಇಚ್ಛೆಯನ್ನು ಸಂಘದ ಅಧ್ಯಕ್ಷರು ಒಪ್ಪಿದರು.

ಸರಿ ' ನಟ—ನಟಿ ' ಯರ ಆಯ್ಕೆ ನಡೆಯಿತು. ' ಪ್ರಾಕ್ಟೀಸ್ ಪ್ರಾರಂಭವಾಯಿತು. ಸುರೇಶನೇ ಕಥಾನಾಯಕ. ನಾನೇ ನಾಯಕಿ. ನಾಯಕನೂ, ನಾಯಕಿಯೂ ರಂಗದ ಮೇಲೆ ಒಟ್ಟಿಗೆ ಸೇರುವ ಪ್ರಮೇಯವೇ ಇರಲಿಲ್ಲ. ನಾಟಕ ಒಬ್ಬ ಕಲೋಪಾಸಕನನ್ನು ಕುರಿತು ಬರೆದದ್ದು. ಸುಮಾರು ಮೂರು ಘಂಟೆಗಳ ಕಾಲ ನಡೆಯುವಂತಹದು.

ದೆಹಲಿಯಲ್ಲಿ ಒಬ್ಬ ಬಾದಷಹ ಅವನು ಹಿಂದೂ ದ್ವೇಷಿ. ಇವನ ಆಸ್ಥಾನದ ರಾಜವೈದ್ಯನ ಮಗನೇ ನಾಟಕದ ಕಥಾನಾಯಕ. ಬಾದಷಹನ ಮಗಳೇ ನಾಯಕಿ. ಸುಲ್ತಾನ :ಎಲ್ಲ ಹಿಂದೂಗಳನ್ನೂ ತನ್ನ ಮತಕ್ಕೆ ಸೇರಿಸಿಕೊಳ್ಳಲು ಯತ್ನಿಸುತ್ತಾನೆ. ನಾಯಕಿ ತಂದೆಯ ಕೆಲಸವನ್ನು ದೂಷಿಸುತ್ತಾಳೆ. ಕ್ರೂರಿ ಬಾದಷಹನ ಆಜ್ಞೆಯನ್ನು ಎಲ್ಲರೂ ಪರಿಪಾಲಿಸಲು ಸಾಧ್ಯವಿಲ್ಲ. ನಾಯಕ ಹಿಂದೂ ಆದ್ದರಿಂದ ದೆಹಲಿಯನ್ನು ಬಿಟ್ಟು ಹೊರಡುತ್ತಾನೆ. ನಾಯಕ—ನಾಯಕಿಯರು ಒಟ್ಟಿಗೆ ಸಂಗೀತ ಕಲಿಯುತ್ತಿರುತ್ತಾರೆ ನಾಯಕಿಗೆ ನಾಯಕನು ದೂರಾದ್ದರಿಂದ ಅಲ್ಲದೆ ಬಾದಷಹ ಮಗಳನ್ನು ಮುದುಕನಿಗೆ ಕಟ್ಟಲು ಯೋಚಿಸಿದ್ದರಿಂದ, ನಾಯಕಿ ನೀರಿನ ಪಾಲಾಗು

ತ್ತಾಳೆ. ಈ ಅವಧಿಯಲ್ಲಿ ನಾಯಕ ಒಬ್ಬ ಗುರುವಿನಲ್ಲಿ ಸಂಗೀತವನ್ನು ಪೂರ್ಣವಾಗಿ ಕಲಿಯುತ್ತಾನೆ. ವಿದ್ಯೆ ಪೂರ್ಣವಾದಾಗ, ಗುರುವಿನ ಮಗಳು ನನ್ನನ್ನು ಮದುವೆಯಾಗೆಂದು ಬೇಡುತ್ತಾಳೆ. ನಾಯಕ ಒಪ್ಪುವುದಿಲ್ಲ. ಗುರುವಿನ ಮಗಳು ತಂದೆಯಲ್ಲಿಗೆ ಹೋಗಿ ' ನಿಮ್ಮ ಶಿಷ್ಯ ನನ್ನನ್ನು ಕೆಡಿಸಲು ಯತ್ನಿಸಿದ ' ಎನ್ನುತ್ತಾಳೆ. ಗುರುವಿಂದ ಒದೆತಿಂದು ನಾಯಕ ಮುಂದೆ ಅಲೆಯುತ್ತಿರುವಾಗ ನೀರಲ್ಲಿ ದುಮುಕಿದ್ದ ನಾಯಕಿ ಸಿಗುತ್ತಾಳೆ. ಇಬ್ಬರೂ ಬಯಲಲ್ಲಿ ಗುಡಿಸಿಲಲ್ಲಿ ಬಾಳನ್ನು ನೂಕುತ್ತಾ ಇರುತ್ತಾರೆ. ನಾಯಕನ ಗುರುವಿಗೆ ಒಬ್ಬ ಮಗನೂ ಇರುತ್ತಾನೆ. ಆತ ನಾಯಕ ನಿರಪರಾಧಿ ಎಂದು ಸಾರುತ್ತಾನೆ. ಬಾದಷಹನ ಕುಮಾರಿಯನ್ನು ಹುಡುಕುತ್ತ ಬಂದ ರಾಜ ಭಟರು ನಾಯಕ-ನಾಯಕಿ ಹಾಗೂ ನಾಯಕನಲ್ಲಿ ತಂಗಿಯ ಪರವಾಗಿ ಕ್ಷಮೆ ಯಾಚಿಸಲು ಬಂದಿದ್ದ ಗುರುಪುತ್ರ ಮೂವರನ್ನೂ ಹಿಡಿದು ರಾಜಸ್ಥಾನಕ್ಕೆ ತರುತ್ತಾರೆ. ನಾಯಕ ಮತ್ತು ರಾಜ ವೈದ್ಯನಿಗೆ ಆ ಕಾರಾಗೃಹ ವಾಸಿಗಳಿ ಬ್ಬರಿಗೂ ವಿಷ ಕೊಡುವಂತೆ ತಿಳಿಸುತ್ತಾನೆ. ರಾಜಾಜ್ಞೆಯನ್ನು ಪರಿಪಾಲಿಸಲು ಬಂದ ರಾಜವೈದ್ಯ ತನ್ನ ಮಗನನ್ನೂ, ಬಾದಷಹನ ಹಿಂದಿನ ದೆಹಲಿಯ ರಾಜನ ಪುತ್ರನನ್ನೂ (ಗುರುಪುತ್ರ) ಗುರುತುಹಚ್ಚಿ, ಸೇನಾಧಿಪತಿಯ ಸಹಾಯದಿಂದ ರಾಜ್ಯದಲ್ಲಿ ದಂಗೆ ಎಬ್ಬಿಸಿ, ಬಾದಷಹನನ್ನು ಕೊಲ್ಲಲು ಯತ್ನಿಸುತ್ತಾರೆ. ನಾಯಕ ಕತ್ತಿ ಹಿರಿದು ಯುದ್ಧ ಮಾಡುತ್ತಿರುವಾಗ ಬೇರೊಬ್ಬರ ಕತ್ತಿಗೆ ದೇಹ ಕೊಡುವ ಸ್ಥಿತಿಯಲ್ಲಿರುತ್ತಾನೆ. ಆಗ ನಾಯಕಿ ಓಡಿಬಂದು ತನ್ನ ಪ್ರಾಣ ಕೊಟ್ಟು ನಾಯಕನ ಪ್ರಾಣ ಉಳಿಸುತ್ತಾಳೆ. ಬಾದಷಹ ಮಗಳನ್ನೇ ಕೊಂದು ಕಡೆಗೆ ತಾನೂ ಹತನಾಗುತ್ತಾನೆ. ಗುರುಪುತ್ರ ನಿಜವಾದ ಉತ್ತರಾಧಿಕಾರಿ-ಸಿಂಹಾಸನ ಏರುತ್ತಾನೆ. ಗುರು ಪುತ್ರಿಯನ್ನೇ ದುಃಖದಿಂದ ನಾಯಕ ಸ್ವೀಕರಿಸುತ್ತಾನೆ.

ಇದು ಆ ಬೃಹದ್ ನಾಟಕದ ಕಥಾವಸ್ತು. ಬರೆದಿದ್ದವರು ತರುಣ ವಿಜ್ಞಾನಿಗಳೊಬ್ಬರಂತೆ !

ಆದಿನ ನಮ್ಮ ನಾಟಕ ಪ್ರದರ್ಶಿಸಲ್ಪಡಬೇಕಾದ ದಿನ. ಎಲ್ಲ ಸಿದ್ಧತೆಗಳೂ ನಡೆದಿದ್ದುವು. ಕಥಾ ನಾಯಕನ ಪಾತ್ರದಲ್ಲಿ ಸುರೇಶ ವಿರಾಜಿಸಿದ. ಜುಬ್ಬ ಧರಿಸಿ, ತಲೆಯನ್ನು ಎತ್ತಿ ಹಿಂದಕ್ಕೆ ಬಾಚಿ ರಂಗವನ್ನು ಪ್ರವೇಶಿಸಿ,

ಪ್ರಕಾಶಗೊಳಿಸಿದ. ಜನರೆಲ್ಲರೂ ಆಶ್ಚರ್ಯದ ಹೊನಲಲ್ಲಿ ತೇಲಾಡಿದರು. ನಾಟಕಕಾರರಿಗೆ, ಸುರೇಶನಿಗೆ ಬಂದ ಕೀರ್ತಿ ಅತಿ ಮಹತ್ವವುಳ್ಳದ್ದು. ನಾಟಕ ಮುಗಿದಾಗ ಆ ದಿನದ ಅಧ್ಯಕ್ಷರು ಸುರೇಶನನ್ನು ಹೊಗಳಿ ಹೊಗಳಿ ಹೊನ್ನ ಬೆಟ್ಟಕ್ಕೇರಿಸಿದರು.

ನಾಟಕ ಮುಗಿದನಂತರ ಎಲ್ಲರೂ ಅವನನ್ನು ಹೊಗಳುವವರೇ. ನಾನು ಹೊಗಳಿದೆ ಅಂದರೆ ಅಷ್ಟು ಇಷ್ಟಲ್ಲ. ಅಪರಿಮಿತವಾದ ಆನಂದದ ಮಹತ್ ನಕ್ಷತ್ರ ಲೋಖದಲ್ಲಿನ ಸುಂದರ ಕೊಳದ ವಸಂತರಾಜನಾದ ಸುರೇಶನನ್ನು ನೋಡಿದ ನನ್ನ ಎದೆ ತುಂಬಿ ಬಂತು ಓಡಿಹೋಗಿ ಅವನನ್ನು ತಬ್ಬಿ ಚುಂಬಿಸಲೇ ಎನ್ನಿನಿತು ಮನ.

ಸುರೇಶ ರೂಂ ಕಡೆ ಹೊರಟ, ಬಣ್ಣ, ಬಟ್ಟೆ ಯಾವುದನ್ನೂ ತೆಗದಿಡದೆ. ನಾನೂ ಹಿಂಬಾಲಿಸಿದೆ.

" ಬಾ, ಬಾ Dear, ಹೇಗಿತ್ತು ಈ ದಿನ "

—ಎಂದ ಜನರ ಜಂಗುಳಿ ಕಮ್ಮಿಯಾದಾಗ.

" ನಿನ್ನದು ನಿಜವಾದ ಅಭಿನಯ ಸುರೇಶ್. ಅದು ಎಷ್ಟು ಚೆನ್ನಾಗಿತ್ತು ಎಂದರೆ ಇಷ್ಟು ಎಂದು ಹೇಗೆ ಹೇಳಲಿ. ಸೂರ್ಯ ಪ್ರಕಾಶವನ್ನು ಹಣತೆ ತೋರಿಸಲು ಸಾಧ್ಯವೆ ? ನಿನ್ನ ಅಭಿನಯ ಕಲೆಯನ್ನು ತೂಗಿ ನೋಡುವ ಶಕ್ತಿ ಈ ಕಂದಮ್ಮನಿಗೆ ಎಲ್ಲಯದು ? "

" ಮನೆಗೆ ಹೊತ್ತಾಗುವುದಿಲ್ಲವೆ ? ನನ್ನ ಹೊಗಳಿಕೆ ಆಮೇಲೆ "— ಎಂದು ನನ್ನನ್ನು ಎಚ್ಚರಿಸಿದ.

ಕೂಡಲೇ ನನಗೆ ಮನೆಯ ಯೋಚನೆ ಬರಸಿಡಿಲಂತೆ ಬಂದು ಎರಗಿತು. ಸುರೇಶನನ್ನು ಅಗಲಬೇಕಲ್ಲಾ ಎಂದು ಹೃದಯ ಮಮ್ಮಲು ಮರುಗಿತು. ಸುರೇಶ್ ನನ್ನನ್ನು ನೂರಡಿ, ರೋಡ್‌ವರೆಗೂ ಬಂದು ಬಿಟ್ಟು " ನಾಳೆ ಮಧ್ಯಾಹ್ನ ರೂಂಗೆ ಬಾ " ಎಂದು ಹೇಳಿ ಹೊರಟ.

ನನ್ನ ಭಾರವಾದ ಹೆಜ್ಜೆಗಳು ನಿಧಾನವಾಗಿ ಮನೆಕಡೆ ನಡೆದುವು.

೪

ಮರುದಿನ ಭಾನುವಾರ. 'ಕಾಲೇಜಿನಲ್ಲಿ ಕೆಲಸವಿದೆ' ಎಂದು ಮನೆಯಲ್ಲಿ ಹೇಳಿ ಸುರೇಶನ ರೂಂ ಕಡೆ ಹೊರಟೆ. ಸುರೇಶ್ ಮಂಚದ ಮೇಲೆ ಮಲಗಿ ಕೈಯಲ್ಲಿ Physics ಓದುತ್ತಾ ಇದ್ದ ಅವನ ಆ ಸುಂದರ ರೂಪಿಗೂ, ಆ ಮಂಚಕ್ಕೂ ಬಲು ಮನೋಹರವಾಗಿತ್ತು ಆ ದೃಶ್ಯ. ಆ ಮಂಚವೇ ಕೊಳ. ಹಾಸಿಗೆ ಹೊದ್ದಿಕೆಗಳೇ ಜಲ. ಸುರೇಶ ಮಾನಸ ಸರೋವರದ "ರಾಜ ಹಂಸ"—ರಾಜ ಹಂಸ!

ನೆನ್ನೆ ನಾಟಕದಲ್ಲೂ "ರಾಜಹಂಸ"........ಅಬ್ಬ.

"ಸುರೇಶ್...." ಎಂದೆ.

"ಹೋ ಸಾರಿ. ನೀನು ಬಂದದ್ದು ನಿಗವೇ ಇಲ್ಲ. Sitdown—Sitdown" ಎಂದು ಮೇಲೆದ್ದು ನನ್ನೆಡೆಗೆ ಬೆತ್ತದ ಕುರ್ಚಿ ನೂಕಿದ. ನಾನು ಕುಳಿತೆ.

"ನಿನ್ನೆ ರಾತ್ರಿ ಬರೀ ಅವಸರದಲ್ಲಿದ್ದೆ. ಕ್ಷಮಿಸು"

—ಎಂದ ಸುರೇಶ.

"ಈಗ ಕರೆದುದೇಕೆ?"

"ಮಾತಾಡಲು"

"ಸರಿ" ಎಂದು ಕೊರಳು ಕೊಂಕಿಸಿದೆ.

"ನಿನ್ನೆ ನಿನ್ನ ಪಾತ್ರ ಬಲು ಸೊಗಸಾಗಿತ್ತು ಶಾಂತಾ. ಆದರೆ ನಿನ್ನ ಅಭಿನಯ ಕಲೆಯನ್ನು ತೋರಿಸಿಕೊಳ್ಳಲು ನಾಟಕ ಅವಕಾಶ ಕೂಡಲಿಲ್ಲ."

"ನಿನ್ನದಕ್ಕಿಂತಲೂ ನನ್ನದೇ? ಅದಿರಲಿ ನಾಟಕ ಬರೆದವರಾರು? ಅವರ ವಿಷಯ ಗೊತ್ತೆ?"

" ಅವರಲ್ಲೊಬ್ಬರು............ನಾಟಕ ಬರೆದಿದ್ದಾರೆ. ನಾಟಕ ಚೆನ್ನಾಗಿಲ್ಲವೆ ?............ಅವರೊಬ್ಬರು ಪುಟ್ಟ ಸಾಹಿತಿಗಳು. "

" Ist class ಆಗಿದೆ. ಆದ್ದರಿಂದಲೇ ಕೇಳಿದ್ದು. "

" ಹೋಗಲಿ ಬಿಡು ಬರೆದವರು ಯಾರಾದರೇನು ? "

—ಎಂದು ಅಷ್ಟಕ್ಕೆ ಮಾತನ್ನು ಮುರಿದ.

ಕಡೆಗೆ ಆ ಮಾತು ಈ ಮಾತು ಏನೇನೋ ಮಾತುಗಳೆಲ್ಲಾ ನಡೆಯಿತು. ಅವನು ನನ್ನನ್ನು ಚೆನ್ನಾಗಿ ನಗಿಸಿದ. ನಾನು ನಕ್ಕೆ.

ಅವನು ಹಾಸಿಗೆಯ ಮೇಲೇ ಇದ್ದ. ನಾನು ಕುರ್ಚಿಯ ಮೇಲೇ ಇದ್ದೆ.

ಆದರೆ ಅದೇಕೋ ಮಾತಿನ ಮಧ್ಯೆ ನಾನು ಮಂಚದ ಮೇಲೆ ಕುಳಿತೆ.

ಪ್ರಕೃತಿ !

ಪ್ರಕೃತಿ !!

ಪ್ರಕೃತಿ !!!

ಪ್ರಕೃತಿ ನನ್ನನ್ನೂ ಬಿಡಲಿಲ್ಲ. ಬೋಲ್ಟ್ ಬಡಿದಿತ್ತು, ಮನಸ್ಸು ಕದಲಿತ್ತು. ದೇಹ........ಹೆಸರಲ್ಲಿ ಕುರುಡಾಗಿ ನನಗೂ ಬಯಸಿತ್ತು ಸುರೇಶ್ ಮೇಲೆದ್ದು " ಇದೇನ್ ಡಿಯರ್ ಇಲ್ಲಿಗೆ ಬಂದೆ " ಎಂದು ಚುಂಬಿಸಿದ ನನ್ನನ್ನು

ಸಿಹಿ ಚುಂಬನ

ಜೇನ ಚುಂಬನ !!....ಥೂ !

ನಾನು ಉತ್ತರಿಸುವ ಬದಲು ಅವನ ಮುಖಕ್ಕೆ ಮುಖ ಕೊಟ್ಟೆ.

ಇಬ್ಬರ ಮನಸ್ಸು ಎಲ್ಲೆ ಮೀರಿ ಮೂಗುದಾರವಿಲ್ಲದ ಬಸವನಂತೆ ಯಾವುದಕ್ಕೊ ಸಿದ್ಧವಾಗಿದ್ದುವು.

ನಮ್ಮಿಬ್ಬರ ಬಲುದಿನದ ಆದರ್ಶ ಗಾಳಿಗೆ ತೂರಿಹೋಯಿತು.

ನಾಗಬಂಧ—ಲತಾಬಂಧ, ಗಳು ನಡೆದುವು. ಒಬ್ಬರು ತೋಳನ್ನು ಮತ್ತೊಬ್ಬರಿಗೆ ಹೊದಿಸಿದೆವು ಮತ್ತೊಬ್ಬರು ಮುಯ್ಯಿ ತೀರಿಸಿದೆವು.

ಒಬ್ಬರ ದೇಹ ಸೌಂದರ್ಯವನ್ನು ಮತ್ತೊಬ್ಬರು ಕಂಡೆವು ಎಂದು ಹೇಳಲೆ ?

ಪ್ರಕೃತಿ ತನ್ನ ಕೆಲಸ ಸಾಧಿಸಿಕೊಂಡಳು. ಇಬ್ಬರಿಗೂ ಅರಿವಾಯಿತು. ಮೂಕರಾದೆವು ?

ಯಾರದು ತಪ್ಪು ?

ನನ್ನದೇ !

" ದಯವಿಟ್ಟು ಕ್ಷಮಿಸು ಶಾಂತ "

—ಎಂದ ಸುರೇಶ ತಗ್ಗಿದ ಧ್ವನಿಯಲ್ಲಿ.

" ನನ್ನನ್ನು ಕ್ಷಮಿಸು ಸುರೇಶ್ "

—ಎಂದೆ ನಾನು.

" ಇಬ್ಬರದೂ ತಪ್ಪು—ಇಬ್ಬರದೂ ತಪ್ಪಿಲ್ಲ. ಮಿಂಚಿಹೋದುದನ್ನು ಮರೆಯೋಣ. ಮುಂದೆ ಎಂದಿನಂತೆ ಇರೋಣ "—ಎಂದ ಸುರೇಶ.

" ಸುರೇಶ್, ಏನಾದರೂ ಹೆಚ್ಚೂ ಕಮ್ಮಿಯಾದರೆ........ಆದರೆ........ ನೀನು ಮಾತ್ರ ನನ್ನ ಕೈ ಬಿಡಬೇಡ"–ಎಂದಾಗ ನನ್ನ ಕಣ್ಣಿನಿಂದ ನಾಲ್ಕುಹನಿ ನೀರು ನೆಲಕ್ಕೆ ಉರುಳಿ ಮಾಯವಾದುವು. ನಾನು ಮಾಡಿದ ಅಪರಾಧಕ್ಕೆ ಕ್ಷಮಾಪಣಾ ರೂಪವಾದ ನೀರನ್ನು ದೇವ ದೇವನ ಕಾಲನ್ನು ತೊಳೆಯಲು ಉಪಯೋಗಿಸಿದನೇನೊ !

" ಖಂಡಿತ ನಾನು ಅಂತಹ ಪಾಪಿಯಲ್ಲ ಶಾಂತ. ಏನಾದರಾಗಲಿ ನಿನ್ನನ್ನು ಮಾತ್ರ ಕೈಬಿಡಲಾರೆ. ನಾನು ಪಾಪಿ ದುಡುಕಿದೆ. ಆದರೂ ಹೆದರಬೇಡ ದೇವರು ಒಳ್ಳೆಯದನ್ನು ಮಾಡುತ್ತಾನೆ. ಇಗೋ ಆಣೆ ಇಟ್ಟು ಹೇಳುತ್ತೇನೆ. ನಿನ್ನನ್ನು ಬಿಡುವುದಿಲ್ಲ. ಮರೆಯುವುದಿಲ್ಲ ನನ್ನ ತಪ್ಪನ್ನು ಕ್ಷಮಿಸು. ನನ್ನನ್ನು ಮರೆಯಬೇಡ ".

—ಎಂದ ಅವನು ಡ್ರಾಯರ್ ಬಾಗಿಲು ತೆಗೆದು ನೂರು ರೂಪಾಯಿಯನ್ನು ನನ್ನ ಕೈಗೆ ಇಡಲು ಯತ್ನಿಸಿದ " ನನಗೆ ನಿನ್ನ ದುಡ್ಡು ಬೇಡ, ಪ್ರೀತಿ-ಪ್ರೇಮ ಎರಡಿರಲಿ " ಎಂದೆ.

ಅವನು ಉತ್ತರಿಸಲಿಲ್ಲ.

ಅಂದು ಮನೆ ಸೇರಿದಾಗ ಸಂಜೆ 5 ಘಂಟೆ, ನಿಸ್ತೇಜವಾದ ದಿನ ಅಂದು.

೫

ಅಂದಿನವರೆಗೂ ಇದ್ದ ಸ್ನೇಹ ಈಗ ಬೇರೊಂದು ಬಗೆಯಾಯಿತು. ಮೊದಲು ಕಾಲೇಜಿನ ಆವರಣದಲ್ಲಿ ಎಲ್ಲಿಯಾದರೂ ಒಬ್ಬರನ್ನೊಬ್ಬರು ಸಂಧಿಸಿದರೆ ಮುಖ ನೋಡಿ ನಗುತ್ತಿದ್ದೆವು ಈಗ ಆ ರೀತಿ ಇಲ್ಲವಾಗಿದೆ. ಸುರೇಶ್ ನನ್ನನ್ನು ಕಂಡರೆ ಮುಖ ತಗ್ಗಿಸಿ ನಡೆಯುತ್ತಾನೆ. ಆದರೆ ಅವನ ರೂಂಗೆ ನಾನು ಹೋದಾಗಲೆಲ್ಲಾ ನನ್ನ ಕ್ಷಮೆಯನ್ನು ಎಳೆಯ ಮಗುವಿನಂತೆ ಯಾಚಿಸುತ್ತಾನೆ, ಅವನಿಗೆ ಉತ್ತರ ಕೊಡಲು ನಾನು ಅಸಮರ್ಥಳಾಗುತ್ತೇನೆ.

ಈ ಮಧ್ಯೆ ಅವನು ಬರೆದಿದ್ದ ಯಾವುದೋ ಒಂದು ನಾಟಕಕ್ಕೆ ಯಾವುದೋ ಸಾಹಿತ್ಯ "ಅಕೆಡಮಿ" 500 ರೂಪಾಯಿಗಳನ್ನಿತ್ತು ಸನ್ಮಾನಿಸಿತ್ತು. ಆದಿನ ಅವನ ಕೊಠಡಿಯಲ್ಲಿ ಅವನ ಗೆಳೆಯರಿಗೆಲ್ಲಾ 'ಟೀ ಪಾರ್ಟಿ'. ನಾನೂ ನನ್ನ ಭಾವೀ ಬಾಳ ಗೆಳೆಯನ ಆನಂದದಲ್ಲಿ ಸಮ ಭಾಗಿಯಷ್ಟೆ? ಆದ್ದರಿಂದ ಹೋಗಿದ್ದೆ. ರಾತ್ರಿ ಮನೆ ಸೇರಿದಾಗ 8 ಘಂಟೆ. ದೇಹದಲ್ಲಿ ಯಾವುದೋ ಬಗೆಯ ಯಾತನೆಯಾಗತೊಡಗಿತ್ತು. ವಿಪರೀತವಾದ ಸಂಕಟ ಪ್ರಾಪ್ತಿಯಾಯಿತು. ಎರಡನೆಬಾರಿ ವಾಂತಿಯಾಯಿತು. ನಾನು ಗಾಭರಿಬಿದ್ದೆ. ತಾಯಿಯವರು "ಮನಸ್ಸಿಗೆ ಬಂದಹಾಗೆ ಕಾಲೇಜನ್ನು ಹತ್ತಿಸಿಕೊಂಡು ಸುತ್ತಿ ಸುತ್ತಿ ಸುಣ್ಣವಾಗುತ್ತಿಯಲ್ಲೇ ಮಗು. ವಿಶ್ರಾಂತಿ ತೆಗೋ ಸರಿಹೋಗತ್ತೆ" ಎಂದರು.

ಆದರೂ ಮನಸ್ಸಿಗೆ ಧೈರ್ಯ ಬೇಕಲ್ಲ? ಇಲ್ಲಿಗೆ ನಾಟಕ ನಡೆದೂ ತಿಂಗಳು ಒಂದೂವರೆಯಾಗಿತ್ತು. ಮೂರು ನಾಲ್ಕು ದಿನಗಳನಂತರ ನನ್ನ ದೇಹಸ್ಥಿತಿ ಹೀಗಾಗಲು ಕಾರಣವೇನೆಂದು ಖಚಿತವಾಯಿತು.

ಇಡೀ ಜೀವನದ ಅಧಃ ಪತನ ಆಯಿತೆಂದು ತಿಳಿಯಿತು.

—ನಾನು ಪಾಪಿ

—ತಂದೆಗೆ, ತಾಯಿಗೆ ದ್ರೋಹ ಎಸಗಿದವಳು

—ನಂಬಿದವರ ನಂಬಿಕೆಗೆ ಅನರ್ಹಳು.

ಊಟ ತಿಂಡಿಗಳಾವುವೂ ಬೇಡವಾದುವು. ಹಗಲಿರುಳು ಯೋಚನೆ ಹತ್ತಿತು—ಅಲೆ ಅಲೆಯಾಗಿ ಬಂದು ಅಪ್ಪಳಸತೊಡಗಿತು. ಸುಳಿ ಸುಳಿಯ ಮಧ್ಯೆ ನಾನೂ ಸಿಕ್ಕಿ ಸುರುಳಿಕೊಂಡು ಕೇವಲ ನಾಲ್ಕೇ ದಿನದಲ್ಲಿ ಕರಗಿ ಅರ್ಧವಾಗಿಬಿಟ್ಟೆ. ಮೊದಲಿನ ಅಂಗ ಸೌಷ್ಠವತೆ ಈಗ ಇಲ್ಲ. ದೇಹದ ಕಾಂತಿ ಮಾತ್ರ ಏಕೋ ಹೆಚ್ಚಿದೆ ! ಸ್ನಾನದ ಮನೆಯಲ್ಲಿ ದೇಹ ನೋಡಿಕೊಂಡಾಗ ನೆಲಕ್ಕೆ ಇಳಿದುಹೋದೆ. ಕಾಲೇಜಿಗೆ ಹೋಗಲಾರದೆ ಹೋದೆ. ಮಧ್ಯೆ ಒಂದು Period ರಜಾ ಇತ್ತು ಅಂದು ಕಾಫಿ ಭವನದ ಕಡೆ ನಡೆದೆ. ಸುರೇಶ್ ನನ್ನನ್ನು ಹಿಂಬಾಲಿಸಿ ಬಂದು—

" ಈಗ ರೂಂ ಕಡೆ ಹೋಗೋಣವೇ " ಎಂದ

" ಹೂಂ " ಎಂದು ಹೊರಟೆ.

ನಾನು ಬೆತ್ತದ ಕುರ್ಚಿಯ ಮೇಲೆ ಕುಳಿತೆ. ಸುರೇಶ್ ಹಾಸಿಗೆ ಏರಿದ. ಮತ್ತೆ ಹಿಂದಣ ಆ ' ದಿನ '—ಆ ದುರ್ದಿನ ಜ್ಞಾಪಕಕ್ಕೆ ಬಂತು ಬರಿಸಿಡಿಲಂತೆ ಬಡಿಯಿತು, ಅಲೆಯಂತೆ ಬಂದು ಅಪ್ಪಳಿಸಿತು. ಅಲ್ಲಿದ್ದ ವಿವೇಕಾನಂದರ ಪಟ ' ಏ ಹೆಣ್ಣೆ ವಿದ್ಯಾರ್ಥಿನಿಗೆ ಬ್ರಹ್ಮಚರ್ಯೆ ಅತಿ ಮುಖ್ಯವಾದುದು. ಬ್ರಹ್ಮಚರ್ಯೆ ಬಾಳ ಸಂಜೀವಿನಿ. ಬುದ್ಧಿಗೆ ' ಜ್ಯೋತಿಷ್ಮತೀ ತೈಲ. ' ನೀನು ಎಡವಿ ಬಿದ್ದೆ. ನಿನ್ನದು ಜಾರಿದ ಕಾಲು. ' ಎಂದಿತು.

ಪರಮಹಂಸರ ಪಟ ಗೀತೆಯ —

" ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ ।
ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ ।
ಕ್ರೋಧಾದ್ಭವತಿ ಸಮ್ಮೋಹಃ ಸಮ್ಮೋಹಾತ್ ಸ್ಮೃತಿ ವಿಭ್ರಮಃ ।
ಸ್ಮೃತಿ ಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥

" ಈ ಶ್ಲೋಕವನ್ನು ಮರೆತೆಯಾ ಮಗಳೆ? ದಿನವೂ ನಿಮ್ಮ ತಂದೆ ಓದುತ್ತಿರಲಿಲ್ಲವೆ ? " ಎಂದಿತು.

ಬುದ್ಧಿ ನಾಶಾತ್ ಪ್ರಣಶ್ಯತಿ !
ಬುದ್ಧಿ ನಾಶಾತ್ ಪ್ರಣಶ್ಯತಿ !!
ಎದೆಗೆ ಬರಸಿಡಿಲು ಬಡಿಯಿತು.

ಈ ಮೂಲೆಗೆ ತಿರುಗಿ ನೋಡಿದೆ. ಸೌಮ್ಯನಾದ ಕ್ರಿಸ್ತ ನಿಂತಿದ್ದ. ಕೈ ಅಗಲದ ಚಿತ್ರಪಟದಲ್ಲಿ ಉಸುರಿದ :— ಫರಿಸಾಯರು ವ್ಯಭಿಚಾರಿಣಿಯಾದ ಹೆಣ್ಣನ್ನು ನನ್ನ ಮುಂದೆ ಕರೆತಂದು ನನ್ನನ್ನು ಕುರಿತು—

' ಬೋಧಕನೆ, ಈ ಹೆಂಗಸು ವ್ಯಭಿಚಾರ ಮಾಡುತ್ತಿರುವಾಗಲೇ ಕೈಗೆ ಸಿಕ್ಕಿದಳು. ಇಂಥವರನ್ನು ಕಲ್ಲೆಸೆದು ಕೊಲ್ಲಬೇಕೆಂದು ಮೋಶೆಯು ಧರ್ಮ ಶಾಸ್ತ್ರದಲ್ಲಿ ನಮಗೆ ಅಪ್ಪಣೆ ಕೊಟ್ಟಿದ್ದಾನೆ ಈಕೆಯ ವಿಷಯದಲ್ಲಿ ನೀನು ಏನು ಹೇಳುತ್ತಿ ? '

—ಎಂದು ಕೇಳಿದಾಗ ನಾನು ಕೊಟ್ಟ ಉತ್ತರವನ್ನು ಬಲ್ಲೆಯಾ ?—

" ನಿಮ್ಮಲ್ಲಿ ಪಾಪವಿಲ್ಲದವರು ಯಾರೋ ಅವನೇ ಮೊದಲು ಆಕೆಯ ಮೇಲೆ ಕಲ್ಲನ್ನು ಹಾಕಲಿ "

ಅಲ್ಲೇ ಬುದ್ಧನ ಚಿತ್ರವೂ ಇತ್ತು. ಅದು—" ಸಚ್ಚಾರಿತ್ರದ ಅವಲಂಬನವಿಲ್ಲದೆ ಕೇವಲ ಪ್ರಾಯಶ್ಚಿತ್ತಾದಿ ಕರ್ಮಗಳನ್ನು ಮಾಡಿಕೊಂಡ ಮಾತ್ರದಿಂದಲೇ ಪಾಪಾಚರಣೆಯ ಪರಿಣಾಮ ಫಲದಿಂದ ಪಾರಾಗುವುದು ಸಾಧ್ಯವಿಲ್ಲ

ಮಾಡಿದ ಕರ್ಮಕ್ಕೆ ತಕ್ಕ ಫಲಾನುಭವವು ಸ್ವತಸಿದ್ಧ ; ಅದರಿಂದ ತಪ್ಪಿಸಿಕೊಳ್ಳಲು ಯಾರಿಗೂ ಯಾರ ಅನುಗ್ರಹದಿಂದಲೂ ಸಾಧ್ಯವಿಲ್ಲ " —ಎಂದಿತು.

" ಇದೇಕೆ ಶಾಂತ ಹೀಗೆ ಯೋಚನಾಪರಳಾಗಿದ್ದೀಯೆ "—ಎಂದ. ಈ ಮಾತು, ಆ ರೂಂ ನ ಎಲ್ಲ ವಸ್ತುಗಳೂ ನನ್ನನ್ನು ನೋಡಿ ಗಹಗಹಿಸಿ ನಕ್ಕು ನಲಿದು, ಅಟ್ಟಹಾಸದಲ್ಲಿ ಮೆರೆಯುತ್ತಿದ್ದಾಗ, ಅತಿ ಮಂದವಾಗಿ ನನ್ನ ಕಿವಿಗೆ ಬಿತ್ತು.

" ಆ........ಸುರೇಶ........ "

—ಎಂದು ಉಸುರಿದೆ.

" ಇದೇಕೆ ಒಂದೆರಡು ದಿನದಿಂದ ಏನೋ ಒಂದು ರೀತಿ ಇದ್ದೀಯೆ ? "

" ಏನನ್ನು ಹೇಳಲಿ.........ಎಲ್ಲಾ ನಿನ್ನ ಪ್ರಭಾವ "

" ಅಂದರೆ ! "

" ನಾನು...........ನಾನು ಸುರೇಶ, ನಿನ್ನ ಮಗುವನ್ನು ಹೊಟ್ಟೆಯಲ್ಲಿಟ್ಟುಕೊಂಡು ಆತ್ಮಹತ್ಯೆಗೆ ಉದ್ಯುಕ್ತಳಾಗುತ್ತಿದ್ದೇನೆ. ಕಡೆಯಬಾರಿ ನಿನಗೆ ಈ ಮಾತನ್ನು ಹೇಳುವ ಸಲುವಾಗಿ ಕಾದಿದ್ದೆ. "

ಸುರೇಶನಿಗೆ ಬರಸಿಡಿಲು ರಪ್ಪನೆ ಬಂದು ಬಡಿಯಿತು. ನಿಮಿಷದನಂತರ ಚೇತರಿಸಿಕೊಂಡ.

ಅಳುತ್ತಾ ಇದ್ದೆ ನಾನು.

" ಶಾಂತ.......ಶಾಂತ ಮೇಲೇಳು ....ಅಳಬೇಡ ಶಾಂತ "

—ಎಂದು ಸುರೇಶ್ ನನ್ನನ್ನು ಹಿಡಿದೆತ್ತಿ, ಕಣ್ಣೀರನ್ನು ಒರಸಿ—

" ಶಾಂತ ಅಳಬೇಡ. ನೀನು ಅತ್ತು ಅತ್ತು ನನ್ನನ್ನು ಹಿರಿದು ಕೊಲ್ಲಬೇಡ "—ಎಂದ.

ನಾನು ಅಳುವನ್ನು ನಿಲ್ಲಿಸಿದೆ.

" ಈಗ ದಾರಿ ತೋರಿಸುವವರು ಯಾರು ಸುರೇಶ ? "

—ಎಂದು ಉಸುರಿದೆ.

" ಚೈತನ್ಯ ಸ್ವರೂಪಿಯಾದ ದೇವನಿದ್ದಾನೆ. "

" ನೀನು ತತ್ವಜ್ಞಾನಿಯಂತೆ ಆಡಿ ಮೆಲ್ಲನೆ ನನ್ನ ಕೈ ಬಿಡುವೆಯಾ ಸುರೇಶ ? "

—ಎಂದಾಗ ಸುರೇಶ ಎದೆಗೆ ' ರಾಮಬಾಣ ' ವಾಯಿತು.

ಕೂಡಲೇ ನನ್ನ ಕಾಲಮೇಲೆ ಕುಸಿದು ಹೇಳಿದ—

" ನಾನು ಎಂದಿಗೂ ನಿನಗೆ ದ್ರೋಹ ಬಗೆಯಲಾರೆ ಶಾಂತ. ನನ್ನಾಣೆ–ನಿನ್ನಾಣೆ ಹೇಳುತ್ತೇನೆ. ಮತ್ತೆ ಇದೇ ಮಾತಾಡಿ ನನ್ನ ಕೊಲ್ಲಬೇಡ. ಧೈರ್ಯ ತಂದುಕೋ ಯಾವುದಕ್ಕೂ ನಾನಿದ್ದೇನೆ. " ಎಂದ.

ನಾನು ' ಬದುಕಿದೆಯಾ ಬಡಜೀವವೇ ?' ಎಂದುಕೊಂಡು–" ಮುಂದಣ ದಾರಿ ತೋರಿಸು ಸುರೇಶ್ " ಎಂದೆ.

" ಶಾಂತ ......ಆತ್ಮಹತ್ಯೆ ಕುಲಗೇಡಿಯ ಕೆಲಸ. ಅದನ್ನು ಮಾಡಲು ನನ್ನಾಣೆಗೂ ಯತ್ನಿಸಬೇಡ. ಈಗ ನನ್ನೊಡನೆ ಬಾ. ನನಗೆ ಬೇಕಾದ ಡಾಕ್ಟರ್ ಇದ್ದಾರೆ ಅವರಲ್ಲಿ ನಿನಗೆ ಔಷಧಿ ಕೊಟ್ಟು ಈ ಪೀಡೆ ತೊಲಗುವಂತೆ ಮಾಡುತ್ತೇನೆ. ಹೆದರಬೇಡ. ಅವರು ನನಗೆ ತುಂಬಾ ಆಪ್ತರು."

—ಎಂದು ನನ್ನನ್ನು ಕರೆದುಕೊಂಡು ಒಬ್ಬ ಡಾಕ್ಟರ್ ಬಳಿ ಸುರೇಶ್ ಹೊರಟ. ಆ ಡಾಕ್ಟರ್ ಸುರೇಶ್‌ನನ್ನು ಮುಗುಳ್ನಗೆಯಿಂದ ಸ್ವಾಗತಿಸಿದರು. ನಾನು ಕುರ್ಚಿಗೆ ಮೈ ಚೆಲ್ಲಿದ್ದೆ. ಸುರೇಶ್ ಡಾಕ್ಟರನ್ನು ಒಳಗೆ ಕರೆದುಕೊಂಡು ಹೋದ. ಸ್ವಲ್ಪ ಹೊತ್ತಾಯಿತು. ಡಾಕ್ಟರ್ ಹೊರಬಂದು " ಒಳಗೆ ಬನ್ನಿ"- ಎಂದರು ಡಾಕ್ಟರ್.

—ನಾನು ಒಳಗೆ ಹೋದೆ. ಸುರೇಶ್ ಜೊತೆಯಲ್ಲಿಯೇ ಇದ್ದ. ಡಾಕ್ಟರ್ ಕೈ ನೋಡಿ—

" ಎಷ್ಟು ತಿಂಗಳು ? " ಎಂದರು.

"..............."

" ಒಂದೂವರೆ " ಎಂದು ಉತ್ತರಿಸಿದ. ಡಾಕ್ಟರ್ ಒಳಗಡೆ ಹೋಗಿ ಯಾವುದೋ 'ಪಿಲ್ಸ್' ತಂದು ಬಾಯಲ್ಲಿ ಹಾಕಿ ನೀರು ಬಿಟ್ಟು 'ನುಂಗಿರಿ' ಎಂದರು, ನಾನು ನುಂಗಿದೆ.

" ನಿಮಗೆ ಏನೂ ಆಗುವುದಿಲ್ಲ. ಎಲ್ಲಾ ಸರಿಹೋಗುತ್ತೆ ಧೈರ್ಯವಾಗಿ ಇರಿ " ಎಂದರು ಡಾಕ್ಟರ್.

ಮರುದಿನವೇ ನಾನು ಹೊರಗಾದೆ. ತಾಯಿಯವರು ಇದನ್ನು ನೋಡಿ " ಇದೇನಮ್ಮ ಈ ತಿಂಗಳು ಹದಿನೈದು ದಿನ ತಡ ಆಯ್ತು " ಎಂದರು.

" ಗೊತ್ತಾಗಲಿಲ್ಲಮ್ಮ "

" ಹೊಟ್ಟೆಗೆ ಆಹಾರ ಪದಾರ್ಥಗಳು ಸರಿಯಿಲ್ಲ. ಹೊತ್ತಿಗೆ ಸರಿಯಾಗಿ ಊಟವಿಲ್ಲ ಇನ್ನೇನಾಗುತ್ತೆ ಹೇಳು. "

ಸಧ್ಯಃ ಇಷ್ಟಕ್ಕೆ ಮಾತು ಕೊನೆಗಂಡಿತು.

ಆ ನಾಲ್ಕುದಿನ ತುಂಬುತ್ತಿದ್ದಂತೆಯೇ ಭಾರೀ ಜ್ವರ ಬಂದು ನನ್ನನ್ನು ಆಕ್ರಮಿಸಿತು. ತಿಂಗಳೊಂದು ಉರುಳುವ ವರೆಗೂ ಆಸ್ಪತ್ರೆಯಲ್ಲೇ ಇದ್ದೆ.

ಹದಿನೈದು ದಿನಗಳಕಾಲ ವಿಪರೀತವಾದ ಜ್ವರವಂತೆ. ಮೈಮೇಲಿ ಪ್ರಜ್ಞೆಯೇ ಇರಲಿಲ್ಲವಂತೆ. ಯಾವಾಗಲೂ ' ಸುರೇಶ್ ' ಎಂದು ಕನವರಿಸಿಕೊಳ್ಳುತ್ತಿದ್ದೆನಂತೆ. ನಾನು ಸಾವಿನ ದವಡೆಯಿಂದ ಪಾರಾಗುವ ವೇಳೆಗೆ ನಮ್ಮ ಸೀನಿಯರ್ ಇಂಟರ್ ಪಬ್ಲಿಕ್ ಎಜ್ಸಾಮಿನೇಷ (Senior Inter public examination) ಮುಗಿದಿತ್ತು.

ಅಲ್ಲಿಂದ ಇಲ್ಲಿನವರೆಗೂ ಸುರೇಶನ ವಿಷಯ ನನಗೆ ಒಂದು ಚೂರೂ ಗೊತ್ತಿಲ್ಲ ಅವನನ್ನು ನೋಡಲೂ ಕೂಡ ಸಾಧ್ಯವಾಗಲಿಲ್ಲ.

ದಿನ ದಿನ ಕಳೆದಂತೆಲ್ಲಾ ಅವನನ್ನು ನೋಡುವ ಆಸೆ ಬಲಿಯತೊಡಗಿತು. ಆದರೂ ಅವನು ಸಿಗಲೇ ಇಲ್ಲ. ಸಿಗುವ ಸೂಚನೆಗಳೂ ಕಂಡು ಬರಲಿಲ್ಲ. ಮತ್ತೆ ಕಾಲೇಜಿನ ಬಾಗಿಲು ತೆಗೆಯಿತು. ಆಗಲೂ ಅವನು ಸಿಗಲಿಲ್ಲ. ಅಲ್ಲದೆ ಮನೆಯವರು ನನ್ನನ್ನು ಕಾಲೇಜಿಗೆ ಸೇರಿಸಲೇ ಇಲ್ಲ.

ಈ ಮಧ್ಯೆ ಅನೇಕ ದಿನ ಅವನಿಗಾಗಿ, ಅವನು ಇದ್ದ ರೂಂ ಕಡೆ ಹೋಗಿ ಬಂದೆ. ಅವನು ' ವಾಕ್ ' ಹೋಗುತ್ತಿದ್ದ ಸ್ಥಳಗಳನ್ನು ಸುತ್ತಿ ಬಂದೆ. ಆದರೂ ಪ್ರಯೋಜನವಿಲ್ಲ.

ಈ ಸಮಯಕ್ಕೆ ನನ್ನ ನಡವಳಿಕೆಗಳಿಂದ ನನ್ನನ್ನು ಎಲ್ಲರೂ " ಹುಚ್ಚಿ " " ಹುಚ್ಚಿ " ಎಂದು ಕರೆಯಲಾರಂಭಿಸಿದರು. ಹುಚ್ಚಿಯಂತೆಯೇ ನನ್ನ ನಡವಳಿಕೆಗಳು ಇದ್ದುವು. ಇದರಿಂದ ಮನೆಯವರು ನನ್ನನ್ನು ರೂಂಗೆ ಸೇರಿಸಿ ಬೀಗಹಾಕ ತೊಡಗಿದರು.

ನಾನು ಗಂಡುಬೀರಿಯಾಗಿಬಿಟ್ಟೆ. ನಮ್ಮ ಮನೆ ಮೇಲೆ ಹತ್ತುವುದು, ಬೀದಿ ಬೀದಿ ಸುತ್ತುವುದು ಮೊದಲಾದುವು ನನಗೆ ತಿಳಿಯದಂತೆ ಬಂದುಬಿಟ್ಟುವು.

ಮಧ್ಯ ಕುಡಿದವರಂತೆ ನಾನು ಆಡುತ್ತಿದ್ದೆ, ನಿಜ ! ನಾನು ಮಧ್ಯ ಕುಡಿದಿಲ್ಲವೆ ?

ನೀವೇ ಹೇಳಿ.... ನೀವೇ ಹೇಳಿ—ನಾನು ಮಧ್ಯ ಕುಡಿದೆನಲ್ಲ. ನೀವೇ ಕಂಡಿರಲ್ಲ. ಇಲ್ಲ ಎನ್ನಬೇಡಿ ಸುಳ್ಳು ಹೇಳಬೇಡಿ. ನಿಜ ಹೇಳಿ. ನಾನು ಮಧ್ಯ ಕುಡಿದಿಲ್ಲವೆ ? ಆ ಸುರೇಶ ಕುಡಿಸಿಲ್ಲವೆ ?

ಛೆ ! ಎನ್ನಬೇಡಿ ಆ ಬ್ರಾಹ್ಮಣರ ಹುಡುಗ ಮಧ್ಯ ಮುಟ್ಟಲ್ಲ ಎನ್ನಬೇಡಿ ಮುಟ್ಟಿದ್ದಾನೆ. ತಾನು ಕುಡಿದಿದ್ದಾನೆ. ನನಗೂ ಕುಡಿಸಿದ್ದಾನೆ.

ಆದ್ದರಿಂದಲೇ ಅಲ್ಲವೆ ನಾನು ಉನ್ಮತ್ತಳಾಗಿರುವುದು ?

" ಅಲ್ಲವೆ "

ಸುಳ್ಳು ಹೇಳಬೇಡಿ. ಅವನು ನನಗೆ ಕುಡಿಸಿದ್ದು ಮಧ್ಯವಲ್ಲ ' ಮಧು '

ಎಂತಹ ಮಧು ಬಲ್ಲಿರಾ ? ' ಪ್ರೇಮ ಮಧು ' ಇದನ್ನು ನನಗೂ ಕುಡಿಸಿ ತಾನೂ ಕುಡಿದ.

' ಪ್ರೇಮ ಮಧು ' ವನ್ನು ಕುಡಿದು ಈಗ ನಾನು " ಪ್ರೇಮ ಮಧೂ--ನ್ಮಾದಿನಿ ' ಯಾಗಿದ್ದೇನೆ.

ಪ್ರೇಮ ಮಧೂನ್ಮಾದಿನಿ ? !

ಪ್ರೇಮ ಮಧೂನ್ಮಾದಿನಿ ! ?

ತಿಳಿಯಿತೆ ? ತಿಳಿದಿರಬೇಕಷ್ಟೆ ನಿಮಗೆ ನನ್ನ ಹುಚ್ಚಿನ ಕಾರಣ........

ದಿನ ದಿನಕ್ಕೆ ನಾನು ಹುಚ್ಚಿಯೇ ಆಗಿಬಿಟ್ಟೆ.

—ತುಂಬಿತು ಒಂದು ವರ್ಷ ನಾನು ಹುಚ್ಚಿಯಾಗಿ.....

ಎರಡನೆಯ ವರ್ಷದ ಕಡೆಯಲ್ಲಿ ನನ್ನ ತಂದೆಗೆ ಯಾರು ಯಾರೋ " ಮದುವೆ ಮಾಡ್ಬಿಡಿ ಹುಚ್ಚು ಬಿಟ್ಹೋಗುತ್ತೆ " ಎಂದರು. ಇನ್ನು ಕೆಲವರು "ಹುಚ್ಚು ಬಿಟ್ಟ ಹೊರತು ಮದುವೆಯಾಗಲ್ಲ ; ಮದುವೆಯಾದ ಹೊರತೂ ಹುಚ್ಚು ಬಿಡಲ್ಲ " ಎಂದೇ ಬಿಟ್ಟರು.

ತಂದೆಯವರು ಗಂಡಿಗಾಗಿ ಊರು ಊರನ್ನು ಅಲೆದರು. ಎಲ್ಲೂ ಗಂಡು ಸಿಗಲಿಲ್ಲ. ಅವರು ಗಂಡು ಹುಡುಕಲು ಹೋದಾಗಲೆಲ್ಲಾ ನಾನು " ದೇವರೇ ಸಿಗದೇ ಇರಲಿ. ನನ್ನ ಸುರೇಶನೇ ನನ್ನ ಪತಿಯಾಗಲಿ ದಯೆಯಿಡು ದೇವ " ಎಂದು ಬೇಡಿಕೊಳ್ಳತೊಡಗುತ್ತಿದ್ದೆ. ನಮ್ಮ ಮನೆಯವರು ' ಮದುವೆ ' ಎಂದರೆ ಸಾಕು ನನ್ನ ಎದೆಗೆ ಗಂಡುಗೊಡಲಿಯ ಬಲವಾದ ಪೆಟ್ಟು ಬೀಳುತ್ತಿತ್ತು.

ಕಡೆಗೊಂದು ದಿನ ನನ್ನ ಪ್ರಾರ್ಥನೆಯನ್ನು ದೇವರೂ ತಿರಸ್ಕರಿಸಿದ.

ಪುರೋಹಿತ ಶ್ರೀಕಂಠಶಾಸ್ತ್ರಿಗಳು—

"ನಿಮ್ಮ ಮಗು ಹುಚ್ಚಿ ಎಂದು ಜನರು ಹಿಂಜರಿಯುತ್ತಿದ್ದಾರೆ. ನನಗೆ 300 ರೂಪಾಯಿ ಬಹುಮಾನ ಕೊಡಿ, ನಾನು 300 ರೂಪಾಯಿ ಸಂಬಳ ತೆಗೆದುಕೊಳ್ಳುವ ಡಾಕ್ಟರ್ ಒಬ್ಬನಿಗೆ ನಿಮ್ಮ ಮಗುವನ್ನು ಕೊಡಿಸುತ್ತೇನೆ"—ಎಂದರು.

ತಂದೆ ಒಪ್ಪಿದರು.

ಆಗತಾನೆ ಮೆಡಿಕಲ್ ಕಾಲೇಜಿನ ವ್ಯಾಸಂಗ ಮುಗಿಸಿ ತರುಣ ಡಾಕ್ಟರ್ ಪ್ರಕಾಶ್ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಟ್ರೈನಿಂಗ್ ಡಾಕ್ಟರ್ ಆಗಿ ಇದ್ದರು. ಇವರು ಬಂದು ನನ್ನನ್ನು ನೋಡಿಕೊಂಡು ಹೋದರು.

ಒಪ್ಪಿಯೂ ಒಪ್ಪಿದರಂತೆ !

ಬರಸಿಡಿಲ ಈ ಮಾತು ತಂದೆಯಿಂದ ಕೇಳಿಬಂತು. ವಿಧಿ ಇರಲಿಲ್ಲ. ದೇವರ ದಯೆಯಿಂದ ನನ್ನ ಮತ್ತು ಸುರೇಶರ ಸಂಬಂಧ ನಮ್ಮ ಮನೆಯವರಿಗೆ ತಿಳಿದಿರಲಿಲ್ಲ. ಅಥವಾ ತಿಳಿದೂ ಸುಮ್ಮನಿರುವರೋ ಏನೋ.

ಮನೆಯವರ ಹಿಂಸೆಯ ಮೇರೆಗೆ, ಹಿಡಿಯಲಾರದೆ ಡಾಕ್ಟರ್ ಪ್ರಕಾಶ್ ನಿಮ್ಮ ಕೈಹಿಡಿದೆ. ಈ ಪ್ರೇಮಮಧೂನ್ಮಾದಿನಿ ನಿಮಗೆ ಸರಿಯಾದವಳಲ್ಲ.

ಈ ದಿನ ನಮ್ಮಿಬ್ಬರ "ಪ್ರಸ್ತ".

ಈ ಪ್ರಸ್ತ ಸುರೇಶನೊಡನೆ ನನಗೆ ಆ ದಿನವೇ ಆಗಿದೆ. ಆದ್ದರಿಂದ ನೀವು ನನ್ನನ್ನು ಮುಟ್ಟಬೇಡಿ. ಇದೊಂದು ನನ್ನ ಬೇಡಿಕೆ. ಇಷ್ಟನ್ನು ನೀವು ನಮ್ಮಿಬ್ಬರ ಜೀವನದಲ್ಲಿ ನಡೆಸಿಕೊಟ್ಟರೆ ಸಾಕು. ನಾನು ನಿಮ್ಮ ಸೇವೆಯನ್ನು ಮಾಡುತ್ತೇನೆ. ನಿಮ್ಮ ಪಾದಸೇವಕಿಯಾಗಿರುತ್ತೇನೆ.

ಆದರೂ ಅವನನ್ನು ನಾನು ಮರೆಯಲಾರೆ.

ಆ ಸುರೇಶವನ್ನು ಮರೆಯಲಾರೆ ಡಾಕ್ಟರ್ ಪ್ರಕಾಶ್.

ನೀವು ಅಷ್ಟು ಮಾಡಿಕೊಡಲಾರಿರಾ. ನನ್ನನ್ನು ಮುಟ್ಟದೇ ನನ್ನೊಡನೆ ಸಂಸಾರ ಮಾಡಿ.

* * * * *

ಶಾಂತ ಯೋಚಿಸುತ್ತಾ, ತನ್ನ ಜೀವನವನ್ನೇ ಸಿಂಹಾವಲೋಕನ ಮಾಡಿ ನೋಡುತ್ತಾ ಪ್ರಸ್ತದ ಕೋಣೆಯಲ್ಲಿ ಮಲಗಿದ್ದಳು. ಮೇಲಿಂದ ಮೇಲೆ ಬಿಕ್ಕಳಿಸಿ ಬಿಕ್ಕಳಿಸಿ ಅಳುತ್ತಿದ್ದಳು.

ಡಾಕ್ಟರ್ ಪ್ರಕಾಶನಿಗೆ ಅವಳ ಅಳುವನ್ನು ಕೇಳಿ, ಕೇಳಿ ದುಃಖವೂ ಬಂತೂ ; ಯೋಚನೆಯೂ ಬಂತು. ಶಾಂತಳೊಡನೆ ತಾನೂ ಯೋಚಿಸುತ್ತ ಕುಳಿತ,

ಸಂತೋಷದ ಅರಮನೆಯಾಗಬೇಕಾಗಿದ್ದ ಪ್ರಸ್ತದ ಕೊಠಡಿ ಸ್ಮಶಾನ ಮೌನವನ್ನು ತಳೆಯಿತು.

ಡಾಕ್ಟರ್ ಪ್ರಕಾಶ್

ಹೆಣ್ಣಿನಾ ಗುಣವರಿಯೆ ಕಣ್ಣಿಗದು ಕಾಂಬುವುದೆ
ಸುಣ್ಣದ ಕಲ್ಲಿನೊಳು ಅಡಗಿ ಸುಡಗಿಚ್ಚು
ತಣ್ಣಗಿದ್ದಂತೆ ಸರ್ವಜ್ಞ ॥

೧

ಯೋಚನೆಯ ಸುಳಿ ಸುಳಿಯ ಮಧ್ಯೆ—

ಹೌದು !

ನನ್ನ ಬಾಳು ಇಲ್ಲಿನವರೆಗೂ ಅಪಘಾತದ ಮೇಲೆ ಅಪಘಾತವನ್ನು ಅನುಭವಿಸುತ್ತಾ ನಡೆದಿದೆ.

ಈ ದಿನವೂ ಅಂತೆಯೇ ಹಾಗಿದೆಯಲ್ಲ ! ?

ನಾನು ಯಾರು ನನ್ನ ಹಿತಚಿಂತಕರೆಂದು ಯೋಚಿಸುತ್ತಿದ್ದೆನೋ ಆ ಶಾಸ್ತ್ರಿಗಳೇ ಈಗ ನನಗೆ ದ್ರೋಹ ಬಗೆದಿದ್ದಾರೆ. ಛೆ ! ಹಾಗನ್ನಬಾರದು. ಆದರೂ ಈ ಶಾಂತಳ ಅಳುವನ್ನೂ ಮಾತುಗಳನ್ನೂ ಕೇಳಿದರೆ ಹಾಗೆ ಅನ್ನಿಸುತ್ತದೆ.

ಶಾಂತ ಹುಚ್ಚಿ !

ಹೌದು

ಶಾಂತ ಹುಚ್ಚಿ ! ! ಯಾವ ಹೆಣ್ಣಿನಿಂದ ನನ್ನ ಬಾಳು ಭವ್ಯವಾಗುವುದೆಂದು ತಿಳಿದಿದ್ದೆನೋ ಆ ಹೆಣ್ಣು ಹುಚ್ಚಿ.

ನಾನು ಕೈ ಹಿಡಿದ ಹೆಣ್ಣು ನನ್ನ ಕತ್ತಿಗೆ ಗುಂಡುಕಲ್ಲಾಗಿ ನನ್ನನ್ನೇ ಮುಳುಗಿಸಲು ಹೊರಟಿರುವಂತಿದೆ.

ಕೈಹಿಡಿದಾಕೆ ಬೆಂಡಾಗಿ ತೇಲಿಸಬೇಕಾಗಿತ್ತು ಆದರೆ ? ಶಾಂತ ದೇವರು ನಿನಗೇಕೆ ಈ ಹುಚ್ಚನ್ನು ಕೊಟ್ಟ ? ನೀನು—

“ ಪ್ರಕೃತಿ
    ಪ್ರಕೃತಿ
        ಪ್ರಕೃತಿ
ಅದೇಕೋ ನಾನು ಮಾತಿನ ಮಧ್ಯೆ ಮಂಚದ ಮೇಲೆ ಕುಳಿತೆ ”

—ಹೀಗೇಕೆ ಕೂಗುವೆ ?

ಯಾರ ಮಂಚ ? ಏನು ಕತೆ ? ಶಾಂತ. ನೀನೇಕೆ ಹೀಗೆ ನಿನಗೆ ನೀನೆ ಮಾತನಾಡುವೆ ?

" ಸುರೇಶ್, ಏನಾದರೂ ಹೆಚ್ಚೂ ಕಮ್ಮಿಯಾದರೆ........ಆದರೆ........ ನೀನು ಮಾತ್ರ ನನ್ನ ಕೈಬಿಡಬೇಡ. "

ಅರೆ ! ಸುರೇಶ್ ಯಾರು ? ನನ್ನ ಗೆಳೆಯ ಸುರೇಶನೆ ? ಇದೇಕೆ ಹೀಗೆ ಕೂಗುವೆ ಶಾಂತ. ದೇವರು ನಿನಗೆ ಸುಂದರ ರೂಪುಕೊಟ್ಟು ಒಳ್ಳೆ ಬುದ್ಧಿ ಕೊಡಲಿಲ್ಲವೆ ?

ಅಬ್ಬ !

" ನಾನು ಪಾಪಿ
ತಂದೆ-ತಾಯಿಗೆ ದ್ರೋಹ ಎಸಗಿದವಳು
ನಂಬಿದವರ ನಂಬಿಕೆಗೆ ಅನರ್ಹಳು "
—ಎಂದು ಕೂಗುತ್ತೀಯೇ ಏಕೆ ಶಾಂತ ?

ನೀನೇಕೆ ಪಾಪಿ ? ನನಗೆ ಅರ್ಥವಾಗುತ್ತಿಲ್ಲ. ತಂದೆ-ತಾಯಿಗಳಿಗೆ ಏನು ದ್ರೋಹ ಮಾಡಿದೆ. ?

ಹೌದು ! ನಿಮ್ಮ ತಂದೆ ತಾಯಿಗಳು ನನಗೆ ದ್ರೋಹಮಾಡಿದ್ದಾರೆ. ಹುಚ್ಚಿಯನ್ನು ಗಂಟಿಕ್ಕಿದ್ದಾರೆ.

ಶಾಂತ ನಿನ್ನನ್ನು ನೋಡಿದರೆ ಮರುಕ ಉಂಟಾಗುತ್ತದೆ. ಕನಿಕರ ಬರುತ್ತದೆ.

ನೀನು ಯಾವ ಜನ್ಮದಲ್ಲಿ ಏನು ಮಾಡಿದ್ದಕ್ಕೆ ದೇವರು ನಿನಗೆ ಈ ಶಿಕ್ಷೆ ವಿಧಿಸಿದ್ದಾನೆ ?

" ನನಗೆ ಮದುವೆ ಬೇಡ. ಮದುವೆ ಬೇಡ. "
—ಎಂದು ಶಾಂತ ಚೀರಿದಳು.

ನಾನು ಶಾಂತಳನ್ನು ಎಚ್ಚರಿಸಿ....

" ಏನು ಶಾಂತ ? ಏನು ಕೂಗುತ್ತಿರುವೆ. ನಾನು ನಿನಗೆ ಎಂದಿಗೂ ತೊಂದರೆ ಕೊಡುವುದಿಲ್ಲ. ನಿನ್ನ ಇಚ್ಛೆಯಂತೆ ನಾನು ನಡೆಯುತ್ತೇನೆ.

ಭಯಪಡಬೇಡ ಶಾಂತ. ಅದೇಕೆ ಮಲಗಿದ ಸಮಯದಿಂದಲೂ ಕೂಗುತ್ತಲೇ ಇರುವೆಯಲ್ಲ "—ಎಂದು ಮೃದುವಾಗಿ ಕೇಳಿದೆ.

ಶಾಂತ ಉತ್ತರಿಸದೇ ಮಲಗಿದಳು.

ಅವಳನ್ನು—ಅವಳ ಕನವರಿಕೆಯನ್ನೂ ಮನಗೊಟ್ಟು ಕೇಳಿ " ಇವಳು ಹುಚ್ಚಿ ಅಲ್ಲ " ನನ್ನಂತೆ ಒಬ್ಬ ದುರದೃಷ್ಟೆ ಎಂದುಕೊಂಡೆ.

ಅವಳ ಜೀವನವನ್ನು ಸುಂದರವಾಗಿ ಮಾಡುತ್ತೇನೆಂದು ಪಣತೊಟ್ಟೆ.

ಹೌದು ಇವಳು ನನ್ನಂತೆಯೇ ನಿರ್ಭಾಗ್ಯಳು.

ನಾನು ?

ನಾನು ಕೊಳ್ಳೇಗಾಲದ ತಾಲ್ಲೂಕು ಮುಡಿಗುಂಡದವನು. ನನ್ನ ತಂದೆ ನಮ್ಮ ಊರಿನ ನಾರಾಯಣಸ್ವಾಮಿ ದೇವಾಲಯದ ಪುರೋಹಿತ.

ಅದೊಂದು ದಿನ ನಾನು ಐದು ವರ್ಷದ ಮಗುವಾಗಿದ್ದಾಗ ತಂದೆ ನಾಗರ ಹಾವಿನ ಕಡಿತಕ್ಕೆ ತುತ್ತಾದರು. ನಮ್ಮನ್ನ ನಾರಾಯಣನ ಪಾಲು ಮಾಡಿದರು.

ತಂದೆ ಕಳೆದುಕೊಂಡ ಪಾಪಿ ತಾಯಿಯ ಮಡಿಲಲ್ಲಿ ಐದುವರ್ಷ ಬೆಳೆದೆ. ಆರನೆಯ ವರ್ಷ ತಾಯಿ ಕೆರೆಯಲ್ಲಿ ನೀರುತರಲುಹೋಗಿ ಕೆರೆಯ ಪಾಲಾದಳು. ನಾನು ಅನಾಥನಾದೆ.

ಯಾರೋ ನಮ್ಮ ಬಂಧುಗಳು ನನ್ನನ್ನು ಮೈಸೂರಿಗೆ ಕರೆತಂದು ಅನಾಥಾಲಯದಲ್ಲಿಟ್ಟು ಸ್ಕೂಲ್ ಸೇರಿಸಿ ಅನಾಥಾಲಯದ ಮೇನೇಜರ್ ಶ್ರೀಕಂಠಶಾಸ್ತ್ರಿಗಳ ಪಾಲು ಮಾಡಿ ಹೊರಟು ಹೋದರು.

ಅನಾಥಾಲಯದ ಕಲ್ಲುಬೆರೆತ ಅನ್ನ ತಿಂದು ಪುರೋಹಿತ ಶ್ರೀಕಂಠಶಾಸ್ತ್ರಿ ಪ್ರೇಮದಡಿಯಲ್ಲಿ ! ಬೆಳೆದು ಎಸ್. ಎಸ್. ಎಲ್. ಸಿ. ಯನ್ನು Ist class ನಲ್ಲಿ ಮಾಡಿ Intermidiate College ಸೇರಿದೆ.

ಕಾಲೇಜಿನಲ್ಲಿ King ನಾನೇ ಎಂದು ಹೇಳಿಕೊಳ್ಳಲು ಆನಂದವಾಗುತ್ತದೆ. ಎಲ್ಲಾ ಚರ್ಚಾ ಸ್ಪರ್ಧೆಯಲ್ಲೂ ನಾನೇ ಮೊದಲ ಬಹುಮಾನದ ಗಂಡನಾಗಿರುತ್ತಿದ್ದೆ. ಎಲ್ಲ ಆಟಗಳಲ್ಲೂ ನಾನೇ ಗಟ್ಟಿಗ. ನಾನೇ ಕಾಲೇಜಿನ ಛಾಂಪಿಯನ್ ಕೂಡ. ಆದರೆ ನನ್ನ ಹೈಸ್ಕೂಲಿನ ಪ್ರೀತಿಯ ಆತ್ಮೀಯ

ಗೆಳೆಯ ಎಸ್. ಎಸ್. ಎಲ್. ಸಿ. ಯಲ್ಲಿ ದಂಡೆಯಾತ್ರೆಯನ್ನು ಎರಡು ಭಾರಿ ಹೊಡೆದು ನನ್ನಿಂದ ದೂರವಾದ. ಅವನಿಲ್ಲದೆ ಬಾಳು ಬೇಸರದಿಂದ ಕೂಡಿತ್ತು. ಎರಡು ವರ್ಷ ಹೇಗೋ ಸಾಗಿ ಇಂಟರನ್ನು ಫಸ್ಟ್ ಕ್ಲಾಸಿನಲ್ಲಿ ಪಾಸ್ ಮಾಡಿದೆ.

ಮೆಡಿಕಲ್ ಕಾಲೇಜ್ ಕೊಡಲಾರದೆ ನನಗೊಂದು 'ಸೀಟ್' ಕೊಟ್ಟಿತು.

ಮೆಡಿಕಲ್ ಕಾಲೇಜಿಗೆ ಸೇರಿದ ದಿನವೇ "ನಾನು ಇನ್ನೊಬ್ಬರ ಆಶ್ರಯದಲ್ಲಿ ಬೆಳೆಯುತ್ತಿದ್ದೇನೆ. ನನ್ನ ಓದಿನಿಂದ ನಾಲ್ಕಾರು ಜನರಿಗೆ ಉಪಯೋಗವಾಗಲೇ ಬೇಕು. ಆ ರೀತಿಯಾಗಿ ನನ್ನ ಓದನ್ನು ಸಾರ್ಥಕಪಡಿಸಿಕೊಳ್ಳಬೇಕು".

–ಎಂದು ತೀರ್ಮಾನಿಸಿ ಅತಿಯಾದ ಶ್ರದ್ಧೆಯಿಂದ ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ನಡಿಸಿದೆ ಅವರಿವರಿಂದ ಬಂದ ತಿರಕೆ ಹಣದಿಂದ.

ಅನಾಥಾಲಯದ ಅನ್ನ, ಬೀದಿಯ ದೀಪದ ಓದು ನಾನು 'ಬ್ರೈಯಿನ್ ಸ್ಪೆಶಾಲಿಸ್ಟ್' ಆಗುವಂತೆ ಮಾಡಿತು. ಐದು ವರ್ಷದ ಸತತವಾದ ವ್ಯಾಸಂಗ ಮುಗಿದ ಮೇಲೆ ಬೆಂಗಳೂರು 'ಮೆಂಟಲ್ ಹಾಸ್ಪೆಟಲ್' ನಲ್ಲಿ ಒಂದು ವರ್ಷವಿದ್ದೆ. ನನ್ನ ಬುದ್ಧಿಶಕ್ತಿಯನ್ನು, ಕರ್ತವ್ಯ ನಿಷ್ಠೆಯನ್ನು ನೋಡಿದ ಮೈಸೂರಿನ ದೊಡ್ಡ ಡಾಕ್ಟರ್ ಶ್ರೀ ಸುಂದರಂ ನನ್ನನ್ನು ಮೈಸೂರಿಗೆ ತಮ್ಮ ಕೈಕೆಳಗೆ ಕೆಲಸಮಾಡಲು ಕರೆಸಿಕೊಂಡರು.

ಈಗ ಒಂಟಿಕೊಪ್ಪಲಿನಲ್ಲಿ ಒಂದು ಬಾಡಿಗೆ ರೂಂನಲ್ಲಿ ವಾಸ; ನಾರಾಯಣಅಯ್ಯರ್‌ರವರ ಹೋಟಲಿನಲ್ಲಿ ಊಟ. 250 ರೂ. ಸಂಬಳದ ಮನುಷ್ಯನಾದೆ.

ಅಂದು ಆಸ್ಪತ್ರೆಯಿಂದ ರೂಂಕಡೆ ಹೊರಟಿದ್ದೆ. ನನ್ನ ಅನಾಥಾಲಯದ ಮೇನೇಜರ್ ಪುರೋಹಿತ ಶ್ರೀಕಂಠಶಾಸ್ತ್ರಿಗಳು ಸಿಕ್ಕಿ—

"ಏನಯ್ಯ ಬಹಾಳ ಅಪರೂಪವಾಗಿಬಿಟ್ಟೆ, "—ಎಂದರು.

"ಅಪರೂಪವೆಂದರೇನು ಶಾಸ್ತ್ರಿಗಳೆ ? ಯಾವಾಗಲೂ ಮೈಸೂರಲ್ಲೇ ಕೊಳೆಯುತ್ತಾ ಇದ್ದೇನೆ."

" ಏನು ಮದುವೆಗಿದ್ವೆ ಮಾಡಿಕೊಂಡ್ರ ? "

ಇದ್ದಕ್ಕಿದ್ದಂತೆಯೇ ಶಾಸ್ತ್ರಿಗಳು ನನ್ನನ್ನು ಬಹುವಚನದಲ್ಲಿ ಮಾತ ನಾಡಿಸಿದರು. ನನಗೆ ಎಲ್ಲಿಲ್ಲದ ಆಶ್ಚರ್ಯವಾಯಿತು.

" .... " ಇಷ್ಟೇ ನನ್ನ ಉತ್ತರ.

" ನೋಡಿ, ಡಾಕ್ಟರ್ ಪ್ರಕಾಶ್ ಅಲ್ಲಿ ಒಂದು ಹೆಣ್ಣಿದೆ. ನಿಮಗೆ ಯೋಗ್ಯವಾಗಿದೆ. ಹೇಗೋ ದೇವರು ನಿಮ್ಮನ್ನು ಒಬ್ಬ ಮನುಷ್ಯರನ್ನಾಗಿ ಮಾಡಿದ. ಈಗ ನೀವು ಒಬ್ಬರು ಸಂಸಾರೀಕಸ್ತರು ಆದರೆ ನನಗೆ ಇನ್ನಿಲ್ಲದ ಆನಂದ "

ನಾನು ಅನಾಥನಾಗಿ ಅನಾಥಾಲಯ ಸೇರಿದ ದಿನದಿಂದ ನನ್ನನ್ನು ಪ್ರೀತಿಯಿಂದ ಕಂಡು ನಾನು ಈ ಮಟ್ಟವನ್ನು ಮುಟ್ಟಲು ನನಗಾಗಿ ದುಡಿದ ಜೀವಿ ಇದು. ಇದರ ಮನೆ ಬಚ್ಚಲನ್ನೂ ನಾನು ಬಳಿದಿದ್ದೇನೆ. ಆದರೂ ಇವರೇ ನನ್ನ ಸರ್ವಸ್ವ. ಇತ್ತೀಚಿಗೆ ನಾನು ' ಡಾಕ್ಟರ್ ಪ್ರಕಾಶ್ ' ಆದ ದಿನ ದಿಂದ ಇವರ ಮನೆ ಕಡೆ ಹೋಗುವುದು ಕಮ್ಮಿ ಮಾಡಿದ್ದೆ.

ಹೇಗಿದ್ದರೂ ಇವರು ನನ್ನ ತಂದೆ-ತಾಯಿ ಎಲ್ಲಾ ಆಗಿದ್ದುದರಿಂದ ಇವರ ಮಾತನ್ನು ಕಿತ್ತು ಹಾಕುವಂತಿರಲಿಲ್ಲ.

" ಅದಕ್ಕೇನಂತೆ ನೀವು ಹೇಳಿದಂತೆ ಕೇಳಲು ನಾನು ಸಿದ್ಧನಿದ್ದೇನೆ " —ಎಂದೆ.

ನಾನು ಮನುಷ್ಯನಲ್ಲವೆ ? ಮದುವೆಯಾಗುವ ಚಪಲ ಸಹಜ.

" ಹಾಗಾದರೆ ಮುಂದಿನ ಭಾನುವಾರ ಹೆಣ್ಣು ನೋಡಲು ಹೋಗಿದ್ದು ಬರೋಣವೆ ? "

—ಶಾಸ್ತ್ರಿಗಳ ಅವಸರ ಹೇಳತೀರದು.

ಮದುವೆ ಎಂದರೆ ಬಾಯಿ ಮಾತೆ ? ದುಡ್ಡು ಕಾಸು ಬೇಡವೆ ? " ಮುಂದಿನ ಭಾನುವಾರ ಬೇಡಿ ಶಾಸ್ತ್ರಿಗಳೇ ಯಾವುದಕ್ಕೂ ನಾನೇ ನಿಮ್ಮನ್ನು ಕಾಣುತ್ತೇನೆ "—ಎಂದೆ.

" ಹಾಗೇ ಮಾಡಿ "—ಎಂದು ಅವರು ಶಾಲನ್ನು ಹೆಗಲ ಮೇಲೆ ಸರಿ ಮಾಡಿಕೊಳ್ಳುತ್ತಾ ಮಾರ್ಕೆಟ್ ನುಗ್ಗಿದರು.

ನಾನು ತಿಂಗಳು ಎರಡಾದರೂ ಶಾಸ್ತ್ರಿಗಳಿಗೆ ಮುಖ ತೋರಿಸಲಿಲ್ಲ.

ಮೂರನೆಯ ತಿಂಗಳ ಹೊತ್ತಿಗೆ ಶಾಸ್ತ್ರಿಗಳೇ ಬಂದು ರಾತ್ರಿ 10 ಘಂಟೆಯಲ್ಲಿ ನನ್ನ ರೂಂಗೇ ಬಂದು ‘ ಮದುವೆಯಾಗೆಂದು ” ಹಿಂಸಿಸಿದರು.

ಅವರ ಇಚ್ಛೆಯಂತೆ ಹೆಣ್ಣನ್ನು ನೋಡಿದೆ. ಹೆಣ್ಣು ರೂಪಸಿ ; ಅಬ್ಬ ! ಅಂತಹ ಚೆಂದುಳ್ಳ ಹೆಣ್ಣನ್ನು ನಾನು ನೋಡಿಯೇ ಇರಲಿಲ್ಲ. ಹೆಸರು ಶಾಂತ.

ಶಾಂತ.

ಹೆಸರು ಎಷ್ಟು ಮಧುರ—ಮನೋಹರ.

ರೂಪೂ ಅಷ್ಟೇ.

ರೂಪು ನೋಡಿ ಒಪ್ಪಿದೆ.

ಹೆಣ್ಣು “ ಮೇಲೆ ತಳಕು ಒಳಗೆ ಹುಳಕು ”. ಶಾಂತ ಈಗೆಲ್ಲಾ ಮಾತನಾಡಿಕೊಳ್ಳಲು ಅವಳು ಆ ಸುರೇಶನಲ್ಲಿ ಅನುರಕ್ತಳಾಗಿರುವಳೆ ?

ಯಾರು ಆ ಸುರೇಶ ?

ಸುರೇಶ ? ? ? ! ! !........

ಸುಮಾರು ಹದಿನೆಂಟು ಇಪ್ಪತ್ತರ ಹುಡುಗ. ಹೋದ ವರ್ಷ ಮೈಸೂರಲ್ಲೇ ಓದುತ್ತಿದ್ದ. ನನಗೆ ಪರಿಚಿತ. ಪರಿಚಿತನಷ್ಟೇ ಅಲ್ಲ ಗೆಳೆಯನೂ ಹೌದೂ. ಗೆಳೆಯನಷ್ಟೇ ಅಲ್ಲಾ ಮಿತ್ರನೂಹೌದು—ಆತ್ಮೀಯನೂ ಹೌದು.

ಅವನೇ ?

ಏಕಿರಬಾರದು.

ಹಾಗಾದರೆ ನಾನು ಇನ್ನೊಬ್ಬರ ವಸ್ತುವನ್ನು ಸ್ವೀಕರಿಸಿದನೆ ?

ಛೇ ! ಇವೆಲ್ಲಾ ಕೆಟ್ಟ ಯೋಚನೆಗಳು.

ಅಂತೂ ಶಾಂತಳಿಗೆ ಯಾವುದೋ ಒಂದು ಜೀವನದಲ್ಲಿ ಅಪಘಾತದ ಪೆಟ್ಟು ಬಿದ್ದಿದೆ, ಆದ್ದರಿಂದಲೇ ಅವಳು ಹೀಗಾಗಿದ್ದಾಳೆ.

ಏನಾದರಾಗಲಿ ಎಂತಾದರಾಗಲಿ ಶಾಂತ ನನ್ನ ಬಾಳ ಗೆಳತಿಯ ಬಗ್ಗೆ ನನ್ನ ಕಡೆಯ ತೀರ್ಮಾನವಿಷ್ಟೆ. ‘ ಶಾಂತ ನೀನು ಎಂತಹವಳು ಬೇಕಾದರೂ ಆಗಿರು. ಶಾಸ್ತ್ರಿಗಳು ಮೋಸಮಾಡಿಯೋ ಮಾಡದೆಯೋ ನಿನ್ನನ್ನು ನನ್ನ

ಕತ್ತಿಗೆ ಕಟ್ಟಿದರು. ನೀನು ಕತ್ತಿಗೆ ಕಟ್ಟಿದ ಮುಳುಗಿಸುವ ಗುಂಡಾದರೂ ಆಗಿರು ; ಇಲ್ಲ ತೇಲಿಸುವ ಬೆಂಡಾದರೂ ಆಗಿರು. ನೀನು ಮಾತ್ರ ಯಾವುದೋ ಕಷ್ಟದಲ್ಲಿದ್ದೀಯೆ ನಿನ್ನ ಮತ್ತು ನಿನ್ನ ತಂದೆಯ ಬಗ್ಗೆ ನಾನು ಕೋಪಮಾಡಿ ಕೊಳ್ಳದೆ, ನಿನ್ನ ಕಷ್ಟ ಪರಿಹರಿಸಲು ಏನನ್ನು ಬೇಕಾದರೂ ಮಾಡುತ್ತೇನೆ. ನಿನಗಾಗಿ ಪ್ರಾಣಬೇಕಾದರೂ ಕೊಡುತ್ತೇನೆ. ನಿನ್ನನ್ನು ಮನುಷ್ಯಳನ್ನಾಗಿ ಮಾಡುತ್ತೇನೆ. ಇಷ್ಟೆಲ್ಲ ಮಾಡಲು ಕಾರಣವನ್ನೂ ತಿಳಿಸುತ್ತೇನೆ. ನಾನು ಒಳ್ಳೆಯದು ಕೆಟ್ಟದ್ದು ಎರಡನ್ನೂ ತೂಗಿ ಪ್ರತ್ಯಕ್ಷವಾಗಿ ಕಂಡದ್ದನ್ನು ಪ್ರಮಾಣಿಸಿ ನೋಡುವ ಆದರ್ಶವ್ಯಕ್ತಿ. ಅಲ್ಲದೆ ನಿನ್ನ ಮೂರು ಲೋಕವನ್ನೇ ಮೋಹಿಸುವ ರೂಪು ನಿನ್ನನ್ನು ಹೇಗಾದರೂ ಪಡೆಯಲೇ ಬೇಕು ಎನಿಸುತ್ತದೆ. ನಿನ್ನಂಥ ರೂಪಸಿಯನ್ನು ತೊರೆದು ಸಮಾಜದ ಎದುರು ಬೀದಿಯಲ್ಲಿ ಗಂಡ ನಿಲ್ಲದ ಹೆಣ್ಣಾಗಿ ನಿಲ್ಲಿಸಲಾರೆ. ನಿನ್ನ ರೂಪು ಅಂತಹದ್ದು. ತಿಳಿಯಿತಾ ಶಾಂತಾ.' ?

ಇಡೀ ಬಾಳ ಸಿಂಹಾವಲೋಕನ ಮಾಡಿದೆ •ಅಂದು ರಾತ್ರಿಎಲ್ಲಾ. ಪ್ರಸ್ತದ ಕೊಠಡಿಯಲ್ಲೂ ಏಕಾಂತವಾಸ ಅನುಭವಿಸಿದೆ. ನನ್ನ ಯೋಚನೆಯಲ್ಲಾ ಮುಗಿಯುತ್ತಿದ್ದಂತೆ ಸೂರ್ಯ ಹುಟ್ಟುವ ಸೂಚನೆಗಳು ಕಂಡುವು.

"ಶಾಂತಾ............ಶಾಂತಾ ಾ ಾ"

—ಎಂದೆ.

ಎಚ್ಚರವಾಗಿಯೇ ಶಾಂತ ಏನನ್ನೋ ಯೋಚಿಸುತ್ತಾ ಇದ್ದಳು. ಶಾಂತ ನನ್ನ ಮುಖವನ್ನೇ ದುರುದುರು ನೋಡಿ ಕಣ್ಣೀರಿಟ್ಟಳು. ನನಗೂ ದುಃಖವಾಯಿತು.

"ಶಾಂತ. ಖಂಡಿತ ನೀನು ಯೋಚಿಸುತ್ತಾ ಇದ್ದೀ. ಅಳುತ್ತಾ ಇದ್ದೀ. ನಿನ್ನ ಯೋಚನೆಯನ್ನು ನನ್ನಲ್ಲಿ ಹೇಳು ನಾನು ನಿನಗಾಗಿ ಏನನ್ನೂ ಬೇಕಾದರೂ ಮಾಡುತ್ತೇನೆ. ದಯವಿಟ್ಟು ಅಳಬೇಡ ಶಾಂತ."

—ಎಂದೆ.

"ನೀವು ನನ್ನನ್ನು ಉದ್ಧರಿಸುವಿರಾ ?"

—ಶಾಂತ ಮೆಲ್ಲಗೆ ಉಸುರಿದಳು

" ಹಾಗಂದರೇನು ಚಿನ್ನ; ನಿನಗಾಗಿಯೇ ಈ ಜೀವಿ ಜಗತ್ತಿನಲ್ಲಿ ಇರುವುದು "

" ಹಾಗಾದರೆ ಈ ದಿನ ನಾನು ನಿಮಗೆ ಮಾಡಿದ ದ್ರೋಹಕ್ಕಾಗಿ ತಂದೆಯ ಮೇಲೆ ರೇಗಬೇಡಿ. ನನ್ನ ಮೇಲೆ ಕೋಪಿಸಿಕೊಳ್ಳಬೇಡಿ. ನನ್ನ ಬೇಡಿಕೆ ನಡೆಸಿಕೊಡಿ. ನಾನು ಸೇವಕಿಯಂತೆ ನಿಮ್ಮ ಸೇವೆ ಮಾಡುತ್ತೇನೆ.

" ಯಾವ ಬೇಡಿಕೆ ಶಾಂತ ? "

" ರಾತ್ರಿ ಹೇಳಲಿಲ್ಲವೆ ? ಅದು "

" 'ಅಸಿಧಾರ' ವ್ರತವೇ ? "

" ಹೌದು "

—ಎಂದು ಮೆಲ್ಲಗೆ ಉಸುರಿದಳು. ಆದರೆ ಅವಳ ವಿಶಾಲವಾದ ನೇತ್ರಗಳು ನನ್ನ ಉತ್ತರವನ್ನೇ ಕಾತುರತೆಯಿಂದ ನೋಡುತ್ತಿದ್ದುವು.

" By all means " ಎಂದೆ.

ಮೇಲೆದ್ದು ನಿಂತಳು. ಆ ರೂಪಸಿಯನ್ನು ನೋಡಿ ಮುಗ್ಧನಾದೆ.

ಅಬ್ಬ ಏನು ರೂಪು ಅವಳದು !

ಜಗತ್ತಿನ ಸೌಂದರ್ಯದ ಗಣಿ ಇದು ಎನ್ನಿಸಿತು.

'ದೇವ ಇವಳ ನನ್ನ ಬಾಳನ್ನು ಉದ್ಧರಿಸು' ಎಂದೆ.

೨

ದಿನಗಳು ಉರುಳಿದುವು. ಶಾಂತಳೊಡನೆ ಬ್ರಹ್ಮಚಾರಿಯಾಗಿ ಸಂಸಾರವನ್ನು ಒಂಟಿಕೊಪ್ಪಲಲ್ಲೇ ಹೂಡಿದೆ. ಪುಟ್ಟದಾದರೂ ಅಚ್ಚುಕಟ್ಟಾದ ಮನೆಯನ್ನು ಬಾಡಿಗೆಗೆ ಕೊಂಡೆ. ಆದರೂ ಶಾಂತಳೊಡನೆ ಬೇಸರದ ಬರಡು ಬಾಳು ಪ್ರಾರಂಭವಾಯಿತು. ದಿನ ಕಳೆದಂತೆಲ್ಲಾ ಶಾಂತ ಹುಚ್ಚಿಯಾಗ ತೊಡಗಿದಳು. ಆದರೂ ಬೆಳಗ್ಗೆ ಆರಕ್ಕೆ ಹಾಸಿಗೆ ಇಂದ ಎದ್ದು ನೀರು ಕಾಯಿಸಿ ನನ್ನನ್ನು ಏಳಿಸಿ ಸ್ನಾನಕ್ಕೆ ನೀರು ಕೊಟ್ಟು, ತಾನೂ ಸ್ನಾನಮಾಡಿ, ನಾನು ಸಂಧ್ಯಾವಂದನೆಯ ಶಾಸ್ತ್ರ ತೀರಿಸುವಷ್ಟರಲ್ಲಿ ಕಾಫಿ ಮಾಡಿ ಕೈಗೆ ಕೊಡುತ್ತಿದ್ದಳು. ಮತ್ತೆ ರಾತ್ರಿ ನಾನು ಅಲ್ಲಿ-ಇಲ್ಲಿ ಅಲೆದು ಬರುವವರೆಗೂ ಕಾದು, ಬಂದ ಕೂಡಲೇ ನನಗೆ ಉಣಬಡಿಸಿ ತಾನೂ ಉಂಡು, ನಾನು ಹಾಸಿಗೆಗೆ ತಲೆ ಕೊಟ್ಟ ನಂತರ ತಾನು 'ಡೈರಿ' ಬರೆಯಲು ಕೂರುತ್ತಿದ್ದಳು. ಕೆಲವು ದಿನಗಳು ಬೆಳಗಾಗುವವರೆಗೂ ಡೈರಿ ಬರೆದುದುಂಟು.

ನಾನು "ಶಾಂತ ನಿದ್ರೆಗೆಡಬೇಡ ಮಲಗು" ಎಂದರೆ ಕೇಳುತ್ತಲೇ ಇರಲಿಲ್ಲ.

ಗಂಡ-ಹೆಂಡತಿಯರೆಂದು ಹಾಸ್ಯದ ಒಂದು ಮಾತಿಲ್ಲ. ಪ್ರೇಮದ ಒಂದು ಜಗಳವಿಲ್ಲ. ಕಾಮದ ಕಂಟಂತೂ ಮೊದಲೇ ಇಲ್ಲ.

ದಿನವೂ ನಾನು ಆ ಸುಂದರಿಯನ್ನು ನೋಡಿ, ನೋಡಿ ತೃಪ್ತಿಪಡ ಬೇಕಿತ್ತು. "ಅಸಿಧಾರಾ" ವ್ರತವನ್ನು ಶಾಂತಳ ಮನಸ್ಸಿನ ತೃಪ್ತಿಗಾಗಿ ಆಚರಿಸಬೇಕಿತ್ತು ಅವಳು ಮನೆಗೆ ಬಂದ ದಿನದಿಂದಲೂ ಒಳ್ಳೆ "ಪ್ಯೂರಿಟನ್ಸ್" ಗಳ ಹಾಗೆ ಅತ್ಯಂತ ಪ್ರಶಾಂತಳಾಗಿರುತ್ತಾ ಇದ್ದಳು. ಇದು ನನಗೆ ಬೇಸರ. ನಾನಾಗಿ ನಾನೇ ಮೇಲೆಬಿದ್ದು ಒಂದೆರಡು ಮಾತನಾಡಿದರೆ "ಉಂಟು-ಇಲ್ಲ" ಎಂದು ಒಂದೇ ಮಾತಲ್ಲಿ ಉತ್ತರಿಸುವಳು. ಅವಳ ಈ ರೀತಿಯ ಮನೋ

ರೋಗಕ್ಕೆ ಕಾರಣವೇನೆಂದು ನಾನು ಎಷ್ಟು ಯೋಚಿಸಿದರೂ ತಿಳಿಯಲಿಲ್ಲ. ಅವಳನ್ನೇ ಅನೇಕದಿನ ಪ್ರಶ್ನಿಸಿದುದೂ ಉಂಟು :—

"ಶಾಂತ, ಇದೇಕೆ ಈಗ ಅತಿ ಮೌನಿಯಾಗಿದ್ದೀಯೆ ?"

"ಏನನ್ನು ಮಾತನಾಡಬೇಕಿತ್ತು ? ಅಂತಹದೇನೂ ಇಲ್ಲವಲ್ಲ"

—ಎಂದು ಮನಸ್ಸಿಲ್ಲದ ಮನಸ್ಸಿನಿಂದ ಉತ್ತರಿಸುವಳು. "ಹೊಸದಾಗಿ ಮದುವೆಯಾದ ಹೆಣ್ಣುಗಳೆಲ್ಲಾ ನಿನ್ನಂತೆ ಯಾವಾಗಲೂ ಕೆಲಸಕ್ಕೆ ಬಾರದ ವಿಷಯ ಕುರಿತು ಯೋಚಿಸುವರೇ ?"

"ನಾನೇನೂ ಯೋಚಿಸುತ್ತಿಲ್ಲವಲ್ಲ"

"ಚಿಂತೆ ಸಂಕ್ರಾಂತಿಯ ಎಳ್ಳುಬೆಲ್ಲವಲ್ಲ. ನೀನೊಬ್ಬಳು ಅದನ್ನು ನಿನ್ನ ತಲೆಗೆ ಅಂಟಿಸಿಕೊಂಡರೆ, ನೀನೇ ಕೊರಗಬೇಕು"

"ನಿಮ್ಮನ್ನು ನಾನು ನನ್ನ ಚಿಂತೆಯಲ್ಲಿ ಪಾಲುಗೊಳ್ಳಲು ಕರೆಯಲಿಲ್ಲವಲ್ಲ"

"ಶಾಂತ........"

"ಆ........"

"ನಿನ್ನ ಚಿಂತೆಗೆ ಕಾರಣ ತಿಳಿಸಲಾರೆಯಾ ? ನೀನೇಕೆ ಯಾವಾಗಲೂ ಮೌನಿಯಾಗಿರುವೆ ? ನನ್ನೊಡನೆ ಸಂಸಾರ ಮಾಡಲು ನಿನಗೆ ಇಚ್ಛೆ ಇಲ್ಲವೆ ?"

"ನನ್ನ ಉದ್ಧಾರಕರು ನೀವೇನಾ ?"

—ಈ ತರಹದ ಅವಳ ಉತ್ತರಕ್ಕೆ ಏನು ಹೇಳಬೇಕೋ ತಿಳಿಯುತ್ತಿರಲಿಲ್ಲ.

"ಅಲ್ಲ ಎನ್ನುವೆಯಾ........?"

"ಅಲ್ಲ ಎನ್ನಲಿಲ್ಲ. ಇದುವರೆಗೂ ನನ್ನೆಡೆಗೆ ನೀವು ತೋರಿರುವ ಪ್ರೀತಿಯಿಂದ, ಕನಿಕರದಿಂದ ನಾನು ನಿಮಗಿಂತಲೂ ಸಾವಿರ ಪಾಲಿಗೆ ಕೀಳಾಗಿ ಕಾಣುತ್ತಿದ್ದೇನೆ—ಅಲ್ಲವೆ ? ದಯವಿಟ್ಟು ಬೇಡದ ಪ್ರಶ್ನೆ ಕೇಳಬೇಡಿ. ಅದರಿಂದ ನನಗೆ ತುಂಬಾ ಯಾತನೆಯಾಗುತ್ತದೆ."

ದಿನ ದಿನ ಕಳೆದಂತೆಲ್ಲಾ ಇವಳು ಯಾರನ್ನೊ ಮನದಲ್ಲೇ ಚಿಂತಿಸುತ್ತಾ ಇರುವಳೆಂದು ಖಚಿತಗೊಂಡೆ. ರಾತ್ರಿ ಹೊತ್ತಿನಲ್ಲಿ ಅನೇಕದಿನ ಮನಸ್ಸಿಗೆ ಬಂದಂತೆ ಕನವರಿಸುತ್ತಿದ್ದಳು.........

ವರುಷ ಒಂದು ಉರುಳಿತೆಂದು ಕಾಣುತ್ತೆ. ಅಂದು ರಾತ್ರಿ ಇದ್ದಕ್ಕಿದ್ದಂತೆಯೇ ಶಾಂತ ನನ್ನ ಬಳಿ ಬಂದು ತಾಂಬೂಲ ಮಡಸಿಕೊಡುತ್ತಾ ಒಮ್ಮೆ ನಕ್ಕು—

" ಈಗ ಪಿಚ್ಚರ್‌ಗೆ ಹೋಗೋಣವೆ ? "—ಎಂದಳು

ಆ ಮಹಾ ರೂಪಸಿ ಮೊದಲ ಭಾರಿಗೆ ನಕ್ಕಾಗ ನನಗೆ ಇನ್ನಿಲ್ಲದ ಸಂತೋಷವಾಯಿತು. ಅವಳನ್ನು ಬರಸೆಳೆದು ಚುಂಬಿಸಿದೆ. ಅವಳ ಮನಸ್ಸಿಗೆ ತುಂಬಾ ನೋವಾಗಿ ಮಾತನಾಡದೆ ಮೌನಿಯಾದಳು:

" ಕ್ಷಮಿಸು ಶಾಂತ. ನಾನೂ ಮನುಷ್ಯ. ಮಧ್ಯೆ ಮಧ್ಯೆ ಎಡವಿ ಬೀಳುವುದು ಸಹಜ. ನಡೆ ಈಗ ಪಿಕ್ಚರ್‌ಗೆ ಹೋಗೋಣ "— ಎಂದು ಹೊರಟೆ. ಈ ಒಂದು ವರುಷದ ಧೀರ್ಗಅವಧಿಯಲ್ಲಿ ಆಕೆ ನನ್ನನ್ನು ಪಿಕ್ಚರ್‌ಗೆ ಕರೆದುದು ಇದೇ ಮೊದಲ ಭಾರಿ !

ಏನನ್ನೊ ಹೇಳಬೇಕೆಂದು ಅವಳ ಮನಸ್ಸು ಕಾತುರಪಡುತ್ತಿತ್ತು ಎನ್ನುವ ಹಾಗೆ ಕಾಣುತ್ತೆ. ದಾರಿಯಲ್ಲಿ ಎರಡು ಮೂರು ಭಾರಿ ನನ್ನ ಪಕ್ಕಕ್ಕೆ ಬಂದು, ಮತ್ತೆ ಸುಮ್ಮನಾಗುತ್ತಿದ್ದಳು.

ಹೋಗುವಾಗ ನಾನೂ ಕೂಡ ಏನನ್ನೂ ಮಾತನಾಡದೆ ಶಾಂತ ಏನನ್ನು ಹೇಳುವಳೋ ನೋಡೋಣ ಎಂದು ಕಾದಿದ್ದೆ. ಆದರೆ ಶಾಂತ ಬಾಯಿ ಬಿಡಲೇ ಇಲ್ಲ.

ಬರುವಾಗ—

" ಶಾಂತ....ನಿನ್ನನ್ನು ಒಂದು ವಿಷಯ ಕೇಳುತ್ತೇನೆ ಮನಸ್ಸಿಗೆ ಏನನ್ನೂ ತಿಳಿದುಕೊಳ್ಳದೆ ಇದ್ದರೆ........" ಎಂದೆ ನಾನು.

" ಕೇಳಿ ಅದಕ್ಕೇನಂತೆ ? "

—ಎಂದಳು—ಹಾಗೆಯೇ ಪಕ್ಕಕ್ಕೆ ಬಂದು ನನ್ನನ್ನು ಒರಗಿಕೊಂಡೇ ನಡೆಯುತ್ತಾ.

" ಶಾಂತ.......ಶಾಂತ.......ರಾತ್ರಿಹೊತ್ತಿನಲ್ಲಿ ನೀನು ಕನವರಿಸುವಾಗ 'ಸುರೇಶ' ಎಂದು ಕೂಗುವೆಯಲ್ಲ...............ಅವನು ಯಾರು ? "

ಶಾಂತ ತರತರ ನಡುಗಿಹೋದಳು. ನಾನು ಹಾಗೆಯೇ ಅವಳನ್ನು ಬಲವಾಗಿ ಹಿಡಿದುಕೊಂಡೆ.

" ಉತ್ತರಿಸುವುದಿಲ್ಲವೆ ಶಾಂತ ?.......ಅದೇಕೆ ಹೀಗೆ ನಡುಗಿದೆ. ನಿನಗಿರುವ ಕಷ್ಟವನ್ನು ನನ್ನಲ್ಲಿ ಹೇಳು ಶಾಂತ. ನಿನ್ನ ಸೇವಕನಂತೆ ನಿನ್ನ ಕಷ್ಟವನ್ನು ಪರಿಹರಿಸುತ್ತೇನೆ. "

—ಎಂದೆ.

" ದಯವಿಟ್ಟು ಸ್ವಾಮಿ, ಆ ಮಾತನ್ನು ಆಡಿ ಈ ಪಾಪಿಯನ್ನು ಕೊಲ್ಲ ಬೇಡಿ. ನನ್ನನ್ನು ಇನ್ನಾರಾದರೂ ಕೈಹಿಡಿದಿದ್ದರೆ ನಾನು ಬದುಕುತ್ತಲೇ ಇರಲಿಲ್ಲ. ನೀವು ನಿಜಕ್ಕೂ ದೇವರು—ದೇವರು ನಿಮ್ಮ ಅಪಾರ ಪ್ರೇಮದ ಅಡಿದಾವರೆಯಲ್ಲಿ ನಾನು ಸುರಕ್ಷಿತವಾಗಿದ್ದೇನೆ. ದಯವಿಟ್ಟು ಅದನ್ನು ಮಾತ್ರ ಕೇಳಬೇಡಿ. ನನ್ನನ್ನು ಹಿಂಸಿಸಿದರೆ ನಾನು ಪ್ರಾಣಬಿಟ್ಟುಬಿಡುತ್ತೇನೆ.

—ಎಂದು ಉತ್ತರಿಸುತ್ತಾ ಕಣ್ಣೀರಿನಿಂದ ನನ್ನ ಹೆಗಲನ್ನು ತೊಳೆದಳು.

" ಶಾಂತ ನೀನು ಸಾಯುವುದೂ ಬೇಡ. ನಾನು ಕೇಳುವುದೂ ಬೇಡ. ನಾನು ನಿನ್ನ ಸುಖಕ್ಕಾಗಿ ಕೇಳಿದೆ. ನಿನಗೇ ಹೇಳಲು ಇಚ್ಛೆ ಇಲ್ಲವಾದರೆ ಬೇಡ. ಒಂದು ವರ್ಷಕ್ಕೆ ನೀನು ಎಷ್ಟು ಇಳಿದು ಹೋಗಿರುವೆ ಬಲ್ಲೆಯಾ ? ನಿನ್ನನ್ನು ನೋಡಿ ನಾನು ಸಂಕಟಪಡಲಾರೆ "

—ನಾನು ಈ ರೀತಿ ಎಂದಾಗ—

"ಈ ಪಾಪಿಯನ್ನು ಕೈಹಿಡಿದು ಬಲು ಕಷ್ಟ ಅನುಭವಿಸುತ್ತಾ ಇರುವಿರಿ".

—ಎಂದು ಭಾರವಾದ ನಿಟ್ಟುಸಿರುಬಿಟ್ಟಳು.

ಬೆಳಗ್ಗೆ ಏಳುವಷ್ಟರಲ್ಲಿ ಶಾಂತ ಜ್ವರಪೀಡಿತಳಾಗಿದ್ದಳು. ಹದಿನೈದು ದಿನ ವಿಪರೀತ ಜ್ವರ ಶಾಂತಳನ್ನು ಸಾಕುಮಾಡಿತು.

ದಿನವೂ ಅವರ ತಂದೆ ಬಂದು ಹೋಗುತ್ತಿದ್ದರು. ಆದರೆ ಅವರ ತಾಯಿ ಮಾತ್ರ ಇಲ್ಲೇ ಇದ್ದರು. ನಮ್ಮ ಮಾವನವರ ಮನೆ ಇರುವುದು ಚಾಮುಂಡಿ ಎಕ್ಸ್‌ಟೆನ್ಷನ್ನಲ್ಲಿ.

ಜ್ವರ ತಾಪದ ಬೇಗೆಯಲ್ಲಿ—

" ರ್ರೀ ಕಾಪಾಡಿ. ರ್ರೀ ಕಾಪಾಡ್ರಿ. ರ್ರೀ ರ್ರೀ "

—ಎಂದು ನನ್ನ ಹೃದಯಕ್ಕೆ ಈಟಿ ಚುಚ್ಚಿ—

" ನನ್ನಿಂದ ನಿಮಗೆ ತುಂಬಾ ತೊಂದರೆ ".

—ಎಂದು ಈಟಿಯನ್ನು ಹಿಂದಕ್ಕೆ ಎಳೆಯುವಳು.

ಕಾಯಿಲೆಯಿಂದ ಮೇಲೇಳುವ ಹೊತ್ತಿಗೆ ದೇವರು ಅವಳ ಪಾಲಿಗೆ ಕರುಣಿಸಿದ್ದುದು 'ಮೂಳೆ-ಚಕಳ' ಎರಡು ಮಾತ್ರ. ಆದರೆ ದಿನ ಕಳೆದಂತೆಲ್ಲಾ ಚೇತರಿಸಿಕೊಂಡಳು.

........ನನಗೂ ಪ್ರಾಣದಾನ ಮಾಡಿದಳು ಎಂದೇ ಹೇಳಬೇಕು.

ಅವಳನ್ನು ಕಂಡರೆ ನನಗೆ ಇನ್ನಿಲ್ಲದ ಪ್ರೇಮ ಅವಳಿಗೂ ನನ್ನನ್ನು ಕಂಡರೆ ಅಷ್ಟೇ ಪ್ರೇಮ. ಆದರೆ ಮಧ್ಯೆ ಯಾವುದೋ ಭೂತ ಅವಳನ್ನು ಸೇರಿ ನಮ್ಮಿಬ್ಬರನ್ನೂ ಬೇರ್ಪಡಿಸುತ್ತಿದೆ.

ಯಾವುದಾ ಭೂತ ?........

ಸಿನಿಮಾದಿಂದ ಬರುವಾಗ ನಾನು ಆ ಪ್ರಶ್ನೆ ಕೇಳಿದ್ದಕ್ಕೆ ತರತರನೆ ನಡುಗಿದಳೇಕೆ ? ?............

ಆ ದೊಡ್ಡ ಕಾಯಿಲೆ ಏಕೆ ಅವಳನ್ನು ಆವರಿಸಿತು ? ? ?

ಒಂದೂ ಅರ್ಥವಾಗಲಿಲ್ಲ................

೩

ಶಾಂತ ಕಾಯಿಲೆಯಿಂದ ಎದ್ದು ತಿಂಗಳಾರು ಉರುಳಿತ್ತು.

ಎಷ್ಟು ದಿನ ತಾನೆ ನಾನು ಅಸಿಧಾರಾ ವ್ರತಧಾರಿಯಾಗಲು ಸಾಧ್ಯ ?

ಆದಿನ ಗೆಳೆಯನೊಬ್ಬನೊಡಗೂಡಿ ಚೆನ್ನಾಗಿ ಕುಡಿದು, ಅಲ್ಲಿ ಒಬ್ಬಾಕೆಯ ಮನೆಯಲ್ಲಿದ್ದು ರಾತ್ರಿ ಮೂರಕ್ಕೆ ಮನೆಗೆ ಹಿಂತಿರುಗಿದೆ.

ಮುಗ್ಧೆ ; ಸ್ನಿಗ್ಧೆ ಶಾಂತ ನನಗಾಗಿ ಕಾದು ಕುಳಿತಿದ್ದಳು. ನನ್ನನ್ನು ಕಂಡೊಡನೆ—

" ಊಟದ ಯೋಚನೆಯೇ ಇಲ್ಲವೆ ? ಹೊಟ್ಟೆಯನ್ನೂ ಮರೆತಿರಾ ? "

—ಎಂದು ಕೇಳಿದಳೇ ವಿನಾ 'ನನ್ನನ್ನು ರಾತ್ರಿ ಮೂರರವರೆಗೆ ಒಂಟಿಯಾಗಿ ಏಕೆ ಬಿಟ್ಟಿರಿ ' ? ಎಂದು ಕೇಳಲಿಲ್ಲ.

" ಊಟ ಬೇಕಿಲ್ಲ " ಎಂದು ಮಲಗಿದೆ.

ಶಾಂತ ಎಂದಿನಂತೆ ಪಕ್ಕದಲ್ಲಿ ಮಲಗಿದಳು. ಐದು ನಿಮಿದದ ನಂತರ ಮೇಲೆದ್ದು ದೀಪ ಹಾಕಿ, ನನ್ನ ಬಳಿ ಬಂದು— " ರೀ ನೀವು ಇದನ್ನು ಎಷ್ಟು ದಿನದಿಂದ ಕಲಿತಿರಿ ? ಯಾರು ನಿಮಗೆ ಕುಡಿಯಲು ಕಲಿಸಿದವರು ? "—ಎಂದಳು. ನನಗೆ ರೇಗಿತು.

" ಯಾರು ಎಂದರೆ ನೀನೆ. ನನಗೆ ಬೇಕಾದ್ದು ಮನೆಯಲ್ಲಿ ಸಿಗದಿದ್ದಾಗ ನಾನು ಏನು ಮಾಡಲಿ ? ಎಲ್ಲೊ ಹೋಗಿ ಕುಡಿದಿದ್ದೆ. ಎಲ್ಲೋ ಹೋಗಿ ಮಲಗಿದ್ದೆ ಈಗ ಬಂದೆ " —ಎಂದೆ.

" ಅರ್ಥವಾಯಿತು. ಏಳಿ ಏಳಿ ಮೇಲೇಳಿ "

—ಎಂದು ಕೂಗಿದಳು. ನಾನು ಮೇಲೆದ್ದೆ. ಹಾಸಿಗೆಯ ಮೇಲೆ ಓಡಿಬಂದು ಬಿದ್ದುಕೊಂಡು—

" ಈ ಪಾಪಿಯಿಂದ ಕೆಡುವುದು ಬೇಡ. ಈ ಪಾಪಿ ಇರುವುದೂ ಬೇಡ. ಹೂಂ ನಿಮ್ಮ ಆಸೆ ತೀರಿಸಿಕೊಳ್ಳಿ. ನಾನು ಸಿದ್ಧಳಿದ್ದೇನೆ. ನನ್ನಿಂದಲೇ

ಕೆಟ್ಟಿರಾ ? ರಾಮರಾಮ ಅದು ಬೇಡ. ಸುಮ್ಮನೇಕೆ ಕುಳಿತಿರಿ. ಪಶ್ಚಾತ್ತಾಪ ಕೃತ್ಯಕ್ಕೆ ಎರಗಿ. ಅಂಜಬೇಡಿ. ಅಳುಕಬೇಡಿ "

—ಎಂದಳು. ನನಗೆ ಎಡೆ ನಡುಗಿತು. ಎಂತಹ ಕೋಮಲವಾದ ಹೆಣ್ಣು ; ಮನಸ್ಸೂ ಅಷ್ಟೇ ಕೋಮಲ. ನಾನೆಂತಹ ಪಾಪಿ. ಈ ಮುಗ್ಧೆಗೆ ದ್ರೋಹ ಮಾಡಿದೆ ಎನಿಸಿತು. ಕೂಡಲೇ ಎದ್ದು—

" ಶಾಂತ ಕ್ಷಮಿಸು. ಕ್ಷಮಿಸು. ಅಪರಾಧ ಮಾಡಿದೆ. ನೀನು ಇಷ್ಟು ದೊಡ್ಡವಳೆಂದು ಅರ್ಥ ಮಾಡಿಕೊಳ್ಳಲಿಲ್ಲ "

—ಎಂದು ಅವಳ ಕಾಲು ಹಿಡಿದುಕೊಂಡೆ. ಕೂಡಲೇ ಅವಳು ಮೇಲೆದ್ದು—

" ನನ್ನ ಕಾಲು ಮುಟ್ಟಬೇಡಿ. ನನ್ನಾಣೆ. ನಾನು ಅದಕ್ಕೆ ಯೋಗ್ಯಳಲ್ಲ "—ಎಂದಳು ಸಿಂಹಿಣಿಯಂತೆ. ಅವಳ ಮಾತು ಕಟ್ಟಾಜ್ಞೆಯಂತಿತ್ತು.

ನಾನು ಅವಳ ಮುಖವನ್ನೇ ನೋಡುತ್ತಿದ್ದೆ.

" ನೀವು ಮಾಡಿದ್ದು ತಪ್ಪಲ್ಲವೋ ? "

—ಎಂದು ಮತ್ತೆ ಕೇಳಿದಳು.

" ಹೌದು "—ಎಂದು ಒಪ್ಪಿಕೊಂಡೆ.

" ನಾನು ಕೊಟ್ಟ ಶಿಕ್ಷೆ ಅನುಭವಿಸುವಿರೋ ? "

" ಆಗಲಿ "

" ಏಳಿ. ನಡೆಯಿರಿ. ಸ್ನಾನಕ್ಕೆ ನೀರು ಕಾದಿದೆ. ಸ್ನಾನಮಾಡಿ ದೇವರನ್ನು ಕ್ಷಮಾಪಣೆ ಕೇಳಿ ನಡೆಯಿರಿ "

—ಎಂದು ನನ್ನನ್ನು ಕರೆದುಕೊಂಡು ಹೋಗಿ ಕಾದಿದ್ದ ನೀರಿನಿಂದ ಸ್ನಾನ ಮಾಡಿಸಿ, ಕ್ಷಮಾಪಣೆ ಕೇಳುವಂತೆ ಮಾಡಿದಳು.

ಆಗ ಅರಿತೆ !

ಅರಿತೆ ! !

ಶಾಂತ ಹುಚ್ಚಿಯಲ್ಲ.

ಶಾಂತ ಹುಚ್ಚಿಯಲ್ಲ ಎಂದು ಗೊತ್ತಾಗಿತ್ತು, ಆದರೂ ಅನುಮಾನವಿತ್ತು ಅದೂ ಪರಿಹಾರವಾಯತು.

' ಶಾಂತ ನೀನು ದೇವತೆ. ನಿನ್ನ ಕಷ್ಟವನ್ನು ನಾನು ಪಾರುಮಾಡದೆ ಸತ್ತರೆ ದೇವರು ಮೆಚ್ಚುವುದಿಲ್ಲ. ' ಎಂದುಕೊಂಡೆ.

ಶಾಂತ ಸುಂದರಿ ಮಾತ್ರವಲ್ಲ, ಸುಗುಣಿಯೂ ಹೌದು ; ಸುಗುಣಿ ಮಾತ್ರವಲ್ಲ ಸುಜ್ಞಾನಿಯೂ ಹೌದು.

ಆದರೂ ಶಾಂತ ಹಾಗೇಕೆ ಆಡುತ್ತಾಳೆ ?............

೪

ಶಾಂತಳೊಡನೆ ಸಂಸಾರ ಮಾಡುವುದೆಂದರೆ—ಇತ್ತೀಚೆಗೆ ಅತಿ ಬೇಸರದ ಕೆಲಸವಾಗಿಬಿಟ್ಟಿದೆ.

ಒಂದು ತಮಾಷೆ ಇಲ್ಲ; ಒಂದು ಸಂತೋಷದ ಮಾತಿಲ್ಲ; ಒಂದು ದಿನವಾದರೂ ಶಾಂತ ನನ್ನೊಡನೆ ನಗುತ್ತಾ ಇದ್ದ ದಿನವೇ ಇಲ್ಲ. ನಿಜವಾಗಿಯೂ ಆಗತಾನೆ ಮದುವೆಯಾದವರು ಎಷ್ಟು ಆನಂದದಲ್ಲಿ, ಸರಸಸಲ್ಲಾಪದಲ್ಲಿ, ಚಕ್ಕೊಂದದ ಅರಮನೆಯಲ್ಲಿ, ಜಗಳದ ಜಂಜಾಟದ ಸವಿಯಲ್ಲಿ ಇರುತ್ತಾರೆ—ಈ ಭಾಗ್ಯ ನನಗಿಲ್ಲ.

ನಾನು ಮನುಷ್ಯನಾಗಿ ಇರಲು ಸಾಧ್ಯವೇ ಇಲ್ಲವೋ—ಏನೋ ಎಂಬ ಶಂಕೆ ಹುಟ್ಟಿಸಿದ ದಿನಗಳೆಷ್ಟೋ ?

ಪಕ್ಕದಲ್ಲೇ ಮೂರು ಲೋಕದ ಸುಂದರ ವಸ್ತುಗಳನ್ನೆಲ್ಲಾ ಒಂದೆಡೆ ಭಾರೀ ಮೂಸೆಯಲ್ಲಿ ಹಾಕಿ, ಕುದಿಸಿ, ಬಂದ ಸಾರದಿಂದ ಅತಿ ಕಷ್ಟಪಟ್ಟು ಸಿದ್ಧಪಡಿಸಿದ ಸುಂದರಿ ಮಲಗಿದ್ದಾಳೆ. ನನ್ನ ಕೈಹಿಡಿದ ದಿನದಿಂದಲೂ ನಾನು ಅವಳನ್ನು ಮುಟ್ಟುವಂತಿಲ್ಲ—ಆದರೆ ಅವಳ ರೂಪು ನನ್ನ ದೇಹದ ನರನಾಡಿಗಳಲ್ಲೂ, ರಕ್ತದ ಕಣಕಣಗಳಲ್ಲೂ ಪ್ರವಹಿಸಿ, ಉದ್ರೇಕಗೊಳಿಸುತ್ತದೆ. ಆ ಸುಂದರಿಯ ಮುಂದೆ ಕುಳಿತಿರುವುದೇ ಇತ್ತೀಚೆಗೆ ಕಷ್ಟವಾಗುತ್ತ ಬಂದಿದೆ.

ಅವಳನ್ನು ನೋಡಿದರೆ ಸಾಕು, ಆ ಮುಗ್ಧ ಸುಂದರಿಯ ಮಹಾ ಸೌಂದರ್ಯ ನನ್ನನ್ನು ಉದ್ರೇಕಗೊಳಿಸಿ, ಮೋಹದ ಮಡುವಿನಲ್ಲಿ ಅದ್ದಿ ಮೇಲೆತ್ತುತ್ತದೆ.

ಶಾಂತ " ದಯವಿಟ್ಟು ನನ್ನನ್ನು ಮುಟ್ಟಬೇಡಿ " ಎಂದು ದೈನ್ಯದಿಂದ ಬೇಡಿಕೊಳ್ಳುತ್ತಾಳೆ.

ಆದರೆ ಅವಳ ಆ ಸುಂದರವಾದ ಮುಖ........

ಕೆನ್ನೆ........

ಚೆಂದುಟಿ........

ಮೊಲೆ........

ತೋಳು ....

ನಖ........

ಶಿಖ........

ತೊಡೆ........

ನನಗೆ ಕಾಮ ಪ್ರಚೋದಕವಾಗಿವೆ.

ಈ ಜಗದ ನೀತಿ—

—ಕೆಂದುಟಿ ಎಂದರೆ ಚುಂಬಿಸಿದಂತೆ.

—ನಳಿ ತೋಳುಗಳೆಂದರೆ ಬಿಗಿದಪ್ಪಿದವರಂತೆ.

—ಸುಂದರವಾದ ಸ್ಪುಟವಾದ ಮೊಲೆ ಎಂದರೆ ಎದೆ ಸೋಕಿದವರಂತೆ

ನಾನು ಯಾವ ಜನ್ಮದಲ್ಲಿ ಮಾಡಿದ ಯಾವ ಪಾಪದ ಫಲವೋ ಇದು ತಿಳಿಯಲಿಲ್ಲ—ಅಸಿಧಾರಾವ್ರತ.

ಮೂರುದಿನದಿಂದ ಅನ್ನ ಕಾಣದವನ ಮುಂದೆ ಬಗೆ ಬಗೆಯ ಬಕ್ಷ್ಯಗಳನ್ನಿಟ್ಟು ಊಟಮಾಡಬೇಡ ಎಂದು ಕಟ್ಟಪ್ಪಣೆ ಮಾಡಿದರೆ—

ಹೀಗಿದೆ ನನ್ನ ಬಾಳು.

'ಅವಳ ಮಾತನ್ನು ಲೆಕ್ಕಿಸದೇ ಹಿಡಿದು ಎಳೆದುಕೊಂಡರೆ?' ಅನೇಕ ಬಾರಿ ಮನಸ್ಸು ಈ ರೀತಿ ಮಾಡಲು ಬಯಸುತ್ತದೆ.

ಆದರೆ ಮರುಕ್ಷಣದಲ್ಲೇ ಎತ್ತಣದೋ ಆದರ್ಶ ಬಂದು ನನ್ನ ಹುಚ್ಚುತನಕ್ಕೆ ಔಷಧಿ ಕೊಡುತ್ತದೆ.

ದಿನಕಳೆದಂತೆಲ್ಲಾ ಬ್ರಹ್ಮಚಾರಿಣಿ ಶಾಂತಳ ರೂಪು ಪುಟಕ್ಕಿಟ್ಟ ಚಿನ್ನದಂತೆ ಪ್ರಜ್ವಲಿಸತೊಡಗಿದೆ— ಜಾಜ್ವಲ್ಯಮಾನವಾಗಿ ಬೆಳಗ ತೊಡಗಿದೆ. ಮೊದಲಿನಂತೆ ಈಗ ಅವಳು ಬಡಕಲಾಗಿಲ್ಲ. ಈಗ ಅವಳ ಪ್ರತಿಯೊಂದು ಸುಂದರ ಅಂಗಗಳೂ ಸೌಷ್ಟವತೆಯಿಂದ ಜಗತ್ತನ್ನು ಮೋಹಿಸುತ್ತದೆ.

ಆದರೂ—

ಅವಳು ಪ್ರಶಾಂತಳಾಗಿ, ಲೈಂಗಿಕ ವಿಷಯದಲ್ಲಿ ಏನೂ ತಿಳಿಯದ ಮಗು ವಿನಂತೆ ಇದ್ದುಬಿಟ್ಟಿದ್ದಾಳೆ.

ಅವಳರೂಪು — ಸೌಂದರ್ಯ— ಅಂಗಸೌಷ್ಟವತೆ ದಿನದಿನಕ್ಕೆ ಇಮ್ಮಡಿ ಮುಮ್ಮಡಿ, ನೂರ್ಮಡಿ ಸಾವಿರಮಡಿಯಾಗುತ್ತದೆ.

ಆದರೂ ಅವಳಿಗೆ ಅವಳ ಸುಂದರ ದೇಹದ ಮೇಲೆ ನಿಗವೇ ಇಲ್ಲ.

ದಿನವೂ ಏನನ್ನೊ ಕುರಿತು ಚಿಂತಿಸುತ್ತಾಳೆ —

ಮನೆ ಕೆಲಸ ಮಾಡುತ್ತಾಳೆ —

ಡೈರಿ ತಪ್ಪದೇ ಬರೆಯುತ್ತಾಳೆ—

ನನ್ನ ಮನಸ್ಸನ್ನು ಗೋಳು ಹುಯುತ್ತಾ ತಾನು ನಿರಪರಾಧಿನಿಯಂತೆ ಕಂಗೊಳಿಸುತ್ತಾಳೆ.

ನಾನು— ?

ನನ್ನ ಪಾಡು— ??

ದಿನ ದಿನ ಕಳೆದಂತೆಲ್ಲಾ ನಾನೇ ಹುಚ್ಚನಾಗುತ್ತಾ ಬಂದೆ.

ಹೆಚ್ಚೇಕೆ ಹೇಳಲಿ ? ವಿಚಿತ್ರವಾದ ಚಿಂತೆಗಳೂ ಕಾಡತೊಡಗಿದುವು.

‘ ಶಾಂತ ನಿನಗೆ ನನ್ನ ಸ್ಥಿತಿ ಅರ್ಥವಾಗದೆ ?......................!! ?

ಅರ್ಥವಾಗುವುದೇ ಇಲ್ಲವೇ ? ’

‘ ಏಕೆ ? ’

‘ ನೀನು ಯಾರನ್ನೋ ಯೋಚಿಸುತ್ತಾ ನನ್ನನ್ನು ವಂಚಿಸುತ್ತಾ........

‘ ಛೆ ! ಶಾಂತ ನನ್ನನ್ನು ವಂಚಿಸುತ್ತಿಲ್ಲ. ’

‘ ಆದರೂ........? ’

ಈ ರೀತಿಯ ಯೋಚನೆಯಲ್ಲಿ ದಿನಗಳು ನಿಧಾನವಾಗಿ ಸಾಗುತ್ತಿದ್ದುವು. ಇಷ್ಟರಲ್ಲಿ ನನ್ನ ಅಭಿಮಾನಿಗಳಾದ ಡಾಕ್ಟರ್ ಸುಂದರರಾಂ ಅಂದು ನಾನು ಡ್ಯೂಟಿಯಿಂದ ಹಿಂತಿರುಗುತ್ತಿದ್ದಾಗ—

“ ರೀ ಪ್ರಕಾಶ್, ಬಾಂಬೆಯಲ್ಲಿನ ಆಸ್ಪತ್ರೆಯಲ್ಲಿ ನಿಮ್ಮಂಥ ಒಬ್ಬ ಮೆಂಟಲ್ ಸ್ಪೆಷಾಲಿಸ್ಟ್ ಬೇಕಾಗಿದ್ದಾರಂತೆ. ನೀವು ಅಲ್ಲಿಗೆ ಹೊರಡಿ. ಸ್ಥಳವೂ

ಒಳ್ಳೆಯದು ಸಂಬಳವೂ ಕೈ ತುಂಬ ಬರುತ್ತೆ ಪದವಿಯೂ ಹೆಚ್ಚುತ್ತೆ. ಇಲ್ಲಿಪ್ರೆಯಾವಾಗಲೂ ಗೋಳು "— ಎಂದರು.

" ಏನು ಸಾರ್, family ಸಹಿತ ಅಲ್ಲಿಗೆ ಹೋಗೋದು ಅಂದ್ರೆ ಸ್ವಲ್ಪ trouble ಸಾರ್. "

" ನಿಮಗೇನು family ಅಂತ ನೂರ್ ಜನ ಇದ್ದೀರೇಂನ್ರೀ.

ನೀವು ನಿಮ್ಮ wife ಉ, ಇಬ್ಬರೂ ಹೊರಡಿ. ನಾನು ಬೇಕಾದ್ರೆ ಅಲ್ಲಿ ನೀವು ಹೋಗುವುದಕ್ಕೆ ಮೊದಲು ಬಾಡಿಗೆ ಮನೆ ರಡಿ ಮಾಡಿಸಿ ಕೊಡ್ತೀನಿ. ನನ್ನ ಭಾವಮೈದುನ ಅಲ್ಲೇನೆ ಸರ್ಜನ್. ಅವರಿಂದ ನಿಮಗೆ ಎಲ್ಲಾ ಅನುಕೂಲವೂ ನಡೆಯುವಂತೆ ಮಾಡಿಸಿ ಕೊಡ್ತೀನಿ. "

" ತಮ್ಮ ಆಶ್ರಯದ ಅಡಿಯಲ್ಲಿ ಏನನ್ನು ಬೇಕಾದರೂ ಮಾಡಲು ಸಿದ್ಧನಿದ್ದೇನೆ. ತಾವು ಹೇಳಿದ ಹಾಗೇ ...."

" ನೀವು ಹೊರಡಿ. ನಿಮ್ಮಂಥ ಮುಂದುವರಿಯೋ ಬುದ್ಧಿವಂತರಿಗೆ ಅದ ಒಳ್ಳೇ ಜಾಗ. next month 1st week ಮೈಸೂರು ಬಿಟ್ಟು ಬಿಡಬೇಕು. ನೋಡಿ ಎಲ್ಲಾ ಯೋಚನೆ ಮಾಡಿ. ಮನೆಯಲ್ಲೂ, ಅವರ ಅಭಿಪ್ರಾಯವನ್ನೂ ತಿಳಿದುಕೊಳ್ಳಿ. ನಾಳೆ ಯಾವುದನ್ನೂ ನನಗೆ ತಿಳಿಸಿ. ನೀವು ಒಪ್ಪಿದ್ರೆ next month 9 th ಅಲ್ಲಿ ಡ್ಯೂಟಿ ಮೇಲೆ ನೀವು ಇರಲು ಎಲ್ಲಾ ಅನುಕೂಲನೂ ನಾನೇ ಮಾಡಿ ಕೊಡ್ತಿನಲ್ಲಾ ನಿಮಗೆ ಇನ್ನೇನು ಕಷ್ಟ....? "

ನಾನು " ಆಗಲಿ ಸಾರ್ ನಾಳೆ ಹೇಳ್ತೀನಿ " ಎಂದು ಮನೆ ಕಡೆ ಹೊರಟೆ.

ಶಾಂತ ಮನೆಯ ಬಾಗಿಲಲ್ಲೇ ನನಗಾಗಿ ಕಾದು ನಿಂತಿದ್ದವಳು ನನ್ನನ್ನು ಕಂಡು—

" ಇಷ್ಟೊಂದು ತಡವೇಕೆ ಮಾಡಿದಿರಿ ? ಹೊಟ್ಟೆ ಹಸಿಯುವುದೇ ಇಲ್ಲವೆ ? "

—ಎಂದಳು.

" ಡಾಕ್ಟರ್ ಈ ದಿನ ಯಾವುದೋ ಮಾತಾಡ್ತಾ ನಿಂತರು ಹೊತ್ತಾಯ್ತು. "

" ಬನ್ನಿ ಮೊದಲು ತಿಂಡಿ ಮಾಡಿ ಕಾಫಿ ಕುಡಿದು ಅನಂತರ ನಿಮ್ಮ ಡಾಕ್ಟರ್ ನಿಮ್ಮ ಜೊತೆ ಮಾತಾಡಿದ್ದನ್ನು ನನಗೂ ತಿಳಿಸಬಹುದಾದರೆ ತಿಳಿಸಿ."

—ಎಂದು ಒಳಗೆ ಕರೆದುಕೊಂಡು ಹೋಗಿ, ಕೋಟ್ ಬಿಚ್ಚಿ, ಬೂಟ್ ಕಳೆದು, ನೀರ್ ಕೊಟ್ಟು, ತಿಂಡಿ ಕೊಟ್ಟಳು. ನನ್ನ ಎಲ್ಲ ಉಪಚಾರವನ್ನೂ ಅವಳು ಅತಿ ಆಸಕ್ತಿಯಿಂದ ಮಾಡುತ್ತಾಳೆ. ಅವಳ ರೂಪಿನಂತಹದೇ ಗುಣವೂ, ಅವಳಲ್ಲಿದೆ.

ನನ್ನ ಕೆಲಸದ ವಿಷಯ, ನನ್ನ ಪೇಷೆಂಟ್‌ಗಳ ವಿಷಯಗಳನ್ನೆಲ್ಲಾ ಆಗಿಂದಾಗ್ಗೆ ವಿಚಾರಿಸುವ ಪದ್ಧತಿ ಅವಳದು.

ಸರಿ, ತಿಂಡಿ ಮುಕ್ಕುತ್ತಾ, ಡಾಕ್ಟರ್ ಸುಂದರ್‌ರಾಂ ಹೇಳಿದ್ದನ್ನೆಲ್ಲಾ ಶಾಂತಳಿಗೆ ಹೇಳಿದೆ. ಕೂಡಲೇ ಶಾಂತ—

“ ಹೊರಟು ಬಿಡೋಣ, ನನಗೂ ಈ ಹಾಳು ಮೈಸೂರು ಬೇಸರವಾಗಿದೆ. ಸಂಬಳವೂ ಜಾಸ್ತಿ ಆಗತ್ತೆ, ಒಳ್ಳೆ ಕೆಲಸವೂ ಸಿಗತ್ತೆ, ಮುಂದೆ ಒಳ್ಳೆ ಸ್ಕೋಪೂ ಇದೆ ಅಂತಿರಾ ಹೊರಟೇ ಬಿಡೋಣರ್ರೀ ”

—ಎಂದಳು.

ಹೌದು ಅವಳಿಗೂ ಮೈಸೂರು ಬಲು ಬೇಸರದ ಊರಾಗಿತ್ತು. ನನಗೂ ಬೊಂಬಾಯಿಯಲ್ಲಿ ವಾಸಮಾಡಲು ಸಂತೋಷವೂ ಆನಂದವೂ ಉಂಟಾಯಿತು. ಮರುದಿನ ಡಾಕ್ಟರ್ ಸುಂದರ್‌ರಾಂ ಜೊತೆ ‘ ಹೊರಡಲು ಸಿದ್ಧನಿದ್ದೇನೆ’ ಎಂದೆ.

ಡಾಕ್ಟರ್ ಸುಂದರ್‌ರಾಂರವರ ಭಾವಮೈದುನರಾದ ಸರ್ಜನ್ ಶ್ರೀನಿವಾಸ ರಾವ್ ಮುಂಬಯಿ ಆಸ್ಪತ್ರೆಯ ದೊಡ್ಡ ಡಾಕ್ಟರ್. ಅವರ ಅಸಿಸ್ಟೆಂಟ್ ಆಗಿ ನಾನು ನೇಮಕವಾಗುವುದಾಗಿ ತಿಳಿದುಬಂತು.

ನನಗೂ, ಸರ್ಜನ್ ಶ್ರೀನಿವಾಸರಾವ್‌ಗೂ, ಡಾಕ್ಟರ್ ಸುಂದರ್‌ರಾಂ ಕಾಗದದ ಮೂಲಕ ಪರಿಚಯ ಮಾಡಿಕೊಟ್ಟರು. ಸರ್ಜನ್ ಶ್ರೀನಿವಾಸರಾವ್‌ರವರೇ ನನಗೆ ಮನೆ ಸಿದ್ಧಪಡಿಸಿ, ನನ್ನನ್ನು ಮುಂಬಯಿಗೆ ಕರೆಸಿಕೊಂಡರು.

ನಾನು ಶಾಂತ ಇಬ್ಬರೂ train ಇಳಿದ ಕೂಡಲೇ ಶ್ರೀನಿವಾಸರಾವ್ ನನ್ನನ್ನು ಗುರುತು ಹಿಡಿದು, ಮನೆಕಡೆ ಕರೆದುಕೊಂಡು ಹೊರಟರು. ಅವರ ಮನೆ ಸೇರಿದ ಕೂಡಲೇ ಅವರ ಡಿಯರ್ (Dear) ಸುಶೀಲಾಬಾಯಿಯವರಿಗೆ ಅವರೇ ನಮ್ಮನ್ನು ಪರಿಚಯ ಮಾಡಿಕೊಟ್ಟರು. ಸುಶೀಲಾಬಾಯಿ ನಮ್ಮನ್ನು ಅತಿ ಪ್ರೀತಿಯಿಂದ ಬರಮಾಡಿಕೊಂಡು ಉಪಚರಿಸಿದರು.

ಅವರದು ಮಹಡಿ ಮನೆ. ಅತಿ ಸುಂದರವಾಗಿತ್ತು. ಮನೆಯಲ್ಲಿ ಎರಡು ಫೋನ್‌ಗಳಿದ್ದುವು. ಒಂದು ಕಾರಿತ್ತು. ಶ್ರೀನಿವಾಸರಾವ್‌ರವರಿಗೆ ನಾಲ್ಕು ಜನ ಗಂಡು ಮಕ್ಕಳು; ಎರಡು ಹೆಣ್ಣು. ಎಲ್ಲರೂ ಓದುತ್ತಾ ಇದ್ದರು.

ನಮ್ಮಿಬ್ಬರಿಗೂ ಮಹಡಿ ಮೇಲೆ ಒಂದು ಕೋಣೆಯನ್ನು ಬಿಟ್ಟು ಕೊಟ್ಟಿದ್ದರು. ಮೊದಲ ದಿನವೇ ಸರ್ಜನ್ ಶ್ರೀನಿವಾಸರಾಯರೇ ನನ್ನ ಯೋಗ್ಯತೆಗಳನ್ನು ತಮ್ಮ ಭಾವನವರಿಂದ ತಿಳಿದು, ನನ್ನನ್ನು ಮುಂಬಯಿಗೆ ಕರೆಸಿಕೊಂಡಿದ್ದಾರೆಂದು ತಿಳಿಯಿತು. ಅವರ ಬಗೆಗೆ ನನ್ನ ಅಭಿಮಾನವೂ ಅತಿಯಾಯಿತು.

ಮರುದಿನವೇ ನಾನು ಡ್ಯೂಟಿಮೇಲೆ ಹಾಜರಾದೆ. ಒಂದು ವಾರ ನಾನು-ಶಾಂತ ಇಬ್ಬರೂ ಸುಖವಾಗಿ, ಸರ್ಜನ್ ಶ್ರೀನಿವಾಸರಾವ್‌ರವರ ಅತಿಥಿಗಳಾಗಿ ಇದ್ದೆವು.

ಆದರೆ ನಾನೇ ಬಲವಂತದಿಂದ ನಮಗಾಗಿ ಗೊತ್ತಾಗಿದ್ದ ಬಾಡಿಗೆಮನೆಗೆ ಬಂದುಬಿಟ್ಟೆ. ಆ ಮನೆ ಸರ್ಜನ್ ಶ್ರೀನಿವಾಸರಾವ್‌ರವರ ಮನೆಯ ಪಕ್ಕದ ಬೀದಿಯಲ್ಲೇ ಇತ್ತು. ನಮ್ಮ ಮನೆಯೂ ಸುಮಾರಾಗಿ ದೊಡ್ಡದಿತ್ತು. ನಮಗೆ ಸಾಕಾಗುವಂತಿತ್ತು.

ದಿನವೂ ನಾನು ಡ್ಯೂಟಿಗೆ ಹೋಗುವಾಗ ಶಾಂತಳನ್ನು ಸರ್ಜನ್‌ರವರ ಮನೆಗೆ ಕರೆದುಕೊಂಡು ಹೋಗಿ ಬಿಟ್ಟುಬಿಡುತ್ತಿದ್ದೆ. ಸುಶೀಲಾಬಾಯಿ ಶಾಂತಳನ್ನು ತಂಗಿಯಂತೆ ನೋಡಿಕೊಳ್ಳುತ್ತಿದ್ದರು. ಇನ್ನೇನು, ನನ್ನ ಬಾಳಿಗೆ 'ಶುಕ್ರಮಹಾರಾಯನದೆಸೆ' ಪ್ರಾರಂಭಿಸಿತು—ಶಾಂತಳಿಗೂ ಎಂದರೆ ತಪ್ಪಾಗಲಾರದು.

ಸರ್ಜನ್‌ರವರ ಪ್ರೀತಿಯ ಗೆಳೆಯನಾಗಿ, ಅವರ ಅಸಿಸ್ಟೆಂಟ್ ಆಗಿ ಹಾಯಾಗಿ ದುಡಿಯತೊಡಗಿದೆ. ದಿನವೂ ಅವರ ಕಾರಿನಲ್ಲಿ ಓಡಾಟ. ಕೈತುಂಬ ಸಂಬಳ.

ಅತ್ಯಂತ ಆನಂದದ ದಿನಗಳು ನನ್ನ ಪಾಲಿಗೆ ನಮ್ಮ ಸರ್ಜನ್‌ರವರ ಆಸರೆಯಲ್ಲಿ ದೊರೆಯಿತು.

ಇತ್ತೀಚೆಗೆ ನಾನು ಅವರಿಂದ ಅನೇಕ ಹೆಚ್ಚಿನ ವೈದ್ಯಕೀಯ ಸಂಗತಿಗಳನ್ನು ತಿಳಿದೆ.

‘ ಪ್ರಪಂಚದಲ್ಲಿ ನಿಜವಾಗಿಯೂ ವೈದ್ಯ ಜೀವನ ಆದರ್ಶ ಜೀವನ ; ಇದು ಗೋಳಿನ ಜೀವನವಲ್ಲ ’—ಎಂದು ಸರ್ಜನ್ ನನಗೆ ನಾನೇ ಅರಿಯುವಂತೆ ಮಾಡಿದರು.

ನಾನು ಹಿಡಿದ ಎಲ್ಲಾ ಕೇಸುಗಳೂ, ಉತ್ತಮವಾದ ಫಲಕೊಟ್ಟುವು. ದಿನ ಕಳೆದಂತೆಲ್ಲಾ ನನ್ನ ಬುದ್ಧಿಶಕ್ತಿಯಿಂದ, ಮಾತಿನ ರೀತಿ–ನೀತಿಯಿಂದ ಸರ್ಜನ್‌ರ ಆಸಿಸ್ಟೆಂಟ್ ಬದಲು ಆತ್ಮೀಯನಾಗುತ್ತ ಬಂದೆ.

೨೬

ತಿಂಗಳೊಂದು ಉರುಳಿತ್ತು ಎಂದು ಕಾಣುತ್ತೆ. ಅಂದು ಭಾನುವಾರ, ಮನೆಯ ಬಾಗಿಲಲ್ಲಿ ನಿಂತಿದ್ದೆ. ಎದುರು ಮನೆ ಮಹಡಿ ಮನೆ ; ಮುಂಭಾಗ ಸ್ವಲ್ಪ ಬಿಸಿಲು ಮುಚ್ಚಿತ್ತು. ಬಿಸಿಲು ಮಚ್ಚಿನಲ್ಲಿ ನಿಂತಿದ್ದ ವ್ಯಕ್ತಿ "ನಮಸ್ಕಾರ ಡಾಕ್ಟರ್‌ಗೆ, ನಮಸ್ಕಾರ" ಎಂದಿತು. ನಾನು ಕತ್ತೆತ್ತಿ ನೋಡಿದೆ ಆ ವ್ಯಕ್ತಿ ಕೂಡಲೇ "ಬಂದೆ" ಎಂದು ಮಹಡಿಯಿಂದ ಕೆಳಗಿಳಿದು ಬಂದ. ಗುರುತು ಸಿಕ್ಕಿತು. ಆ ವ್ಯಕ್ತಿ ನನ್ನ ಮಿತ್ರ ಸುರೇಶ್ ಓಡಿಹೋಗಿ ತಬ್ಬಿಕೊಂಡೆ—ಅನಂತರ ಮನೆಯೊಳಗೆ ಕರೆದುಕೊಂಡು ಹೋಗಿ ಕುರ್ಚಿಯ ಮೇಲೆ ಕೂರಿಸಿ, ನಾನೂ ಕೂತು—

"ಇದೇನು ಸುರೇಶ್ ನಿನ್ನನ್ನು ನೋಡಿ ಬಹಾಳ ದಿನಗಳು ಆಯ್ತು. ಮುಂಬಯಿಗೆ ಯಾವಾಗ ಬಂದೆ ? ಏನು ಸಮಾಚಾರ ? ಇದ್ದಕಿದ್ದ ಹಾಗೆ ನಮ್ಮನ್ನೆಲ್ಲಾ ಮರೆತುಬಿಟ್ಟೆಯಲ್ಲ ? ನಿನ್ನನ್ನು ನೋಡಿ ವರುಷ ಎಷ್ಟು ಉರುಳಿತು ? ಈಗ ಕ್ಷೇಮವೇ ?"

—ಎಂದು ಒಂದೇ ಸಮನೆ ಪ್ರಶ್ನೆಗಳ ಸುರಿಮಳೆಯನ್ನೇ ಅವನ ಮೇಲೆ ಹಾಕಿದೆ.

"ಅದೆಲ್ಲಾ ಒಂದು ಭಾರೀ ಕತೆ ಡಾಕ್ಟರ್. ಅಂತೂ ಈಗ M.Sc., ಓದುವ ಸಲುವಾಗಿ ಇಲ್ಲಿಗೆ ಬಂದೆ. ಆಗಲೇ ಬಂದೂ ಒಂದು ವರುಷ ಆಗಿ ಹೋಯಿತು."

"ಅಲ್ಲ ನಾವು ಬಂದು ತಿಂಗಳಾಯಿತು. ನೀನು ಸಿಗಲೇ ಇಲ್ಲವಲ್ಲ ?"

"ಮುಂಬಯಿ ಷಹರೇ ಅಂತಹದು"

ಹೌದು ನಿಜ ಎನ್ನಿ. ನಮ್ಮನೆ ಪಕ್ಕದಲ್ಲಿ ಯಾರಿದ್ದಾರೆ ಎನ್ನುವುದು ಮುಂಬಯಿ ಷಹರಿನ ವಾಸಿಗಳಿಗೆ ಗೊತ್ತಿರುವುದಿಲ್ಲ.

" ಇಲ್ಲಿ ಊಟ ತಿಂಡಿಗಳಿಗೆ ಏನು ಮಾಡಿಕೊಂಡಿದೀಯಾ ಸುರೇಶ್ ? "
—ಎಂದೆ ನಾನು.

" ಇಲ್ಲಿಗೇ ನಾನು, ನನ್ನ ತಂಗಿ ಇಬ್ಬರೂ ವಾಸ ಬಂದುಬಿಟ್ಟಿದ್ದೀವಿ ಡಾಕ್ಟರ್ "

" ಅಂದರೆ........"

" ಅನಂತರದಲ್ಲಿ ಹೇಳುತ್ತೇನೆ ಡಾಕ್ಟರ್ ವಿರಾಮವಾದಾಗ. "

" ಸದ್ಯಃ ಕನ್ನಡಿಗರು ಅಂತ ನೀನಾದರೂ ಸಿಕ್ಕಿದೆಯಲ್ಲ ".

" ಅಂತಹದೇನೂ ಇಲ್ಲ ಡಾಕ್ಟರ್ ಸಾಮಾನ್ಯವಾಗಿ ಈ ಎಕ್ಸ್‌ಟೇರ್ಷ ನಲ್ಲಿ ಕನ್ನಡಿಗರೇ ಇದ್ದಾರೆ ಎನ್ನಬೇಕು. ಅಲ್ಲದೆ ನಿಮಗೇನು ಸರ್ಜನ್ ಶ್ರೀನಿವಾಸರಾವ್‌ರವರ ಪರಿಚಯ ಇದೆಯಲ್ಲಾ ? "

ಇಷ್ಟರಲ್ಲಿ ಶಾಂತ ನಮ್ಮ ಸರ್ಜನ್‌ರವರ ಮನೆಯಿಂದ ಬಂದಳು. ಸುರೇಶನನ್ನು ಕಂಡು ಬೆಚ್ಚಿದಳು—ಅವಳ ಮೈಯ ಕೂದಲೆಲ್ಲಾ ನೆಟ್ಟಗೆ ನಿಂತಿತು ಮುಖ ಕೆಂಪೇರಿ ಕಂದಿತು.

ನನಗೆ ಕಾರಣ ಅರ್ಥವಾಗಲಿಲ್ಲ; ಆದೂ ಮೊದಲಲ್ಲಿ ಏನೋ ಅರ್ಥವಾದ ಹಾಗಾಯಿತು ? ಕಾರಣ ?........ಕಣ್, ಕಣ್‌ಬಿಟ್ಟೆ.

ಶಾಂತಳನ್ನು ನೋಡಿದ ಸುರೇಶ್ ತಲೆತಗ್ಗಿಸಿ ಕುಳಿತ.

ಶಾಂತಳ ಕನವರಿಕೆಯ ಸುರೇಶ್ ಈತನೇ ಎಂದು ನನಗೆ ದೃಢ ವಾಯಿತು.

" ಶಾಂತ ಕಾಫಿ-ತಿಂಡಿ ಬೇಗ ಮಾಡು "—ಎಂದೆ.

ಸ್ವಲ್ಪ ಕಾಲ ಮೌನ ಆವರಿಸಿತು.

ನಾನು ಸುರೇಶನೊಡನೆ ಮಾತಾಡಲಿಲ್ಲ? ' ಈ ಸುರೇಶನಿಗೂ ಶಾಂತಳಿಗೂ ಯಾವ ಸಂಬಂಧ ? ? ' ' ಸುರೇಶ್ ಈತನೇ. ಆ ಶಾಂತಳ ಕನವರಿಕೆಯ ಕಾರಣನಾದ ಸುರೇಶ್ ಇವನೇ. ಇವನಿಗೂ ಶಾಂತಳಿಗೂ ಯಾವುದೋ ಸಂಬಂಧ' ವಿತ್ತೆಂದು ತೀರ್ಮಾನಕ್ಕೆ ಎಂದೋ ಬಂದಿದ್ದೆ— ದೃಢವಾದೆ ಈಗ.

' ಹಾಗಾದರೆ ನನ್ನ ಬಾಳ ಗೆಳತಿ ನಾಯಿ ಮುಟ್ಟಿದ........'ಥು.

ಅದೆಲ್ಲಾ ಚೆನ್ನಾಗಿಲ್ಲ.'

'ಗಣಿಯಿಂದ ಹೊರಬಂದ ಚಿನ್ನ ಹಾಗೆಯೇ ನನ್ನ ಕೈಗೆ ಬರಬೇಕು ಎಂದರೆ ಸಾಧ್ಯವೆ? ಅದು ಅನೇಕ ಅಕ್ಕಸಾಲಿಗರ ಕೈ ಸೋಕಿಯೇ ಬರುವುದು'

'ಶಾಂತ........ಶಾಂತ ನಿನ್ನ ಆಟಗಳೆಲ್ಲಾ ಅರ್ಥವಾಯಿತು. ಇನ್ನು ನಿನ್ನನ್ನು ಮುಟ್ಟಲಾರೆ, ಪ್ರೀತಿಸಲಾರೆ........'

—ಈ ಮಾತನ್ನು ನನ್ನ ಒಂದು ಮನ ನುಡಿದರೆ, ಮಗದೊಂದು ಮನ ಆದರ್ಶದ ಅಮಲಿನಲ್ಲಿದ್ದ ಮನ—'ಶಾಂತಳ ಬಾಳನ್ನು ರೂಪಿಸು. ಅವಳೊಡನೆ ಕೋಪಮಾಡಿಕೊಳ್ಳಬೇಡ. ಆದರ್ಶದ ಆಶ್ರಯಬಿಟ್ಟು ದೂರಾಗಬೇಡ.

—ಎಂದಿತು.

"ಇನ್ನೇನು ಸುರೇಶ್"

—ಎಂದೆ ನಾನೇ ಬೇಸರದಿಂದ ಮೌನ ಮುರಿದು.

"ಇನ್ನೇನೂ ಇಲ್ಲ ಡಾಕ್ಟರ್. ನೀವು ಮುಂಬಯಿಗೆ ಬರಲು ಕಾರಣ?" ಅದೇಕೋ ಅವನ ಬಾಯಿಂದ ಮಾತುಗಳು ಬರಲಾರದೆ ಬರುತ್ತಿದ್ದುವು.

'ಈ ಅಯೋಗ್ಯನೇ ಅಲ್ಲವೆ? ಶಾಂತ—"ಮುಗ್ಧಜೀವಿ" ಯನ್ನು ಗೋಳು ಹುಯ್ಯುತ್ತಿರುವ ಪಾಪಿ?'

'ಛೆ! ಸುರೇಶ್ ಪಾಪಿಯಲ್ಲ; ಅವನು ನನ್ನ ಪ್ರಾಣರಕ್ಷಕನಲ್ಲವೆ? ಛೆ! ಅವನನ್ನು ಹೀಗೆ ಬೈಯಬಾರದು. ಶಾಂತ-ಸುರೇಶ್ ಇಬ್ಬರಲ್ಲಿ ಯಾವುದೋ ಸಂಬಂಧವಿದೆ, ಅದು ಮಾತ್ರ ನಿಜ.'

'ಶಾಂತ ಕೈಹಿಡಿದವಳು—ಕೈಬಿಡಬಾರದು—ಕಾಪಾಡಬೇಕು.'

'ಸುರೇಶ್ ಪ್ರಾಣ ಸ್ನೇಹಿತ—ಅವನ ಮಟ್ಟಿಗೆ ದುಡಕಲಾಗದು.'

'ಹೌದು ಅವನು ನನ್ನ ಪ್ರಾಣ ಸ್ನೇಹಿತ. ಕೂಡಲೇ ಮನಸ್ಸು ಆ ದಿನದೆಡೆಗೆವಾಲುತ್ತಿದೆ:—ಅಂದು ಸುರೇಶ್ ಸೀನಿಯರ್‌ನಲ್ಲಿ ಓದುತ್ತಿದ್ದ ವಿದ್ಯಾರ್ಥಿ; ದಿನವೂ ಕುಕ್ಕುನಹಳ್ಳಿ ಕೆರೆ ಕಡೆಗೆ ಏನನ್ನೋ ಆಕಾಶದಲ್ಲಿ ಕಾಣುತ್ತಾ walk (ವಾಕ್) ಬರುತ್ತಿದ್ದ ದೊಡ್ಡ 'ಯೋಚನಾತಪಸ್ವಿ'. ನಾನು ಆಗತಾನೆ ಕೆ. ಆರ್. ಹಾಸ್ಪಿಟಲ್‌ನಲ್ಲಿ ಡಾಕ್ಟರಾಗಿ ನಿಯಮಿತನಾಗಿ ಹೊಸದು. ನಾನೂ ದಿನವೂ ಕುಕ್ಕನಹಳ್ಳಿ ಕೆರೆಕಡೆಗೆ ವಾಕ್ ಬರ್ತಾ ಇದ್ದೆ. ಅನೇಕ ದಿನಗಳು ಈ ವಿಚಿತ್ರ ವಿದ್ಯಾರ್ಥಿಯನ್ನು ನೋಡಿದ್ದೆನೆ ವಿನಾ ಮಾತ

ನಾಡಿರಲಿಲ್ಲ. ಆದರೆ ಈ ತೇಜಸ್ವಿಯನ್ನು ಮಾತನಾಡಿಸುವ ಬಯಕೆ ನನ್ನಲ್ಲಿ ಗುಪ್ತವಾಗಿತ್ತು.

ಅದಕ್ಕೊಂದು ದಿನವೂ ಬಂತು.

ಅವನು ಆಕಾಶ ನೋಡುತ್ತಾ ನಡೆಯುತ್ತಾ ಬಂದು ಕಲ್ಲು ಎಡವಿದ. ಅವನ ಬಲಗಾಲ ಹೆಬ್ಬೆರಳಿಗೆ ತುಂಬಾ ಗಾಯವಾಗಿ ರಕ್ತ ಧಾರಾಕಾರವಾಗಿ ಹರಿಯಲು ಪ್ರಾರಂಭಿಸಿತು. ಸುರೇಶ್ 'ಅಯ್ಯೋ' ಎಂದು ಅಲ್ಲೇ ಕುಳಿತ.

ನಾನು ಅವನೆಡೆಗೆ ಓಡಿಹೋಗಿ, ಅವನ ಕಾಲಿನ ರಕ್ತವನ್ನು ತೊಳೆದು, ನನ್ನ ಕರವಸ್ತ್ರವನ್ನೇ ಹರಿದು ಅವನ ಗಾಯಕ್ಕೆ ಕಟ್ಟಿ ಪ್ರಥಮ ಚಿಕಿತ್ಸೆಯನ್ನು ನಡೆಸಿದೆ. ಇದರಿಂದ ಸುರೇಶ್ ನನ್ನೆಡೆಗೆ ತುಂಬಾ ಅಭಿಮಾನಿಯಾದ.

"ಈಗ ನಡೆಯಬಲ್ಲಿರಾ?"—ಎಂದೆ ನಾನು.

"ನಡೆಯ ಬಲ್ಲೆ ಸಾರ್; ಆದರೆ ತುಂಬಾ ನೋವು"

"ಬೆರಳಿಗೆ ಬಹಳ ಏಟು ಬಿದ್ದಿದೆ. ನಾಳೆ ಕೆ. ಆರ್. ಹಾಸ್ಪಿಟಲ್‌ಗೆ ಬನ್ನಿ ಅಲ್ಲಿ 'ಟ್ರೀಟ್' ಮಾಡಿಸೋಣ"

"ಸಾರ್, ಬನ್ನಿ ಅಲ್ಲಿ ಕುಳಿತುಕೊಳ್ಳೋಣ; ತಮ್ಮೊಡನೆ ಮಾತನಾಡ ಬೇಕೆಂದು ಬಲುದಿನದಿಂದಲೂ ಮನಸ್ಸಿನಲ್ಲಿತ್ತು."

—ಎಂದು ಹೇಳಿ ಕಲ್ಲುಬೆಂಚಿನತ್ತ ಸುರೇಶ್ ಕುಂಟುತ್ತಾ ಹೊರಟಾಗ ಎನಗೆ ಇವರನ್ನು ಮಾತನಾಡಿಸುವ ಮನಸ್ಸು ಬಲುದಿನದಿಂದ ಇತ್ತು: ಇವರಿಗೂ, ನನ್ನ ಮಾತನಾಡಿಸುವ ಬಯಕೆ ಇತ್ತಂತಲ್ಲ. ?! ಹಾಗಾದರೆ ಇಬ್ಬರ ಮನಸ್ಸಲ್ಲೂ ಈ ಭಾವನೆ ಹುಟ್ಟಲು ಏನು ಕಾರಣ? ದೇವರು ನಮ್ಮಿಬ್ಬರ ಎದೆಯಲ್ಲಿ ಏನನ್ನು ಬಿತ್ತಿದ್ದಾನೆ? ಎಂದುಕೊಂಡೆ.

ಇಬ್ಬರೂ ಕಲ್ಲು ಬೆಂಚೇರಿ ಕುಳಿತೆವು.

"ನಿಮ್ಮ ಸಿಲ್ಕಿನ ಕರ್ಚೀಫ್ ಅನ್ಯಾಯವಾಯಿತು ಸಾರ್"

—ಎಂದರು ಸುರೇಶ್.

"ಪರವಾಗಿಲ್ಲ, ಪಾಪ ನಿಮ್ಮ ಕಾಲಿನ ಗಾಯಕ್ಕಿಂತಲೂ ಹೆಚ್ಚೆ?.... ಕಾಲು ಬಹಾಳ ಏಟು ತಿಂದುಬಟ್ಟಿದೆ. ಈಗ ನೀವು ನಮ್ಮ ಮನೆವರೆಗೂ ಬರುವುದಾದರೆ ಸ್ವಲ್ಪ 'ಟ್ರೀಟ್' ಮಾಡಬಹುದು"

"ಸಾರ್, ಕೋಪಮಾಡಿಕೊಳ್ಳಬೇಡಿ, ಒಂದು ವಿಷಯ ಕೇಳ್ತೀನಿ"

" ಧಾರಾಳವಾಗಿ ಕೇಳಿ "

" ತಾವು ಡಾಕ್ಟರ್ ಇರಬಹುದೇನು ?...."

" ಹೌದು, ನಾನೊಬ್ಬ ಕೆ. ಆರ್. ಹಾಸ್ಪೆಟಲ್‌ನಲ್ಲಿ ಚಿಲ್ಲರೆ ಡಾಕ್ಟರ್ "

" ನಿಮ್ಮ ಹೆಸರೇನು ? "

" ನನ್ನ ಹೆಸರು ಸುರೇಶ್ ಸಾರ್. Senior Inter ನಲ್ಲಿ ಓದುತ್ತಾಯಿದೇನೆ. ನಮ್ಮದು ಟಿ. ನರಸೀಪುರದ ಬಳಿ ಒಂದು ಹಳ್ಳಿ, ಇಲ್ಲಿ ಓದುವ ಸಲುವಾಗಿ ಬಂದಿದ್ದೇನೆ. "

" ವಾಸ........? "

" ನಮ್ಮ ತಂದೆಯವರ ಗೆಳೆಯರೊಬ್ಬರು ಸರಸ್ವತೀಪುರಂನಲ್ಲಿ ವಾಸವಿದ್ದಾರೆ. ಅವರ ಮನೆಯಲ್ಲಿ ಒಂದು ಪ್ರೈವೇಟ್ ರೂಂನಲ್ಲಿ ವಾಸ ಹೋಟಲಿನಲ್ಲಿ ಊಟ. "

ಹೀಗೆ ಮಾತನಾಡುತ್ತಾ ನನ್ನ ' ಆತ್ಮಕಥೆ ' ಯನ್ನೆಲ್ಲಾ ಸುರೇಶ್‌ಗೂ, ತಿಳಿಸಿದೆ. ನನಗಾಗಿ ಮರುಗಿದರು ಸುರೇಶ್. ಇಬ್ಬರೂ ಸ್ನೇಹಿತರಾಗಿ ಬಿಟ್ಟೆವು. ನಾನು ಸುರೇಶ್‌ರನ್ನು ಮನೆಗೆ ಕರೆದುಕೊಂಡು ಹೋಗಿ ಅವರ ಕಾಲಿಗೆ ಉತ್ತಮವಾದ ' ಬ್ಯಾಂಡೇಜ್ ' ಬಿಗಿದು, ರೂಂವರೆಗೂ ಕರೆತಂದು ಬಿಟ್ಟೆ.

ನನ್ನ ' ಟ್ರೀಟ್ ಮೆಂಟ್ ' ನಿಂದಲೇ ಅವರ ಕಾಲು ಉತ್ತಮಗೊಂಡಿತು. ದಿನ ಕಳೆದಂತೆಲ್ಲಾ ಪರಿಚಯ ಹೆಚ್ಚತೊಡಗಿತು.

ದಿನ ಕಳೆದಾಗ ನಾನು ಮೊದಲು ಅವರ ರೂಂಗೆ ಹೋಗುತ್ತಿದ್ದೆ. ಅನಂತರ ಇಬ್ಬರೂ ಹೋಟಲಲ್ಲಿ ತಿಂಡಿ ತಿಂದು walk (ವಾಕ್) ಮಾಡುವ ನೆಪದಿಂದ ಮೈಸೂರನ್ನೆಲ್ಲಾ ಬಳಸುತ್ತಿದ್ದೆವು.

ಗೆಳೆಯರನ್ನೇ ಬಯಸದೆ ಇದ್ದ ನನ್ನ ಹೃದಯ ಗೆಳೆತನವನ್ನು ಬಯಸತೊಡಗಿತು.

ದಿನ ಕಳೆದಂತೆಲ್ಲಾ ನಮ್ಮ ಗೆಳೆತನವೂ ಬಲಿಯತೊಡಗಿತು—ಗಾಢವಾಗಲಾರಂಭಿಸಿತು.

ಆ ದಿನವೆಲ್ಲಾ ಮೈಗೆ ಸರಿಯಿರಲಿಲ್ಲ. ಆದರೂ ವಾಕ್ ಮಾಡಿ ರೂಂಗೆ ಬಂದ ನಂತರ ಮೈ ಬಿಸಿಯಾಯಿತು. ರಾತ್ರಿ ಎಲ್ಲಾ ಜ್ವರ ಬಡಿಯಿತು. ಮರುದಿನ ಸುರೇಶ್‌ರನ್ನು ಕಾಣುವ ಬಗೆ ಎಂತು ?—ಜ್ವರದಿಂದ ಪೀಡಿತನಾಗಿ ಬಿದ್ದಿರುವಾಗ ?

ರಾತ್ರಿ ಸುಮಾರು ಎಂಟು ಗಂಟೆ ಇರಬಹುದು, ಸುರೇಶ್ ರೂಂಗೆ ಬಂದು ಬಾಗಿಲು ತೆಗೆದು ಒಳ ನುಗ್ಗಿದರು. ಅವರು ನನ್ನ ಅವಸ್ಥೆ ಕಂಡು—

" ಇದೇಕೆ ಮಲಗಿದ್ದೀರಿ ಸಾರ್ "

—ಎಂದಾಗ—

" ರಾತ್ರಿಯಿಂದ ವಿಪರೀತ ಜ್ವರ "

—ಎಂದೆ. ಅವರು ಬಂದುದು ಆಗಿನ ನನ್ನ ಪರಿಸ್ಥಿತಿಗೆ ಕಳೆದು ಹೋಗಿದ್ದ ತಂದೆ ತಾಯಿಗಳೇ ಬಂದಂತೆ ಆಯಿತು.

ಷೂ ಕಳೆದು ಅತ್ತ ಬಿಸಾಕಿ ನನ್ನ ಹಾಸಿಗೆಯ ಮಗ್ಗುಲಲ್ಲೆ ಕುಳಿತು, ತಲೆ ಮುಟ್ಟಿ ನೋಡಿದರು. ಅವರ ಅಮೃತಹಸ್ತ ಹಣೆಯ ಮೇಲೆ ಆತ್ಮೀಯತೆಯಿಂದ ಕುಳಿತಾಗ ನನಗಾದ ಆನಂದ ವರ್ಣಿಸಲು ಅಸಾಧ್ಯ. ಪ್ರೇಮ-ಪ್ರೀತಿ ಎಂದರೇನು ಎಂಬುದನ್ನು ಕಾಣದ ಈ ಕಾಡು ಪ್ರಾಣಿಗೆ ಪ್ರೇಮ–ಪ್ರೀತಿಯ ಸ್ವರೂಪದ ದರ್ಶನ ಮಾಡಿಸಿದ ಮಹಾತ್ಮ ಅವರು.

" ಡಾಕ್ಟರಿಗೂ ಜ್ವರ ಬಂತೇ...."

—ಎಂದು, ಸುರೇಶ್ ನನ್ನ ನಾಡಿಯ ಮಿಡಿತವನ್ನೂ ಪರೀಕ್ಷಿಸಿದರು. ' ಪರವಾಗಿಲ್ಲ ಹುಡುಗ ' ಎಂದುಕೊಂಡೆ ಮನಸ್ಸಿನಲ್ಲೇ.

"ನನ್ನ ಜೀವಮಾನದಲ್ಲಿ ಇಷ್ಟು ಜ್ವರ ಬಂದುದು ಇದೇ ಮೊದಲು."

" ಅದೂ ಡಾಕ್ಟರ್ ಆದ ಮೇಲೆ....! "

" ಡಾಕ್ಟರ್ ಅಂದರೆ ಅದಕ್ಕೆ ಹೆದರಿಕೆಯೇ ? "

" ಹೊಟ್ಟೆಗೆ ಏನನ್ನು ತೆಗೆದುಕೊಂಡಿರಿ ? "

" ಏನೂ ಇಲ್ಲ ..."

" ಕಾರಣ ?...."

" ಏಳಲಾರದೆ ..."

" ಈಗ ಎರಡು ಕಿತ್ತಲೇ ಹಣ್ಣು ತರುತ್ತೇನೆ. " ಎಂದು ಅವರು " ಸ್ವಲ್ಪ ಗಂಜಿಮಾಡಿ ಕೊಟ್ಟು ಹೋಗಲೆ ? "—ಎಂದಾಗ—

" ಆಗಲಿ " —ಎಂದು ತಲೆ ಅಲ್ಲಾಡಿಸಿದೆ.

ಕೂಡಲೇ ಸುರೇಶ್ ರವೆ ತಂದು, ಇದ್ದಿಲ ಒಲೆ ಹತ್ತಿಸಿ ಗಂಜಿ ಕಾಸಿ ಕುಡಿಸಿದರು. ಗಂಜಿ ಹಸಿದ ಹೊಟ್ಟೆಗೆ ಅಮೃತದಂತಿತ್ತು. ಓಡಿ ಹೋಗಿ ಹಣ್ಣು ತಂದು ಬಿಡಿಸಿಕೊಟ್ಟರು. ತಿಂದೆ— ದೇಹದ ಸುಸ್ತು ರುದ್ರಾವತಾರ ದಿಂದ ಪ್ರಲಾಪಿಸುತ್ತಿತ್ತು.

" ಈಗ, ಗಾಡಿ ತರುತ್ತೇನೆ ಡಾಕ್ಟರ್ ಷಾಪಿಗೆ ಹೋಗೋಣವೇ ? " —ಎಂದರು ಸುರೇಶ್.

" ಕೈಯಲ್ಲಿ ಕಾಸಿಲ್ಲ. ತಿಂಗಳ ಕಡೆ "

" ಅದೆಲ್ಲಾ ಹೇಳಬೇಡಿ ಬೇಕಾದರೆ ನೂರಾರು ರುಪಾಯಿ ನೀವು ಕೇಳಿದರೂ ಕೊಡಬಲ್ಲೆ "

" ಹಾಗಾದರೆ ನಮ್ಮ ಸುಂದರ್‌ರಾಂ ಬಳಿ ಹೋಗೋಣ "

—ನಾನು ಎಂದ ಕೂಡಲೇ ಅವರು ಗಾಡಿಮಾಡಿ ತಂದರು. ಇಬ್ಬರೂ ಹೊರಟೆವು.

ಸುಂದರ್‌ರಾಂ ನನ್ನನ್ನು ನೋಡಿ ಬೆಚ್ಚಿದರು. ಅವರ ಮನೆಯಲ್ಲೇ ನನ್ನನ್ನು ಉಳಿಸಿಕೊಂಡರು. ಸುಂದರ್‌ರಾಂರವರಿಗೆ ನನ್ನನ್ನು ಕಂಡರೆ ಅಷ್ಟು ಅಭಿಮಾನ.

ಹದಿನೈದು ದಿನಗಳವರೆಗೆ ಎಡೆಬಿಡದೆ ಒಂದೇ ಸಮನೆ ಜ್ವರ ಬಡಿಯಿ ತಂತೆ— ' ಟೈಫಾಯಿಡ್ '. ಮನಸ್ಸಿಗೆ ಬಂದಂತೆ ಪೇಚುತ್ತಿದೆನಂತೆ. ಈ ಹದಿನೈದು ದಿನಗಳ ಪೂರ್ತಿ ನನ್ನ ಸರ್ವ ವಿಧವಾದ ಉಪಚಾರಕ್ಕೆ ಸಿದ್ಧ ನಿದ್ದವನು ಗೆಳೆಯ ಸುರೇಶ್.

ಡಾಕ್ಟರ್ ಸುಂದರ್‌ರಾಂ ನನ್ನನ್ನು ತಮ್ಮ ಮನೆಯಲ್ಲಿ ಇಟ್ಟುಕೊಂಡು, ಯಮನೊಡನೆ ಕಾದಾಡಿ ಬದುಕಿಸಿದರಂತೆ.

ಕಾಯಿಲೆಯಿಂದ ಮೇಲೆದ್ದು ತಿಂಗಳೊಂದು ಉರುಳಿತ್ತು. ಇನ್ನೂ ತಿಂಗಳ ಕಾಲ ಡ್ಯೂಟಿಗೆ ಬರಬೇಕಿಲ್ಲ ಎಂದರು ಸುಂದರ್‌ರಾಂ. ನಾನು

ಪೂರ್ಣವಾಗಿ ಚೇತರಿಸಿಕೊಳ್ಳುವವರೆಗೂ ಅವರ ಮನೆಯಲ್ಲೇ ಇರಬೇಕಾದ ಪ್ರಸಂಗ ಒದಗಿಬಂತು.

" ನಿಮ್ಮಿಂದಾಗಿ ಬದುಕಿದೆ ಸಾರ್ "

—ಎಂದೆ ನಾನು ಸುಂದರ್‌ರಾಂ ಜೊತೆ.

" ಛಿ ! ಇಲ್ಲದ್ದೆಲ್ಲಾ ಹೇಳ್ತೀರಲ್ರೀ. ಪಾಪ ನಿಮ್ಮ ಸುರೇಶ್ ನಿಮಗಾಗಿ ನಿಜವಾಗಿ ಹಗಲು ರಾತ್ರಿಗಳೆನ್ನದೆ ದುಡಿದು ನಿಮ್ಮನ್ನು ಸಾವಿನ ಸೆಳವಿನಿಂದ ಪಾರುಮಾಡಿದ್ದಾರೆ. ಅಂತಹ ಸ್ನೇಹಿತರನ್ನು ಪಡೆದ ನೀವೇ ಭಾಗ್ಯವಂತರು"

ಹೌದು.

ಸುರೇಶ್ ನನಗಾಗಿ ಅತಿಯಾದ ಸೇವೆ ಮಾಡಿ, ಕಾಯಿಲೆ ಬೀಳುವ ಮೊದಲು ' ಅವರು ' ಆಗಿದ್ದ ಸುರೇಶ್ ಕಾಯಿಲೆಯಿಂದ ಏಳುವಷ್ಟರಲ್ಲಿ ' ಅವನಾಗಿ ' ಪರಿವರ್ತಿತನಾದ.

ಇಬ್ಬರ ಹೃದಯಗಳೂ ಒಂದಾದುವು.

ಇಬ್ಬರೂ ಅಣ್ಣ–ತಮ್ಮಂದಿರಾದೆವು.

ಇಲ್ಲ ! ತಂದೆ–ಮಕ್ಕಳಾದೆವು.

ಇಲ್ಲ ! ಪ್ರೀತಿಯ ಮೂರ್ತಿಗಳಾದೆವು.

ಅವನಿಗೂ ಸೀನಿಯರ್ ಪರೀಕ್ಷೆ ಮುಗಿದಿತ್ತು. ಆ ದಿನ ಅವರ ಊರಿಂದ ತಂತಿ ಬಂತು, ಗಾಬರಿ ಬಿದ್ದು ಟ್ಯಾಕ್ಸಿ ಹತ್ತಿದ.

ಆಗ ನೋಡಿದ್ದಕ್ಕೆ ಇದೀಗ ಇವನನ್ನು ನೋಡುತ್ತಿದ್ದೇನೆ.

' ಈತ ಪಾಪಿಯೇ ? ಇಲ್ಲ ಇಲ್ಲ ಈತನನ್ನು ಪಾಪಿಯೆಂದು ನೀನು ಪಾಪಿಯಾಗಬೇಡ. '

' ತಾಳ್ಮೆ ಇರಲಿ. '

' ಸುರೇಶ್–ಶಾಂತ ಪ್ರೇಮಿಗಳಾಗಿದ್ದಿರಬಹುದು. '

' ಅದಕ್ಕೇನಂತೆ. ಶಾಂತಿಯಿಂದ ವರ್ತಿಸಿ ಎಲ್ಲವನ್ನೂ ಸರಿಪಡಿಸಿಕೊ '

' ದುಡುಕಬೇಡ '

' ಬೇಡ '

' ಪ್ರತ್ಯಕ್ಷವಾಗಿ ನಿನ್ನ ಕಣ್ಣಿಗೆ ಕಂಡದ್ದನ್ನು ಪ್ರಮಾಣಿಸಿ ನಿಜ ತಿಳಿ. ನ್ಯಾಯ–ಅನ್ಯಾಯದ ವಿಮರ್ಶೆಮಾಡಿ ಅನಂತರ ಶಾಂತ–ಸುರೇಶ್‌ರನ್ನು ಆಳೆ.

' ಆತ್ಮೀಯ ಬಂಧು ಇಂದು ಸಿಕ್ಕಿರುವಾಗ ಪ್ರೀತಿಯಿಂದ ಕಾಣು '

' ಕುರುಡನಂತೆ ಮೂಢನಂತೆ ವರ್ತಿಸಬೇಡ '.

' ಸುರೇಶ್ ನಿನ್ನ ಗೆಳೆಯ '

' ಆತ್ಮೀಯ '

" ಅಲ್ಲವೆ ? "

" ಹೌದು ಹೌದು "

' ಛೆ ! ಸುರೇಶನನ್ನು ಪಾಪಿಯೆಂದು ಬಯ್ಯಬೇಡ. ಅವನು ನಿನ್ನ ಆತ್ಮೀಯ ಗೆಳೆಯನಲ್ಲವೆ ? ನಿನ್ನ ಪ್ರಾಣರಕ್ಷಕನಲ್ಲವೆ ? '

' ಹೌದು. ಹೌದು. ಅವನೂ ನನ್ನ ದೃಷ್ಟಿಯಲ್ಲಿ ಮುಗ್ಧಜೀವಿ. ಆದರೇಕೆ ಈತ ಶಾಂತಳನ್ನು ಈ ರೀತಿ ಮಾಡಿದ ? '

' ಈತನದು ತಪ್ಪಿಲ್ಲದೇ ಇರಬಹುದು ನಿನಗದು ಗೊತ್ತೆ ? ಏ ಆದರ್ಶದ ಅಮಲಿನಲ್ಲಿ ಅವಾಂತರಪಡುವ ಪ್ರಾಣಿಯೇ ಎಲ್ಲವನ್ನೂ ತಡೆದು, ದಿನಕಳೆದಂತೆಲ್ಲಾ ನಿಜ ಸಂಗತಿಯನ್ನು ಅರಿತು ನಡೆ. '

ನನ್ನ ಬುದ್ಧಿ ಸ್ಥಿಮಿತಕ್ಕೆ ಬರುವುದು ಕಷ್ಟವಾಯಿತು.

" ಆ........ಹೂಂ, ನಾನು ಇಲ್ಲಿಗೆ........ಬಂದುದೇ ಅದೇ ನಮ್ಮ....... ಡಾಕ್ಟರ್ ಇದಾರಲ್ಲ ಅವರು ಕಳುಹಿಸಿದ್ರು "—ಎಂದೆ ನಾನೇ ಬಲು ಕಾಲದ ನಂತರ.

" ಅಂದರೆ "

" ಅದೆಲ್ಲಾ ನಾಳೆ ಹೇಳ್ತೀನಿ "

" ಹೂಂ. "

—ಎಂದ ಸುರೇಶನ ದೃಷ್ಟಿ ಆಕಾಶವನ್ನು ನೋಡಿ ಅಲ್ಲಿ ಏನನ್ನೋ ಹಿಂದಿನ ಹಲವು ಸನ್ನಿವೇಶಗಳ ಚಿತ್ರಣಗಳನ್ನು ಕಾಣುತ್ತಿತ್ತು.

ಶಾಂತ ಉಪ್ಪಿಟ್ಟನ್ನು ತಂದು ಇಡಲಾರದೇ ಇಟ್ಟಳು.

" ಶಾಂತ, ನಿಲ್ಲು ಇವರೇ ನನ್ನ ಆತ್ಮೀಯ ಗೆಳೆಯರು ಸುರೇಶ್....... ಇವಳೇ ನನ್ನ ಶಾಂತ ಈ ನಿರ್ಭಾಗ್ಯನನ್ನು ಕೈಹಿಡಿದವಳು "

—ಎಂದು ಅಧುನಿಕ ನಾಗರೀಕತೆಯನ್ನು ಕಲಿತಿದ್ದ ನಾನು ಅವರಿಬ್ಬರ ಪರಿಚಯ ಮಾಡಿಕೊಡಲು ಯತ್ನಿಸಿದೆ. ಇದೇನು ಶಾಂತಳಿಗೆ ಹೊಸದಲ್ಲ.

ನಾನು ಅನೇಕಬಾರಿ ಹಿಂದೆ ಅವಳಿಗೆ ನನ್ನ ಅನೇಕ ಸ್ನೇಹಿತರನ್ನು, ಮನೆಗೆ ಬಂದವರನ್ನು ಪರಿಚಯ ಮಾಡಿಕೊಟ್ಟಿದ್ದೇನೆ.

ಅಲ್ಲದೆ ಶಾಂತ, ಸುರೇಶರ ಸಂಬಂಧ ಕಟ್ಟುತ್ತಿರುವ ನಾನು, ನನ್ನ ಊಹೆಯನ್ನು ಸ್ಥಿರಪಡಿಸುವುದೇ ನನ್ನ ಈ 'ಪರಿಚಯ' ಮಾಡಿಸುವುದರ ಮೂಲ ಉದ್ದೇಶವಾಗಿತ್ತು.

ಆದರೆ ಶಾಂತ ಅಲ್ಲಿ ನಿಲ್ಲಲೇ ಇಲ್ಲ. ಸರಸರನೆ ಒಳ ಹೋದಳು. ಸುರೇಶನ ತಗ್ಗಿದತಲೆ ತಗ್ಗಿಯೇ ಇತ್ತು.

"ತಿಂಡಿ ತಿನ್ನು ಸುರೇಶ್, ಶಾಂತಳಿಗೆ ಈಗಿನ ಈ ಪದ್ಧತಿಗಳೆಲ್ಲಾ ಹಿಡಿಸುವುದಿಲ್ಲ. ಅಲ್ಲದೆ ಅವಳು ಒಂದು ತರಹ"

—ಎಂದೆ ನಾನೇ.

"ಪರವಾಗಿಲ್ಲ ಅದೇನಿಲ್ಲ–ಅದೇನಿಲ್ಲ"

ಸುರೇಶನೂ ಅದೇನನ್ನೋ ನನ್ನಿಂದ ಬಚ್ಚಿಡುತ್ತಿದ್ದುದು ಅವನ ಮಾತು, ಹಾವ, ಭಾವಗಳಿಂದ ತಿಳಿಯಿತು.

ಸುರೇಶ್ ಯಾಂತ್ರಿಕವಾಗಿ, ಅತಿ ಪ್ರೀತಿಯಿಂದ ಆ ತಿಂಡಿಯನ್ನು ತಿಂದ.—ನಾನೂ ತಿಂದೆ.

ಕಾಫಿಯೂ ಬಂತು–ಇಬ್ಬರೂ ಕುಡಿದೆವು. ಅನಂತರ ಆ ಮಾತು–ಈ ಮಾತು ಆದಮೇಲೆ "ನಿಮ್ಮ Sister ಇಲ್ಲೇ ಇದಾರಾ?"

—ಎಂದೆ ನಾನೇ.

"ಇದಾಳೆ, ಮನೆಯ ಒಳಗೆ, ಬಾ. ಪ್ರಕಾಶ್ ನಮ್ಮ Sister ಪರಿಚಯ ಮಾಡಿಸಿಕೊಡ್ತೀನಿ"

"ಏನು ಮಾಡಿಕೊಂಡು ಇದಾರೆ?"

"ಮಾಡುವುದೇನು ಮಣ್ಣು? ಎರಡ್ಹೊತ್ತು ಅನ್ನ ಬೇಯಿಸಿ, ನನಗೂ ಬಡಿಸುತ್ತಾಳೆ. ವಿರಾಮವಾದಾಗಲೆಲ್ಲಾ ಇಂಗ್ಲಿಷ್ ಪುಸ್ತಕ ಓದುತ್ತಾ ಇರುತ್ತಾಳೆ. ಸಂಜೆ ನನ್ನ ಜೊತೆ Walk ಬರುತ್ತಾಳೆ."

"ನಮ್ಮ ಶಾಂತನಿಗೆ ಸ್ವಲ್ಪ ನಿನ್ನ Sister ಪರಿಚಯ ಮಾಡಿಕೊಡಪ್ಪ"

" ಈಗ ನೀನು ಬಾ, ಪ್ರಕಾಶ, ನಾನು ನಮ್ಮ ಮನೆ ಎಲ್ಲಾ ತೋರಿ
ಸುತ್ತೇನೆ. ನನ್ನ Sister Introduce ಮಾಡಿಕೊಡ್ತೀನಿ "

ಅವನನ್ನು ಹಿಂಬಾಲಿಸಿ ಹೊರಟೆ. ಅವನ ಮನೆ ಅತ್ಯಂತ ಸುಂದರ
ವಾಗಿ–ಸುಸಜ್ಜಿತವಾಗಿ ಸಜ್ಜುಗೊಳಿಸಲ್ಪಟ್ಟಿತ್ತು.

ಸುರೇಶ್ ಒಳಹೊಕ್ಕು 'ಶೈಲಜಾ....ಶೈಲಜಾ' ಎಂದ. ಒಂದ
ಸುಂದರವಾದ ಸುಮಾರು ಶಾಂತಳ ವಯಸ್ಸಿನ ಸುಂದರಿ ಎನಿಸಿಕೊಳ್ಳುವ
ಈಗಿನ ಫ್ಯಾಷನ್‌ಗೆ ತಕ್ಕಂತೆ ಮೇಲ್ಮೈಲಕ್ಷಣಗಳುಳ್ಳ ಹೆಣ್ಣು, ಕೈಯಲ್ಲಿ
Will Durant ರ The Story of Philosophy ಪುಸ್ತಕ
ಹಿಡಿದು ನಗುತ್ತಾ ಹೊರಬಂತು. ಬಾಬ್ ಮಾಡಿದ ಅವಳ ತಲೆಗೂದಲಿಂದ
ಅವಳು ಒಂದು ರೀತಿ ಮೋಹಕವಾಗಿಯೇ ಕಂಡಳು.

" ಇವನೇ, ಶೈಲಜ ನನ್ನ ಆತ್ಮೀಯಗೆಳೆಯ ಡಾಕ್ಟರ್ ಪ್ರಕಾಶ್
ಇವಳೇ ನನ್ನ ಪ್ರೀತಿಯ ತಂಗಿ ಶೈಲಜ "

ಶೈಲಜ—
" ನಮಸ್ಕಾರ ಡಾಕ್ಟರ್ " ಎಂದಳು.

'ಭೇಷ್' ಎಂದು ಮನಸ್ಸಿನಲ್ಲೇ ಹಲ್ಲು ಕಿರಿದು, ಪ್ರತಿ ನಮಸ್ಕಾರ
ಹೇಳಿದೆ.

ಅನಂತರ ಶೈಲಜನೇ—

" ಬನ್ನಿ, ನಮ್ಮ ಮನೆ ತೋರಿಸಿಕೊಡುತ್ತೇನೆ "

—ಎಂದು ನನ್ನನ್ನು ಹಿಂಬಾಲಿಸುವಂತೆ ಮಾಡಿಕೊಂಡು ಮುಂದೆ
ಹೊರಟಳು. ಸುರೇಶ್ ನನ್ನನ್ನು ಹಿಂಬಾಲಿಸಿದ.

" ಇದೇ ನೋಡಿ, ನನ್ನ ಮತ್ತು ನಮ್ಮ ಅಣ್ಣನು ಮಲಗುವ ಕೊಠಡಿ "
—ಎಂದಾಗ ಆ ಕೋಣೆಯಲ್ಲಿ ಕೇವಲ ಎರಡು ಮಂಚಗಳು ಎದುರು—
ಬದುರು ಗೋಡೆಯನ್ನು ಆಶ್ರಯಿಸಿ ಶ್ವೇತವರ್ಣಧಾರಿಗಳಾಗಿ ಕಂಗೊಳಿ
ಸುತ್ತಿದ್ದವು. ಎರಡು ಮಂಚದ ಮಗ್ಗುಲಲ್ಲೂ ಒಂದೊಂದು ಪುಸ್ತಕಗಳ
ಬೀರುಗಳು, ಟೇಬಲ್‌ಗಳು, ಕುರ್ಚಿಗಳೂ ಇದ್ದುವು. ಇನ್ನೇನನ್ನೂ ನಾನು
ಕಾಣಲಿಲ್ಲ. ಈ ಕೊಠಡಿ ಮಹಡಿ ಮೇಲಣದು. ಅದರ ಮಗ್ಗುಲಲ್ಲೇ
ಮತ್ತೊಂದು ಸಣ್ಣ ಕೊಠಡಿ.

"ಇದು ನಮ್ಮಣ್ಣನ ಪುಟ್ಟ Library"

—ಎಂದು ಶೈಲಜ ಹೇಳಿದಾಗ ಒಳಹೊಕ್ಕು ನೋಡಿದೆ. ಕೊಠಡಿಯ ನಾಲ್ಕು ಗೋಡೆಗಳಿಗೂ ನಾಲ್ಕು Book-Shelf ಒರಗಿದ್ದುವು. ಅವುಗಳ ತುಂಬಾ ಬರೀ ಪುಸ್ತಕಗಳೇ.

"ನನಗೆ, ನಿನಗೆ ತಿಳಿದಿರುವಂತೆ ಪುಸ್ತಕಗಳೆಂದರೆ ಒಂದು ಬಗೆಯ ಹುಚ್ಚು. ಈ ಪುಸ್ತಕಗಳಿಗಾಗಿ ಬೇಕಾದಹಾಗೆ ಹಣ ಸುರಿದಿದ್ದೇನೆ"

—ಎಂದ ಸುರೇಶ

"ಇಲ್ಲಿ ಇರುವ ಪುಸ್ತಕಗಳು ಎಲ್ಲಾ ಬರೀ Science ಬಗ್ಗೆ ಮಾತ್ರವೇ?"

"ಇಲ್ಲ, ಇಲ್ಲ. ಸಾಮಾನ್ಯವಾಗಿ, Science, Geology, Biology, Physiology, Psychology, Anthropology Archeology, Economics, Philosophy ಇದರ ವಿಷಯವಾಗಿ ಕೆಲವು, ಸಾಹಿತ್ಯದ ವಿಷಯವಾಗಿ ಕೆಲವೂ, ಬೇರೆ ಬೇರೆಯಾಗಿ ಅನೇಕ ಪುಸ್ತಕಗಳೂ ಇವೆ."

"ಸಾಹಿತ್ಯದಲ್ಲಿ ಯಾರು ಯಾರ ಕೃತಿಗಳಿವೆ?"

"ಸಾಮಾನ್ಯವಾಗಿ, Famous Author's ಗಳೆಲ್ಲರದೂ ಇದೆ. Shakespheare, ಕಾಳಿದಾಸ, ಟಾಗೂರ್ ಮೊದಲಾದ ಕವಿಗಳ ಕೆಲವು ಕೃತಿಗಳೂ, ಡಿಕನ್ಸ್, ವಿಕ್ಟರ್‌ಹ್ಯೂಗೋ, ಪಾಲ್ಕನರ್, ಜೇಮ್ಸ್-ಜಾಯ್ಸ್, ಝೋಲಾ, ಡಾಸ್ಟೋವಸ್ಕಿ, ಮೊದಲಾದವರ ಕೆಲವು ಕಾದಂಬರಿಗಳೂ ಇವೆ"

"ಕನ್ನಡದಲ್ಲಿ ಕಾದಂಬರಿಗಳು ಇಲ್ಲವೆ?"

"ಇವೆ. ಅ.ನ.ಕೃ. ತ.ರಾ.ಸು. ಕಟ್ಟೀಮನಿ ಮೊದಲಾದವರ ಕೃತಿಗಳಿವೆ. ನಿಮಗೆ ಬೇಕಾದರೆ ಈ ಪುಟ್ಟ Library ಯನ್ನು ಉಪಯೋಗಿಸಿಕೊಳ್ಳಿ."

"ಶಾಂತ ಓದುತ್ತಾಳೆ, ನಾನು ಅಷ್ಟಾಗಿ ಓದುವುದಿಲ್ಲ."

—ಎಂದೆ, ಆ ಪುಸ್ತಕಗಳ ರಾಶಿಯನ್ನು ನೋಡಿ ವಿಸ್ಮಯ ಭರಿತನಾಗಿ

"ಇದು ನನ್ನ Room"—ಎಂದು ಶೈಲಜ ತೋರಿಸಿದಳು. ಅಲ್ಲಿಯೂ ಕೆಲವು ಪುಸ್ತಕಗಳು ಇದ್ದುವು.

ಆದರೆ ಅಲಂಕಾರವಾಗಿದ್ದ ಕೊಠಡಿ ಶೈಲಜಳದೇ. ಮನೆ ನೋಡಿಯಾದನಂತರ, ಶೈಲಜಳೊಡನೆ ಮನೆಗೆ ಬಂದು, ಶೈಲಜಳಿಗೆ, ಶಾಂತಳ ಪರಿಚಯ ಮಾಡಿಕೊಟ್ಟೆ.

ಅವರಿಬ್ಬರೂ ಬಹುಬೇಗ ಆತ್ಮೀಯ ಗೆಳತಿಯರಾಗಿ ಹೋದರು.

ನಾನು–ಸುರೇಶ್ ಎಂದೊ ಆತ್ಮೀಯರಾಗಿದ್ದೆವು. ಕೆಲವೇ ದಿನದಲ್ಲಿ ನಾವು ಒಂದೇ ಮನೆಯವರಾಗಿಬಿಟ್ಟೆವು.

ಸುರೇಶ್

ತೊಗೆ ಇಲ್ಲದೂಟ, ಸಂಪಿಗೆ ಇಲ್ಲದ ತೋಟ
ನಗೆಯಿಲ್ಲದವಳೊಡನಾಟ ಬೆರಣಿಯು
ಹೊಗೆಯ ಕುಡಿದಂತೆ ಸರ್ವಜ್ಞ

೧

‘ ಶಾಂತ !
ಶಾಂತ !! ’

ನನ್ನೆದೆಯನ್ನು ಸೀಳಲು ಮುಂಬಯಿಗೆ ಬಂದೆಯಾ ?

........ನಾನು ಮುಂಬಯಿಯಲ್ಲಿ ಶಾಂತಳನ್ನು ಮೊದಲ ಭಾರಿಗೆ ಆತ್ಮೀಯನ ಮನೆಯಲ್ಲಿ ಕಂಡು ತಿಂಗಳಾರು ಉರುಳಿ ಹೋಗಿದೆ.

ಅಂದಿನಿಂದ ಮನಸ್ಸಿಗೆ ಶಾಂತಿ ಇಲ್ಲ.

‘ ನಾನೆಂತಹ ಪಾಪಿ. ಆ ಮುಗ್ಧೆ ಶಾಂತಳನ್ನು ಮರೆತವನು. ಛಿ ! ಮರೆತೆನೆ ನಾನು ?’

‘ ಇಲ್ಲ ವಲ್ಲ. ’........

‘ ಈ ಆರುತಿಂಗಳಲ್ಲಿ ನಾನು, ಸೋದರಿ ಶೈಲಜ ಗೆಳೆಯ ಪ್ರಕಾಶ್. ....ಶಾಂತ ಒಂದೇ ಮನೆಯವರಾದೆವು. ಶೈಲಜ ಶಾಂತಳನ್ನು ಒಂದು ಗಳಿಗೆಯೂ ಬಿಟ್ಟಿರುತ್ತಿರಲಿಲ್ಲ. ’

‘ ಆದರೆ ’

‘ ಆದರೆ ’

‘ ಶಾಂತಳಿಗೆ ನಾನು ದ್ರೋಹ ಮಾಡಿದೆ. ಅಂದು ಶಾಂತ ಗರ್ಭಿಣಿ. ಗರ್ಭ ಪಾತವಾಗುವ ಔಷಧಿಯನ್ನು ನಾನೇ ಕೊಡಿಸಿದೆ. ’

‘ ಮುಂದೆ ಶಾಂತ ಏನಾದಳು...........’

‘..................ಇಲ್ಲಿನವರೆಗೂ ತಿಳಿದಿರಲಿಲ್ಲ. ಆದರೆ ಈ ದಿನ ನನ್ನ ಪ್ರೇಯಸಿ, ನನ್ನ ಆತ್ಮೀಯ ಗೆಳೆಯನ ಧರ್ಮಪತ್ನಿ ! !”

‘ ಶಾಂತ ನನ್ನನ್ನು ಪ್ರೇಮಿಸಿ ಕಾಮಿಸಿ ಅವನನ್ನು ಹೇಗೆ ಮದುವೆಯಾದೆ ?’

‘ ಈ ಪ್ರಶ್ನೆ ಕೇಳಲು ನಾಚಿಕೆ ಯಾಗುವುದಿಲ್ಲವೆ.’

‘ ಆರ್ಯ ಧರ್ಮದ ಈ ಹೆಣ್ಣನ್ನು ನೀನು ಕಾಮಿಸಿ ಮರೆಯಲಿಲ್ಲವೆ. ?”

‘ ನನ್ನ ಬಾಳ ಬಗ್ಗೆ ನೀನು ಯೋಚಿಸಿದೆಯಾ ಸುರೇಶ?’

‘ ನೀನು ಮಾಡಿದ್ದು ಸರಿ ಶಾಂತ. ನಾನು ಪಾಪಿ. ಕ್ಷಮಿಸು.’

‘ ನೀನು ಕ್ಷಮೆಗೆ ಯೋಗ್ಯನಲ್ಲ ನೀನು ಕ್ಷಮೆಗೆ ಯೋಗ್ಯನಲ್ಲ.’

‘ ಶಿಕ್ಷೆಯನ್ನೇ ವಿಧಿಸು.’

‘ ವಿಧಿಸಿದ್ದೇನೆ’

‘ ಹೌದು ಶಿಕ್ಷೆ ವಿಧಿಸಿದ್ದೀಯೆ. ಶಾಂತ ಸರಿಯಾದ ಶಿಕ್ಷೆ. ನಿನಗಾಗಿ ಬ್ರಹ್ಮಚಾರಿಯಾಗಿರುವ ನನ್ನನ್ನು ಮರೆತು ನೀನು ಪ್ರಕಾಶ್‌ನೊಡನೆ ಸಂಸಾರಿಣಿ ಯಾಗಿದ್ದೀಯಾ?’

‘ ಏಕೆ ತಲೆ ಕೆಟ್ಟಿದೆಯಾ ಸುರೇಶ್, ಪ್ರಕಾಶ್ ಏನು ಹೇಳಿದರು? ನಾನು ಪ್ರೇಮ ಮಧೂನ್ಮಾಧಿನಿಯಾಗಿ ಪ್ರಕಾಶ್‌ರ ಬಾಳನ್ನೇ ಹಾಳು ಮಾಡುತ್ತಾ ನಿನಗಾಗಿ ಕಾದಿದ್ದೇನೆ.’

‘ ಶಾಂತ ನೀನೆಷ್ಟು ಸುಂದರಿ!....’

‘ ನಿನ್ನ ಈ ಫೋಟೊ ಅದೆಷ್ಟು ಸುಂದರ ವಾಗಿದೆ.’

ನಾನೇ ಬರೆದ ನನ್ನ ಹೃದಯೇಶ್ವರಿ ಶಾಂತಳ ತ್ರಿವರ್ಣ ಚಿತ್ರದ ಮುಂದೆ ಕುಳಿತು ಯೋಚಿಸುತ್ತಲೇ ಇದ್ದೆ. ಆ ಚಿತ್ರಕ್ಕೆ ಇನ್ನಿಲ್ಲದ ಬೆಲೆ ನನ್ನಿಂದ ಕೊಡಲಾಗಿದೆ. ಈಚಿತ್ರವನ್ನು ನಾನು ನನ್ನ ಮಲಗುವ ಕೋಣೆಯಲ್ಲಿ ಇಟ್ಟು ಕೊಂಡಿದ್ದೇನೆ. ನನಗೆ ಇಚ್ಛೆ ಇಲ್ಲದಾಗ ಭಾವಚಿತ್ರದ ಮೇಲೆ ತೆರೆ ಎಳೆಯುತ್ತೇನೆ. ಇನ್ನೊಬ್ಬರು ಅದು ಮರೆಯಾದಾಗ ಅದನ್ನು ನೋಡಲಾರರು. ಆದರೆ ನಾನು ಬರೆದ ಚಿತ್ರದ ಮುಂದೆ ಕುಳಿತು ಅಂದು ಏನನ್ನೋ ನನ್ನವಳ ಚಿತ್ರ ದೊಡನೆ ಮಾತನಾಡುತ್ತಿದ್ದೆ. ಇದ್ದಕಿದ್ದಂತೆಯೇ ಯಾರೋ ನನ್ನ ಬಾಗಿಲನ್ನು ದಡಬಡ ಬಡಿದರು. ಓಡಿಬಂದು ಬಾಗಿಲು ತೆಗೆದೆ. ಗೆಳೆಯ ಪ್ರಕಾಶ್ ಒಳಬಂದ. ಆದರೆ ನಾನು ಶಾಂತಳ ಚಿತ್ರವನ್ನು ಮುಚ್ಚಿಯೇ ಇರಲಿಲ್ಲ. ಪ್ರಕಾಶ್ ಆ ಚಿತ್ರವನ್ನು ದುರುಗುಟ್ಟಿ ಬಹು ಕಾಲ ನೋಡಿದನಂತರ ನನ್ನ ಕೊಠಡಿಯ ಅಗಣಿ ಹಾಕಿದ. ನಾನು ಭಯದಿಂದ ತತ್ತರಿಸಿದೆ.

“ ಪ್ರಕಾಶ್, ಏನೂ ತಿಳಿದುಕೊಳ್ಳ ಬೇಡ”

—ಎಂದು ಅವನನ್ನು ಅಂಗಲಾಚಿ ಬೇಡಿದೆ.

" ಏನನ್ನೂ ತಿಳಿದು ಕೊಳ್ಳುವಂತಿಲ್ಲ. ಈ ಚಿತ್ರ ನನ್ನಬಾಳಿನ ಸಮಸ್ಯೆಯನ್ನು ಬಿಡಿಸುತ್ತಿದೆ. ಹೆದರ ಬೇಡ ಸುರೇಶ್. ನಾನು ಕೇಳಿದ ಪ್ರಶ್ನೆ ಗಳಿಗೆಲ್ಲಾ ಉತ್ತರ ಕೊಡುವೆಯಾ ?"

—ಅವನ ಮುಖದಲ್ಲಿ ಕೋಪ ವಿರಲಿಲ್ಲ-ಆದರೆ ಯಾವುದೋ ನೋವಿತ್ತು.

" ಈ ಮಧ್ಯ ರಾತ್ರಿಯಲ್ಲೇಕೆ ಬಂದೆ ?"

" ಕೇಳಿದ ಪ್ರಶ್ನೆಗೆ ಉತ್ತರ ಕೊಡುವೆಯೋ ಇಲ್ಲವೋ ?"

—ಗುಡುಗಿದ ಪ್ರಕಾಶ್.

" ನಿನ್ನ ಪ್ರಶ್ನೆಗಳು ಯಾವ ವಿಷಯದ ಮೇಲೆ....? "

" ನಿನ್ನ-ನನ್ನ-ಶಾಂತಳ ಜಿವನಕ್ಕೆ ಸಂಬಂಧಿಸಿದ ಪ್ರಶ್ನೆಗಳು. ದಯ ವಿಟ್ಟು ಉತ್ತರಿಸು. ನನ್ನ-ನಿನ್ನ-ಶಾಂತಳ ಜೀವನಗಳು ಸುಂದರ ವಾಗಲಿ. "

—ಅಂಗಲಾಚಿ ಬೇಡಿದ ಪ್ರಕಾಶ್.

ಈ ಹೊತ್ತಿಗೆ ಪ್ರಕಾಶನಿಗೆ, ನನ್ನ-ಶಾಂತಳ ಪೂರ್ವ ಸಂಬಂಧದ ವಿಷಯ ತಿಳಿದಿದೆ ಎಂದೆ ನಾನು ದೃಢಗೊಂಡೆ. ಅಲ್ಲದೆ ಪ್ರಕಾಶ್ ನನ್ನ ಬಳಿ ಇದ್ದ ಶಾಂತಳ ಚಿತ್ರವನ್ನು ಬೇರೆ ನೋಡಿರುವಾಗ !

" ಹೇಳುತ್ತೇನೆ."

" ನಿನಗೂ ಶಾಂತಳಿಗೂ ಯಾವುದಾದರೂ ಹಿಂದೆ ಸಂಬಂಧವಿತ್ತೆ ?"

" ಏಕೆ ?"........

" ನೋಡು, ಶಾಂತಳ ನನ್ನ ಲಗ್ನದ ವಿಷಯ ಇಲ್ಲಿನವರೆಗು ಅವನ ನನ್ನ ಸಂಸಾರದ ಚಿತ್ರಣ ಎಲ್ಲವನ್ನೂ ನಿನಗೆ ತಿಳಿಸಿದ್ದೇನಲ್ಲಾ.... "

" ತಿಳಿಸಿದ್ದೀ.... ಶಾಂತ ನಿನ್ನ ದೃಷ್ಟಿಯಲ್ಲಿ ಅರೆಹುಚ್ಚಿ "

" ಅವಳು ಹುಚ್ಚಿಯಲ್ಲ. ನೀನೇ ಅವಳನ್ನು ಹುಚ್ಚಿಯಂತೆ ಮಾಡಿದ್ದೀಯೆ. ಅವಳು ಇಲ್ಲಿಗೆ ಆರುತಿಂಗಳಿಂದಲೂ ನಿನ್ನ ನೋಡಿದ ದಿನದಿಂದಲೂ ನನ್ನನ್ನು ಮರೆತಿದಾಳೆ. ದಿನವೂ ರಾತ್ರಿ ಎಲ್ಲಾ ಅಳುತ್ತಾಳೆ. ಡೈರಿ ಗೀಚುತ್ತಾಳೆ. ಈದಿನ ರಾತ್ರಿ ಅವಳು ಡೈರಿ ಹಿಡಿದಾಗ ಸುಮಾರು ಒಂಭತ್ತು. ಘಂಟೆ. ರಾತ್ರಿ ಒಂದರವರೆಗೂ ಏನೇನೋ ಬರೆದಳು. ನಾನೂ ನಿದ್ರೆ ಬಂದವನಂತೆ ನಟಿಸುತ್ತಾ ಮಲಗಿದ್ದೆ. ಸ್ವಲ್ಪ ಹೊತ್ತು ಬಿಕ್ಕಡಿಸಿ.

ಬಿಕ್ಕಡಿಸಿ ಮೆಲ್ಲಗೆ ಅತ್ತಳು. ಹಾಗೆಯೇ ಟೇಬಲ್‌ಗೆ ಒರಗಿ ಮಲಗಿದಳು. ಈದಿನ ಮೆಲ್ಲನೆದ್ದು ಅವಳ ಡೈರಿ ಎಳೆದು ಓದಿದೆ. ಪ್ರತಿಯೊಂದೂ ಸಂಪೂರ್ಣ ಅರ್ಥವಾಯಿತು. ಮೊದಲು ಮಸುಕು ಮಸುಕಾಗಿತ್ತು. ನೋಡು, ನಾನು ಕೂಗುತ್ತಿರುವೆನೆಂದು ಹೆದರಬೇಡ. ಓದು."

—ಎಂದು ನೋವಿನ ಸಂಕಟದಿಂದ ಭಾಷಣ ಕೊಟ್ಟು ಒಂದು ಮುದ್ದಾದ ಡೈರಿಯನ್ನು ತೆರೆದು ನನ್ನ ಕೈಗಿತ್ತ. ಪ್ರಕಾಶನನ್ನು ಕೂರಿಸಿ, ಡೈರಿಯನ್ನು ಓದಿದೆ. ಅಲ್ಲಿ ನನ್ನ-ಶಾಂತಳ ಕಾಲೇಜಿನ ಸಂಬಂಧದಿಂದ ಹಿಡಿದು ಇಲ್ಲಿನವರೆಗೂ ತನ್ನ ಜೀವನವನ್ನು ಸೂಕ್ಷ್ಮವಾಗಿ, ಅತಿಮಧುರ ವಾಗಿ ಬರೆದಿದ್ದಳು ಶಾಂತ. ಕಾಳಿದಾಸನ, Shakespeare ರನ ಸಾಹಿತ್ಯವನ್ನು ಇವಳ ಬರವಣಿಗೆಯ ಮುಂದೇ ನೀವಾಳಿಸಿ ಹಾಕಬೇಕಿತ್ತು.

ನವರಸ ಪ್ರಧಾನವಾಗಿತ್ತು ಅವಳ ಆತ್ಮ ಚರಿತೆ. ಅಷ್ಟನ್ನೂ ಒಂದೇ ದಿನ ಬರೆದಿದ್ದಾಳೆ. ಕಡೆಯ ಪದಗಳನ್ನು ಪ್ರೀತಿಯಿಂದ ಓದಿದೆ:

"..ಸುರೇಶ್

ನೀನು ನನ್ನನ್ನು ಪ್ರೀತಿಸಿದೆ.-ಪ್ರೇಮಿಸಿದೆ.-ಕಾಮಿಸಿದೆ.-ಕಡೆಗೆ ಕೈಬಿಟ್ಟೆ. ಇದೀಗ ನಾನು ಆದರ್ಶವಾದಿಗಳೂ, ಅತ್ಯಂತ ಕನಿಕರವಾದ ಆತ್ಮವುಳ್ಳವರೂ ಆದ ಪ್ರಕಾಶರ. ಹೆಂಡತಿ ಎಂದು ಜಗದ ಎದುರು ಇರುವಾಗ (ಆದರೆ ಅವರಿಗೂ ನನಗೂ ಈವರೆಗೂ ಯಾವ ಗಂಡ ಹೆಂಡಿರ ಸಂಬಂಧವೂ ನಡೆದಿಲ್ಲ. ನನ್ನ ದೃಷ್ಟಿಯಲ್ಲಿ ಅವರು ನನ್ನ ಅಣ್ಣ. ನನ್ನ ಬಾಳ ಬೆಳಕು. ಇವರು ನನ್ನನ್ನು ಯಾವುದೋ ದೃಷ್ಟಿಯಿಂದ ಸ್ವೀಕರಿಸಿ ಈದಿನ ನನಗಾಗಿ ಬಲುಕಷ್ಟ ಅನುಭವಿಸುತ್ತಿದ್ದಾರೆ. ಕಾರಣ ನೀನೆ) ನನ್ನನ್ನು ಅಣಕಿಸಲು ನಮ್ಮಗಳೊಡನೆ ಬೆರೆತು ಹೋಗಿದ್ದೀಯೆ ಇದು ನಿನ್ನ ನ್ಯಾಯ! ನೀನು ನನ್ನನ್ನು ಮರೆತರೂ ನಾನೂ ಮಾತ್ರ ನಿನ್ನನ್ನು ಮರೆತಿಲ್ಲ. ಮರೆಯಲಾರೆ. ನಿನಗಾಗಿ ನಾನು. ನಿನ್ನನ್ನು ಎಂದೆದಿಗೂ ಮರೆಯಲಾರೆ. ನೀನು ನನ್ನಿಂದ ದೂರ ಇದ್ದಿದರೆ ಚೆನ್ನಾಗಿತ್ತು. ಈಗ ಅತಿ ಹತ್ತಿರದಲ್ಲೇ ಇದ್ದಿ ಅದೆಷ್ಟು ಹತ್ತಿರ!-ಆದರೆ ಅದೆಷ್ಟುದೂರ!! ನಿನ್ನನ್ನು ನೋಡಿ ನೋಡಿ ನನ್ನ ಬುದ್ಧಿ ಕೆಡುತ್ತಾ ಬಂದಿದೆ. ಯೋಚಿಸಿ ಯೋಚಿಸಿ ನಿಶ್ಯಕ್ತಳಾಗುತ್ತಿದ್ದೇನೆ. ನಾನು

ನಿನ್ನನ್ನು ಕೂಡದ ಹೊರತೂ ನನ್ನ ಬಾಳು ಭವ್ಯವಾಗುವಂತಿಲ್ಲ. ನಾನು ಸುಖಿಯಾಗುವಂತಿಲ್ಲ.

ಈದಿನವೂ ಪ್ರಕಾಶ್ ಒಪ್ಪಿದರೆ ನಿನ್ನನ್ನು ಅಪ್ಪಲುಸಿದ್ಧಳಿದ್ದೇನೆ. ಆದರೆ ನನ್ನ ಕಷ್ಟವನ್ನು ಪ್ರಕಾಶರಿಗೆ ಹೇಳುವವರು ಯಾರು? ನಾನು ಹೋಗಿ ಹೇಳಿಕೊಳ್ಳಲೆ? ಛಿ. ? ಇದಕ್ಕಾಗಿಯೇ ಅವರು ನನ್ನ ಕೈ ಹಿಡಿದರೆ? ಅಬ್ಬ ಈ ಕೆಲಸವನ್ನು ನಾನು ಎಂದೆದಿಗೂ ಮಾಡಲಾರೆ.

ಸುರೇಶ್ ನೀನು ನನಗೆ ಪ್ರೇಮವೆಂಬ ಮಧುವನ್ನು ಕುಡಿಸಿದ್ದೀಯೇ, ಇದುವರೆಗೂ ನಾನು ಉನ್ಮತ್ತಳಾಗಿದ್ದೆ ಈಗ ಮಧು ವಿಪರೀದವಾಗಿ, ನಿನ್ನ ಹೆಸರ್ಹೇಳುತ್ತಾ ಸಾಯುತ್ತೇನೆ.

ನೀನು ಸುಖವಾಗಿರು.

ನನ್ನ ಹೃದಯದಲ್ಲಿ ನೀನಲ್ಲದೆ ಇನ್ನೊಬ್ಬರು ಬರಲು ಸಾಧ್ಯವಿಲ್ಲ.

ನನ್ನ ಹೃದಯ ಕೋಳದಲ್ಲಿ ಮಿಂದು ಅಮರ ಪ್ರೇಮದ ಮಡಿಯುಟ್ಟು ನನ್ನನ್ನು ಪೂಜಿಸಲು ನಿನಗೊಬ್ಬನಿಗೇ ರಹದಾರಿ. ಬೇರೊಬ್ಬರಿಗೆ ಇಲ್ಲ.

—ಇತಿ ನಿನ್ನವಳು ಪ್ರೇಮಮಧೂನ್ಮಾದಿನಿ.

" ನೀನು ಸುಖವಾಗಿರು. "

ನಿನ್ನನ್ನು ಬಿಟ್ಟು ಯಾವ ಸುಖವನ್ನು ನಾನು ಅನುಭವಿಸಲಿ ಶಾಂತ. ? ಈಮಾತನ್ನು ನೀನು ಆಡಬಹುದೆ. ? ಎಂದು ಹಾಗೆಯೇ ಧೈರಿಯನ್ನು ಎದೆಗಪ್ಪಿ ಕಣ್ಣೀರ ಕಂಬನಿಗರೆದೆ.

ಪ್ರಕಾಶ—

" ಇದೆಲ್ಲಾ ನಿಜವೇ ಸುರೇಶ್. "

—ಎಂದಾಗ ನಾನು ಎಲ್ಲ ಕಥೆಯನ್ನೂ, ನನ್ನ ಆತ್ಮದ ದುಃಖ ದುಗುಡವನ್ನೂ ಅವನ ಮುಂದೆ ತೋಡಿಕೊಂಡು ಕಣ್ಣೀರಿಟ್ಟೆ. "

" ನೀನು ಏಕೆ ಅವಳನ್ನು ಮರೆತೆ?"

—ಎಂದು ಕೇಳಿದ ಪ್ರಕಾಶ್.

" ಹೇಳುತ್ತೇನೆ-ತಾಳು. ಅದೊಂದು ಅತಿ ದುಃಖದ ಕತೆ. ನಾನು ತಂದೆ ತಾಯಿಗಳನ್ನು ಕಳೆದು ಕೊಂಡ ಕತೆ, ತಂಗಿಯ ಗಂಡನನ್ನು ಕಳೆದು ಕೊಂಡ ಕಥೆ. "

—ಎಂದಾಗ ನನ್ನ ಕಣ್ಣಿಂದ ನೀರು ಧಾರಾಕಾರವಾಗಿ ಹರಿದು ಬರುತ್ತಾ ಇತ್ತು.

" ನಿನ್ನ ತಂಗಿ ವಿಧವೆಯು ? ಹಾಗೆ ಕಾಣುವುದೇ ಇಲ್ಲವಲ್ಲ ?"

" ಅವಳ ಗಂಡ ಸತ್ತಾಗ ಅವಳು ಹದಿನಾಲ್ಕರ ಇನ್ನೂ ದೊಡ್ಡದಾಗದ ಹೆಣ್ಣು; ದೇವರು ಅವಳಿಗೆ ಈ ವಿಪತ್ತನ್ನು ತಂದೊಡ್ಡಿದ್ದಾನೆ. ಅವಳ ಹೃದಯ ನೋಯದಿರಲೆಂದು ಅವಳಿಗೆ ಎಲ್ಲ ಅಲಂಕಾರ ಮಾಡಿಕೊಳ್ಳಲೂ ರಹದಾರಿಯಿತ್ತು, ತಲೆ ತೆಗೆಯದಂತೆ ನೋಡಿ ಕೊಳ್ಳುತ್ತಾ ಓದಿಸುತ್ತಾ ಬಂದಿದ್ದೇನೆ."

" ಅಯ್ಯೋ ನನ್ನಗಿಂತಲೂ ಅವಳು ನಿರ್ಭಾಗ್ಯಳು."

" ನನ್ನ, ಈ ಪಾಪಿಯ ಕಥೆ ಕೇಳುವೆಯಾ ?ಪ್ರಕಾಶ್ ನೀನು ನನ್ನ ಪ್ರೀತಿಯ ತಂದೆಯಂತೆ ಇರುವೆ"

—ಈಗಬೇಡ ಮುಂದಿನ ನಿನ್ನ ಕಷ್ಟವನ್ನು ನೀನು ನಿನ್ನ ಶಾಂತ ಳನ್ನು ಮರೆಯಲು ಕಾರಣವನ್ನು ಶಾಂತಳ ಮುಂದೆ ಹೇಳುವೆಯಂತೆ,"

" ಅಂದರೆ, ನಾನು ಮನೆಗೆ ಹೋಗುತ್ತೇನೆ ಶಾಂತ ಒಂಟಿ ಇದ್ದಾಳೆ. ಹೆದರಿಕೊಂಡಾಳು. ಬೆಳಗ್ಗೆ ನಾನು ಅವಳೂ ಬರುತ್ತೇವೆ. ತಿಂಡಿ ಸಿದ್ಧ ಪಡಿಸಿರು ತಿಂಡಿ ಆದನಂತರ ನಾಲ್ಕುಜನರೂ ಕುಳಿತುಕೊಳ್ಳೋಣ. ಆಗ ನಿನ್ನ ಕಥೆ ಹೇಳಬೇಕು."

" ಆಗಲಿ"

" ಅಷ್ಟೇ ಸಾಲದು ನಿನ್ನ ಕಥೆಯಾದ ಕೂಡಲೇ ನಾನು ಹೇಳುವುದನ್ನು ಕೇಳಬೇಕು."

" ಅದೇನು ?"

" ಅದೆಲ್ಲಾ ಈಗ ಬೇಡ. ಕಥೆಹೇಳಿಯಾದನಂತರ ನಾನು ಏನನ್ನು ಹೇಳುವೆನೋ ಹಾಗೆ ಕೇಳಬೇಕು."

" ಆಗಲಿ."

" ಅಗೋ ಶಾಂತ ಈಚೆಕಡೆ ಬಂದೇ ಬಿಟ್ಟಳು."

—ಎಂದು ಪ್ರಕಾಶ್ ಧೈರಿಯನ್ನು ಕಿತ್ತುಕೊಂಡು ಓಡಿದ. ನಾನು ಶಾಂತಳ ಪಟದ ಮುಂದೆ ಕುಳಿತು ತುಂಬಾ ಹೊತ್ತು ಕಣ್ಣೀರಿಟ್ಟೆ.

ಅನಂತರ ಶೈಲಜ ಮಲಗಿದ್ದ ಕೋಣೆಗೆ ಹೋಗಿ ಏಳಿಸಿ, ಉತ್ತಮವಾದ ತಿಂಡಿ ಮಾಡಲು ತಿಳಿಸಿದೆ.
ಶೈಲಜ, ಶಾಂತ ಬರುವ ಮಾತು ಕೇಳಿ ಆಸಕ್ತಿಯಿಂದ ಮೇಲೆದ್ದು ಸ್ನಾನ ಮಾಡಿ ತಿಂಡಿಗೆ ಒಲೆ ಹತ್ತಿಸಿದಳು. ಆಗ ಘಂಟೆ ಬೆಳಗ್ಗೆ ನಾಲ್ಕೂವರೆ.

ಪ್ರಕಾಶ್ ಹೋದನಂತರ ಅವರ ಮನೆಯಿಂದ ಶಾಂತ ಅಳುವ ಹಾಗೂ, ಆಡುವ ಮಾತುಗಳು ಅತಿ ಅಸ್ಪಷ್ಟವಾಗಿ ಕೇಳಿಬರುತ್ತಿದ್ದುವು.

ಶಾಂತಳ ಪಟವನ್ನು ಎದೆಗೆ ಅಪ್ಪಿ ಕಣ್ಮುಚ್ಚಿದೆ. ಸ್ವರ್ಗವೇಣು ಮಾತ್ರ ಉಳಿಯಿತು; ದುಃಖಸಾಗರದಲ್ಲಿ ಮುಳುಗಿದ್ದ ನನಗೆ. ”

೧

" ಅಣ್ಣ ಏಳೂವರೆ....ಅಣ್ಣ....ಅಣ್ಣಾ "

—ಎಂದು ಶೈಲಜ ಕೂಗಿ ಎಬ್ಬಿಸಿದಳು. ದಡಕ್ಕನೆ ಎದ್ದೆ.

ಪ್ರೀತಿಯ ತಂಗಿಯ ಕೈಯಲ್ಲಿ ಪ್ರಿಯ ಶಾಂತಳ ಚಿತ್ರವಿತ್ತು.

" ಇದೇನಣ್ಣಾ, ಆದದ್ದು ಆಗಿಹೋಯಿತು. ನೀನು ಮಾಡಿದ್ದೂ ತಪ್ಪೇ ಅಲ್ಲವೆ? ಈಗ ದೇವರ ದಯೆಯಿಂದ ಅವಳು ಸುಖವಾಗಿರುವಾಗ ನೀನೇಕೆ ಅವಳ ಚಿತ್ರ ಎದೆಯಲ್ಲಿಟ್ಟು ಹೀಗಾಡುತ್ತಿರುವೆ. ಪ್ರಕಾಶರು ನಿನ್ನ ಸ್ಥಿತಿಯನ್ನು ಕಂಡರೆ....?

—ಎಂದಳು ಶೈಲಜ. ಶೈಲಜಳಿಗೆ ನನ್ನ-ಶಾಂತಳ ಸಂಬಂಧದ ವಿಷಯ ಅಂದೊಂದು ದಿನ ತಿಳಿಸಿದ್ದೆ.

ನಿಜ ನಾನು ಮುಂಬಯಿಗೆ ಬಂದ ಹೊಸದು. ಆಗ ತಾನೆ ಶಾಂತಳ ಚಿತ್ರ ಬರೆದು ಮುಗಿಸಿದ್ದೆ. ಆ ಚಿತ್ರದ ಮುಂದೆ ಕುಳಿತು ಅಳುತ್ತಾ ಇದ್ದೆ. ಶೈಲಜ ಓಡಿಬಂದು—

" ಏಕಣ್ಣ ಅಳುತ್ತಿದ್ದೀಯೆ?"

—ಎಂದು ಕೇಳಿದಾಗಲೆ ನನಗೆ ನನ್ನ ಪ್ರಜ್ಞೆ ಬಂದುದು. ಆದರೆ ತಂಗಿಗೆ ಉತ್ತರಕೊಡದೆ ಕರವಸ್ತ್ರದಿಂದ ಕಣ್ಣೊರಸಿಕೊಳ್ಳುತ್ತಾ ಇದ್ದೆ. ಆಗ :

" ಇದು ಯಾರಣ್ಣ? ಈಕೆ ನಿನಗೇನಾಗಬೇಕು? ಇದೇಕೆ ಯಾವುದೊ ಸಿನಿಮಾ Star (ಸ್ಟಾರ್) ಮುಂದೆ ಕುಳಿತು ಅಳುತ್ತಿದ್ದೀಯೆ?"

—ಎಂದಳು ಶೈಲಜ.

" ...."

" ಅಣ್ಣಾ ಹೇಳುವುದಿಲ್ಲವೆ? ನನ್ನೊಡನೆ ಹೇಳಲು ನಿನಗೇನು ಕಷ್ಟ?"

ಪ್ರೀತಿಯ ತಂಗಿಯ ಮುಂದೆ ನನ್ನ ಪ್ರಣಯ ಕಥೆಯನ್ನು ಹೇಳಿಕೊಳ್ಳುವ ಮನಸ್ಸಾಯಿತು. ಅಂದು ಎಲ್ಲ ಕಥೆಯನ್ನೂ ಶೈಲಜಳಿಗೆ ಹೇಳಿದ್ದೆ

ಶೈಲಜ ಓದಿದ ಹುಡುಗಿಯಾದ್ದರಿಂದ, ಕಥೆ ಕೇಳಿ ತುಂಬಾ ನೊಂದು ಕೊಂಡಳು. ನನ್ನ ಮೇಲೆ ಕೋಪಗೊಳ್ಳಲಿಲ್ಲ.

"ಹಾಗಾದರೆ ಅತ್ತಿಗೆ ಶಾಂತಳನ್ನು ಈಚೆಗೆ ನೋಡಿಯೇ ಇಲ್ಲ ವೇನಣ್ಣಾ ?"

—ಶೈಲಜ ಈ ಮಾತು ಕೇಳಿದಾಗ ಇನ್ನಿಲ್ಲಿದ ದುಃಖ ಒದ್ದು ಕೊಂಡು ಗಂಟಲಿಗೆ ಬಂತು.

ತಂಗಿ, ಜೇನಮಾತಿನಿಂದ ನನ್ನನ್ನು ಸಮಾಧಾನ ಮಾಡಿದ್ದಳು. ಈ ದಿನವೂ ಅದೇ................

ರಾತ್ರಿ ನಡೆದ ಕಥೆ ಹೇಳಿದೆ. ಶೈಲಜ ಬೆಚ್ಚಿ, ಬೆವರಿ ಶಾಂತಳಾದಳು. ಅವಳ ಮುಖದಲ್ಲಿ ಎಳೆ ನಗು ಬಂದು ತೇಲಿ ಮಾಯವಾಯಿತು.

"ಅಣ್ಣ, ಪ್ರಕಾಶ್ ದೇವರು"

—ಎಂದು ತಂಗಿ ಹೇಳಿದಾಗ—

"ಹೌದು ಅವರು ದೇವರು"

"ದೇವರು...........

ದೇವ ಕುಮಾರರು"

—ಎಂದು ಉಸುರುತ್ತಾ ಸ್ನಾನಮಾಡಲು ಹೊರಟೆ. ನನ್ನ ಜೀವ ಬಡಿದುಕೊಳ್ಳುತ್ತಲೇ ಇತ್ತು. ಮನಸ್ಸು ಶಾಂತಳಲ್ಲಿ ಮರೆಹೊಕ್ಕಿತು. ಸ್ನಾನಮಾಡಿ ಸಂಧ್ಯಾವಂದನೆಯ ಶಾಸ್ತ್ರ ಮುಗಿಸಿ, ನನ್ನ ರೂಂಗೆ ಬಂದು ತಲೆ ಬಾಚಿ, ಬಟ್ಟೆ ಹಾಕಿಕೊಳ್ಳುತ್ತಾ ಇದ್ದೆ. 'ಇಂದು ಭಾನುವಾರ' ಎಂದಿತು ಎದುರಿಗಿದ್ದ ಕ್ಯಾಲೆಂಡರ್.

ಆದರೆ ಶಾಂತಳೊಡನೆ, ಪ್ರಕಾಶ್ ಮನೆ ಕಡೆ ಬರುತ್ತಾ ಇದ್ದುದನ್ನು ಕಂಡು ಬುದ್ಧಿ ನೆಟ್ಟಗಾಯಿತು.

ದೇಹ ಕಂಪಿಸಿತು.

ಪ್ರಕಾಶ್ ಏನುಮಾಡುವನೊ ?

ಶಾಂತ....ನೀನು ಏನವೂ........?

ಶೈಲಜ ನೀನೇ ಕಾಪಾಡು.

ಥೂ! ಎನಿಸಿತು. ಶಾಂತ ದೊಡ್ಡ ಸೀರೆಯುಟ್ಟು ಸರ್ವಾಲಂಕಾರ ಭೂಷಿತಳಾಗಿ ಮನೆಯತ್ತ ಬರುತ್ತಿದ್ದಳು,

ಅವಳ ಸುಂದರ ರೂಪನ್ನು ನೋಡಿ ಋತುಗಳ ಹೊಲವನ್ನು ನೋಡಿ ರೈತ ಸಂತೋಷದಿಂದ ನಗುವಂತೆ ಹಲ್ಲು ಕಿರಿದೆ.

ಶೈಲಜಳನ್ನು ಶಾಂತ ಸೇರಿರಬಹುದು. ಆದರೆ ಪ್ರಕಾಶ್ ನನ್ನ ಕೋಣೆಗೆ ಬಂದು—

" What Mr. Suresh ? ಎಂದ. "

" ಏನನ್ನು ಹೇಳಲಿ ಪ್ರಕಾಶ್? ರಾತ್ರಿ ನೀನು ಹೋದ ಮೇಲೆ ಶಾಂತ ಅದೇಕೆ ಅಷ್ಟು ಅಳುತ್ತಿದ್ದಳು. ? "

—ಎಂದೆ ಭಾರವಾದ ಧ್ವನಿಯಲ್ಲಿ.

" ನಾನು ಡೈರಿ ಎತ್ತಿಕೊಂಡಿರಲಿಲ್ಲವೆ? ಅದಕ್ಕಾಗಿ ಗುಟ್ಟೆಲ್ಲಾ ರಟ್ಟಾಯಿತೆಂದು ಓಡಿಬಂದು ನನ್ನ ಕಾಲ್ಹಿಡಿದು ' ನನ್ನ ಅಪರಾಧ ಕ್ಷಮಿಸಿ ' ಎಂದು ಬೇಡಿಕೊಂಡಳು. ನಾನು ಪ್ರಶಾಂತನಾಗಿ ಮೆಲ್ಲನೆ ಮೇಲೇಳಿಸಿದ್ದೆ.

ಆಗ—

" ನೀವೇಕೆ ಡೈರಿಯನ್ನು ಎತ್ತಿಕೊಂಡು ಸುರೇಶನಲ್ಲಿಗೆ ಹೋಗಿದ್ದಿರಿ ? ನನ್ನ ಮಾನಕಳೆದಿರಿ ನನ್ನನ್ನು ಕೊಂದಿರಿ. ನಾನು ಎಲ್ಲಿಯಾದರು ಹೊರಟು ಹೋಗೋಣ ಎಂದಿದ್ದೆ. ಛೆ. ಕ್ಷಮಿಸಿ, ಕ್ಷಮಿಸಿ ಈ ಪತಿತಳನ್ನು ಕ್ಷಮಿಸಿ ಕಾಪಾಡಿ. "

—ಎಂದು ಬಗೆ ಬಗೆಯಾಗಿ ಬೇಡಿಕೊಂಡಳು. ಶಾಂತಳ ಪ್ರತಿಯೊಂದು ಮಾತೂ ಈತನನ್ನು ಕೊಂದಿತು. "

" ಅನಂತರ "

—ಅತಿ ಆತುರದಿಂದ ಕೇಳಿದೆ.

" ಕ್ಷಮಿಸಿದ್ದೇನೆ ಎಂದು ನಾನು ಹೇಳುವವರೆಗೂ ಶಾಂತ ಕೇಳಲೇ ಇಲ್ಲ. ಅನಂತರ ಅವಳಿಗೆ ಏನನ್ನೋ ಹೇಳಿದೆ. ಅದಕ್ಕವಳು ಒಪ್ಪಿ, ನನ್ನನ್ನು ಅಪ್ಪಿ 'ಅಣ್ಣಾ ನೀನು ನನ್ನ ಪಾಲಿನ ದೇವರು ' ಎಂದಳು.

" ಏನನ್ನು ಹೇಳಿದೆ ? "

—ಅತ್ಯಂತ ಆಶ್ಚರ್ಯದಿಂದ ಕೇಳಿದೆ.

“ಪ್ರಕಾಶ ಹೇಗೆ ಶಾಂತಳಿಗೆ ‘ಅಣ್ಣ–ದೇವರು’ ಆದ ಗೊತ್ತಾಗ ಬೇಕಲ್ಲಾ !”

“ಅದೆಲ್ಲಾ ತಿಳಿಯುತ್ತದೆ ಮುಂದೆ...........ಈಗ ಶಾಂತ ನಾನು ಹೇಳಿದಂತೆ ಕೇಳಲು ಒಪ್ಪಿದ್ದಾಳೆ. ನೀನೂ ಕೇಳಬೇಕು. ಇದು ನಾನು ನಿನಗೆ ವಿಧಿಸುವ ಶಿಕ್ಷೆ.”

ಮರು ಮಾತನಾಡದೆ ಒಪ್ಪಿದೆ. ಆದರೆ ಎಲ್ಲವೂ ವಿಚಿತ್ರವಾಗಿ, ಇನ್ನೂ ಹೇಗೇಗೊ ತೋರುತ್ತಿತ್ತು. ಈ ಪ್ರಕಾಶ ಆಕಾಶದಲ್ಲಿ ಹೊಳೆಯುವ ಪ್ರಕಾಶನೆ? ಎಂದಿತು ಮನ. ಹಾಗೆಯೇ ಅವನನ್ನು ದಿಟ್ಟಿಸಿದೆ. ಅವನ ಮುಖ ತೇಜಸ್ಸಿನಿಂದ ಕೂಡಿ ಕಂಗೊಳಿಸುತ್ತಿತ್ತು.

“ನನ್ನ ತಪ್ಪನ್ನೂ ಕ್ಷಮಿಸಿರುವೆಯಾ ?”

—ನನ್ನ ನಾಲಗೆ ನನಗೆ ಅರಿವಿಲ್ಲದಂತೆ ಈ ಮಾತನ್ನು ಆಡಿತು.

“ಈ ಕ್ಷಮಾಪಣೆಯನ್ನು ಶಾಂತಳ ಮುಂದೆ ಕೇಳಿಕೊಳ್ಳುವನಾಗು.”

—ಎಂದು ಆ ಮಾತನ್ನು ಅಷ್ಟಕ್ಕೆ ಕಡಿದು :

“ತಿಂಡಿ ಏನೇನು ಸಿದ್ಧಪಡಿಸಿದ್ದೀಯ ?”

—ಎಂದ ಪ್ರಕಾಶ.

“ಗೊತ್ತಿಲ್ಲ.”

“ವಾಂಗಿ ಬಾತು, ಕೇಸರ ಬಾತು’ etc....“

—ಎಂದು ಶೈಜ ಕೋಣೆಯನ್ನು ಪ್ರವೇಶಿಸುತ್ತಾ ಉತ್ತರಿಸಿದಳು. ಅವಳ ಮುಖದಲ್ಲಿ ಅಪೂರ್ವ ತೇಜಸ್ಸಿತ್ತು, ಇದಕ್ಕೆ ಕಾರಣ ಶಾಂತಳೇ ಇರಬಹುದೆ?

“ತಿಂಡಿಗೆ ಸಿದ್ಧವಾಗಿದೆ. ಬನ್ನಿ ಪ್ರಕಾಶ್, ಸುರೇಶ್”

—ಎಂದಳು ನಗುತ್ತಾ ಶೈಲಜ.

ಅವಳ ಆ ಮಾರ್ಮಿಕ ನಗೆಯು, ಈ ‘ಮುಕ್ಕ’ನಿಗೆ ಹೊಳೆಯಲಿಲ್ಲ.

ನನ್ನ ಮುಖ ನೋಡಿ ಪ್ರಕಾಶ್ ನಕ್ಕ.

“ಯಾರು ಬಲ್ಲರೊ ನಿನ್ನ ಲೀಲೆಯ ?
ಯಾರಿಗಾಗುವೆಯೋ ಈ ನಗೆ ಬಲೆಯ ?”

—ಎಂದು ಹೇಳುತ್ತಾ ತಂಗಿಯನ್ನು ಹಿಂಬಾಲಿಸಿದೆ. ಮಹಡಿಯ ಮೇಲಣ ಕೋಣೆಯಲ್ಲಿ ನಾಲ್ಕು ಕುರ್ಚಿಗಳು ಸಿದ್ಧವಾಗಿ ಮುಂದೆ ಟೇಬಲ್ ಮೇಲೆ ತಿಂಡಿ ನಮ್ಮನ್ನೇ ನೋಡುತಿತ್ತು.

ನಾನೂ ಪ್ರಕಾಶ್ ಒಬ್ಬರ ಪಕ್ಕದಲ್ಲಿ ಒಬ್ಬರು ಕುಳಿತೆವು, ಶಾಂತ ನನಗೆ ಎದುರಾಗಿ ಪ್ರಕಾಶನ ಮಗ್ಗುಲಲ್ಲಿ ಮಂದಗಮನೆಯಾಗಿ ಬಂದು ಮಂಡಿಸಿದಳು. ಶೈಲಜ ಹಲ್ಲು ಕಿರಿಯುತ್ತಾ :

" ಊಟ ಮಾಡಬಹುದು. "

—ಎಂದು ತಾನೂ ನನ್ನ ಪಕ್ಕದಲ್ಲೇ ಪ್ರಕಾಶನಿಗೆ ಎದುರಾಗಿ ಕುಳಿತಳು. ಇತ್ತೀಚಿನ ಫ್ಯಾಷನ್ನಿನಂತೆ ತಲೆ ಬಾಬ್ ಮಾಡಿಸಿ ಅರೆಮಾತ್ರ ಕಾಣುವ ಸಾದಿಟ್ಟು, ವಾಯಲ್ ಸೀರೆಯುಟ್ಟು, ಚಿನ್ನದ ಬಳೆಯಿಟ್ಟು, ಕಂಗೊಳಸುತ್ತಿದ್ದ ತಂಗಿ ' ಮುಂಡೆ 'ಯಂತೆ ಕಾಣದೆ ಭಾಗ್ಯಲಕ್ಷ್ಮಿಯಾಗಿ ಕಂಡಳು.

" ಇವಳ ಬಾಳಿನ ಗತಿ ?"

—ಎಂಬ ಪ್ರಶ್ನೆಯೊಂದು ಸುಳಿದು ಮುಳ್ಳಿನಂತೆ ಚುಚ್ಚಿ ಬಂತು.

ಕಣ್ಣು ಬಿಟ್ಟು ನೋಡುತ್ತೇನೆ. ಅಂದು ತಿಂಡಿಯಲ್ಲ ಊಟ ಏನೂ ಅರ್ಥವಾಗದೆ ಊಟಕ್ಕೆ ಕೈ ಹಚ್ಚಿದೆ.

ಮನಸ್ಸಿಗೆ ತೋರಿದ ಮಾತನಾಡುತ್ತಾ ಊಟಮಾಡಿದೆವು. ಆದರೆ ಶಾಂತ ಏನನ್ನೋ ಯೋಚಿಸುತ್ತಾ ನಗಲಾರದೆ ನಗುತ್ತಿದ್ದಳು. ನನ ಸ್ಥಿತಿಯೂ ಅಂತೇ ಇತ್ತು.

ಊಟ ಆದ ಮೇಲೆ ಪ್ರಕಾಶ್—

" ನಿನ್ನ ಕತೆ ಪ್ರಾರಂಭಿಸು ಸುರೇಶ್-ಎಂದ. "

" ಯಾವ ಕತೆ.......?! " ವಿಸ್ಮಯದಿಂದ ಕೇಳಿದೆ.

" ನೀನು ಕಾಲೇಜಲ್ಲಿ ಶಾಂತಳನ್ನು ಪ್ರೀತಿಸಿ, ಪ್ರೇಮಿಸಿ....ಮಿಸಿ ಅಲ್ಲಿಂದ ನೀನು ಅವಳನ್ನು ಮರೆತೆಯಲ್ಲಾ ಅದಕ್ಕೆ ಕಾರಣ ?"

ನನ್ನದೃಷ್ಟಿ ಶಾಂತಳ ಮೇಲಿತ್ತು. ಈ ಮಾತು ಶಾಂತ ಕೇಳಿದ ಕೂಡಲೇ ತರೆತರ ನಡುಗಿದಳು. ಶೈಲಜ ಗೊಂಬೆಯಾದಳು. ಪ್ರಕಾಶನ

ಮುಖ ನೋಡಲು ಅವನ ಮುಖದಿಂದ ಅತಿ ಪ್ರಾಜ್ವಲ್ಯಮಾನವಾದ ಬೆಳಕು ಹೋರ ಬರುತ್ತಿತ್ತು.

ಹೇಳಲಾರದೆ ಹೇಳ ಹೊರಟೆ. ಗಂಟಲು ತಡೆಯಿತು. ಗಳಗಳ ಕಣ್ಣೀರಿಟ್ಟೆ. ಪ್ರಕಾಶ್ ಕಣ್ಣೀರನ್ನು ಒರಿಸಿ ನನ್ನ ಈ ಪಾಪಿಯ ಕತೆಯನ್ನು ಕೇಳಲು ಉದ್ಯುಕ್ತನಾದ.

ಇಲ್ಲಿ ಇರುವವರೆಲ್ಲಾ ನನ್ನವರೇ ಎಂದು ತಿಳಿದು ಕತೆ ಹೇಳಲು ಪ್ರಾರಂಭಿಸಿದೆ.

೨

ಅಂದು ನನ್ನ ಇಂಟರ್ ಪರೀಕ್ಷೆ ಮುಗಿದಿತ್ತು. 'ಪರೀಕ್ಷೆಯಲ್ಲಿ ಉತ್ತಮವಾಗಿ ಉತ್ತರಿಸಿದ್ದೇನೆ' ಎಂಬ ಆತ್ಮತೃಪ್ತಿ ಇತ್ತು. ಮನಸ್ಸು ಮಾತ್ರ ಶಾಂತಳನ್ನು ನೋಡಲು ಹವಣಿಸುತ್ತಿತ್ತು. ಶಾಂತಳನ್ನು ಕಂಡು ತಿಂಗಳು ಅನೇಕವಾಗಿ ಉರುಳಿದ್ದುವೇನೋ. ಪಾಪ ಅವಳು ಪರೀಕ್ಷೆಗೆ ಬರಲೇ ಇಲ್ಲ; ಕಾರಣ ತಿಳಿಯಲಿಲ್ಲ. ಯಾರನ್ನು ಕೇಳಲು ಮನಸ್ಸು ಬಾರದು—ಅಲ್ಲದೆ ಯಾರನ್ನು ತಾನೆ ಏನೆಂದು ಕೇಳುವುದು. ಹೀಗೆಯೆ ಯೋಚಿಸುತ್ತಾ ಕುಳಿತಿದ್ದೆ.

ಮನಸ್ಸು ಸುಮ್ಮನಿರಲಿಲ್ಲ. ಡ್ರಾಯರ್ ಎಳೆದು ನೋಡಿದೆ. ಶಾಂತಳ ಪ್ರಶಾಂತವಾದ, ಸುಂದರವಾದ ಫೋಟೊಗಳು ನನ್ನನ್ನು ನೋಡಿ ಗಹಗಹಿಸಿ ನಕ್ಕು ನಲಿದುವು.

ಅವುಗಳೊಡನೆ ಅನೇಕವಾಗಿ ಮಾತಾಡುತ್ತಾ ಕುಳಿತೆ. ಕಣ್ಣಿಂದ ನೀರು ಕಿತ್ತು ಹರಿಯಲು ಪ್ರಾರಂಭಿಸಿತು.

' ಸಾರ್ ಸಾರ್ ' ಎಂದು ಯಾರೋ ಬಾಗಿಲು ತಟ್ಟಿದರು. ಶಾಂತಳೇ ಇರಬೇಕು ಎನಿಸಿತು.

" ಹಲೋ ಕಮಾನ್ ಶಾಂತ " ಎಂದು ಬಾಗಿಲು ತೆಗೆದೆ. ಬೆಚ್ಚಿಬಿದ್ದೆ. ಕೆಂಪು ಸೈಕಲ್ ಜೊತೆಯಿರುವ ಪೋಸ್ಟ್‌ಮ್ಯಾನ್. ನನ್ನನ್ನು ನೋಡಿದ ಆತ—

" ಸುರೇಶ್ ನೀವೆನಾ ?—ಎಂದ

" ಹೌದು " ಬಾಯಿ ಒಣಗಿ ನಿರಾಗಿತ್ತು.

Post Man ತಂತಿ ಕೈಗಿತ್ತು, ಸಹಿ ಪಡೆದು ಹೊರಟ. ಕೈಗಳು ನಡುಗುತ್ತಾ ' ತಂತಿ 'ಯನ್ನು ಬಿಚ್ಚಿದುವು. " Start Immediatly Your Mother Is Seriously Ill" ಎಂದಿತ್ತು. ತಂದೆಯವರೇ

ತಂತಿ ಕೊಟ್ಟಂತಿತ್ತು. ಯಾವುದೂ ಸರಿಯಾಗಿ ನೆನಪಿಲ್ಲ. ರೂಂಗೆ ಬೀಗ ಬಡಿದು, ಮನೆಯವರಿಗೆ ತಂತಿ ವಿಷಯ ತಿಳಿಸಿ ಕಾಲುಕಿತ್ತು, ಗಾಂಧಿಸ್ಕ್ವೈಯ ರ್‌ಗೆ ಓಡಿಬಂದು, ಪರಿಚಯಸ್ಥರ 'ಟ್ಯಾಕ್ಸಿ' ಹತ್ತಿ ಊರಕಡೆ ಹೊರಟೆ.

ಊರಲ್ಲಿ ಜನರೇ ಇಲ್ಲ. ಮೊದಲೇ ಬಿರುಸಲ್ಲಿ ಬಡಿದುಕೊಳ್ಳುತ್ತಿದ್ದ ಎದೆ ನಿಂತೇ ಹೋಯಿತೇನೋ ಎನ್ನಿಸಿತು. ಆದರೂ ಬದುಕಿದ್ದೆ. ನಮ್ಮ ಜೀತಗಾರ ಓಡಿ ಓಡಿ ಬಂದು—

"ಬುದ್ದೀ ಸಂಕನಪುರದ ಹೊಲದಲ್ಲಿ ಟೆಂಟ್ಲ್ಲಿ ಎಲ್ಲ ಅವ್ರೆ ಬುದ್ದಿ ಊರಲ್ಲಿ ಪಿಲೇಗ್"

—ಎಂದ

"ಎಲ್ಲಾ ಹುಷಾರಾಗಿದಾರೇನೋ ?"

—ಈ ಮಾತನ್ನು ಆಡುವಾಗ ಶಕ್ತಿಯೇ ಇರಲಿಲ್ಲ.

"ಅಮ್ಮಾವ್ರಿಗೆ ತುಂಬಾ ಹುಷಾರಿಲ್ಲ ಬುದ್ದೀ"

ಈ ಮಾತು ಕಿವಿಗೆ ಬಿದ್ದ ಕೂಡಲೇ—

"ಡ್ರೈವರ್ ಕೆಳಗಿಳಿಯಿರಿ"

—ಎಂದೆ. ಡ್ರೈವರ್ ಕೆಳಗಿಳಿದ. ನಾನೇ ಕಾರನ್ನು ಅತಿ ವೇಗದಲ್ಲಿ ನಡೆಸಿಕೊಂಡು ಸಂಕನಪುರದ ಹೊಲದಕಡೆ ನಡೆದೆ. ಕಾರನ್ನು ಅತಿ ವೇಗ ವಾಗಿ ತಂದು 'ಟೆಂಟ್' ಮುಂದೆ ನಿಲ್ಲಿಸಿ, ಟೆಂಟ್ ಪ್ರವೇಶಿಸಿದೆ.

ನನಗೆ ಜನ್ಮವಿತ್ತ ತಾಯಿ ಮರಣಶಯ್ಯೆಯಲ್ಲಿ "ಸುರೇಶ ಸುರೇಶ"— ಎಂದು ಸಂಕಟ ಪಡುತ್ತಾ ಮೇಲುಸಿರು ಬಿಡುತ್ತಾ ಮಲಗಿದ್ದರು.

ನನ್ನ ತಂದೆ ನನ್ನನ್ನು ಕಂಡು "ಸುರೇಶಾ" ಎಂದು ಓಡಿಬಂದು ನನ್ನನ್ನು ತಬ್ಬಿ ಅಳಲು ಪ್ರಾರಂಭಿಸಿದರು. ನಾನು ತಂದೆಯಿಂದ ಪಾರಾಗಿ ತಾಯಿಯ ಬಳಿ ಬಂದು—

"ಅಮ್ಮಾ...ಅಮ್ಮಾ"ಎಂದೆ.

ತಂದೆಯವರೇ ತಾಯಿಯ ಪಕ್ಕದಲ್ಲಿ ಕುಳಿತು—

"ಗೌರಾ....ಗೌರಾ... ನೋಡು....ನೋಡು ಮೈಸೂರಿಂದ ಸುರೇಶ ಬಂದಿದ್ದಾನೆ....ಸುರೇಶ ಬಂದಿದ್ದಾನೆ" ಎಂದರು.

ತಾಯಿಗೆ ಪ್ರಜ್ಞೆ ಇರಲಿಲ್ಲವೇನೊ! ಮೆಲ್ಲಗೆ ಕಣ್ಣು ತೆರೆದು—

" ಸುರೇಶ... ಸುರೇಶಾ "

—ಎಂದು ಹೇಳುತ್ತಾ ನನ್ನನ್ನು ತಬ್ಬಿದರು ತಾಯಿ. ನನಗೆ ದುಃಖ ಇಮ್ಮಡಿ-ಮುಮ್ಮಡಿ-ನೂರ್ಮಡಿ-ಸಾಸಿರಮಡಿಯಾಗಿ ಗುದ್ದಿ ಗುದ್ದಿ ಬಂತು. ಗೊಳೋ ಎಂದು ಅಳುತಿದ್ದೆ.

" ಸುರೇಶಾ....ಗಂಗಾಮೃತ "

—ತಾಯಿ ಎಂದಾಗ. ತಂದೆ ತಾಯಿಯ ಬಾಯಿಗೆ ಗಂಗೆಯನ್ನು ಬಿಟ್ಟರು.

" ಶೈಲ....ನಿನ್ನನ್ನು ನೋಡದೆ ಅದ್ಹೇಗೆ ಸಾಯಲೀ?"

—ಎಂದು ತಾಯಿ ಮತ್ತೆ ಕೂಗಿದರು. ನಾನು ತಾಯಿಯನ್ನು ಕುರಿತು—

" ಅಮ್ಮಾ ಯೋಚಿಸಬೇಡ. ಶೈಲ ಇನ್ನೇನು ಬರುತ್ತಾಳೆ"—ಎಂದೆ.

" ರ್‍ರೀ. ಶೈಲ ಮುತ್ತೈದೆಯಾಗಿ ಬಾಳಲಿ. ಸುರೇಶ ನಿನಗೆ ನನ್ನ ಆಶೀರ್ವಾ....ದ "

—ಎಂದು ತಾಯಿ ಉಸುರಿ ಕಣ್ಮುಚ್ಚಿದರು.

ತಾಯಿಯು ಸುಖದುಃಖ ; ತ್ಯಾಗಭೋಗ ; ಶ್ರೇಯಸ್ಸು ಪ್ರೇಯಸ್ಸುಗಳ ಚಕ್ರವ್ಯೂಹದ ಅಗಾಧ ಪ್ರಭಾವದಿಂದ ದೂರಾದಳು.

ತಾಯಿಯು ಭೌತಿಕ ಶರೀರದ ಮೇಲೆ ಬಿದ್ದು ಬಿದ್ದು ಹೊರಳಾಡಿದೆ. ಅತ್ತೆ—ಪ್ರಜ್ಞೆ ಇಲ್ಲದೆ ಬಿದ್ದೆ.

ಮತ್ತೆ ಪ್ರಜ್ಞೆ ಬಂದಾಗ ತಂದೆ ಮಗ್ಗುಲಲ್ಲೇ ಕುಳಿತು ಅಳುತ್ತಿದ್ದರು. ದೂರದಲ್ಲಿ ತಂಗಿ-ಭಾವ ನನ್ನ ತಂಗಿಯ ಮಾವ, ಅತ್ತೆ, ನಮ್ಮ ಭಾವನ ತಮ್ಮಂದಿರು, ಅಣ್ಣಂದಿರು ತಂಗಿಯರು ಅಕ್ಕಂದಿರು ಎಲ್ಲರೂ ಇದ್ದರು.

ಸರ್‍ರನೆ ಮೇಲೆದ್ದು ಅಳುತಿದ್ದ ತಂಗಿಯನ್ನು ನೋಡಿದೆ. ತಂಗಿ ಓಡಿ ಬಂದು " ಅಣ್ಣಾ ಇನ್ನು ನನಗೆ ದಿಕ್ಕು"—ಎಂದು ತಬ್ಬಿದಳು.

ನನಗೆ ದುಃಖ ಮತ್ತೆ ನೆತ್ತಿಗೇರಿ ಪ್ರಜ್ಞೆ ತಪ್ಪಿದೆ. ಮತ್ತೆ ಪ್ರಜ್ಞೆಯಿಂದ ಎದ್ದಾಗ ಸುಮಾರು ಬೆಳಗಿನ ನಾಲ್ಕು ಘಂಟೆ. ಎಲ್ಲರೂ ಅಳುತ್ತಾ ಕುಳಿತಿದ್ದಾರೆ.

ಮತ್ತೆ ಅತ್ತು-ಅತ್ತೂ ಈ ಹಾಳು ಜಗದ ಬಾಳ ಗೋಳ ನಿಂದಿಸಲು ಸಾಧ್ಯವಿಲ್ಲದೆ ಸಂಸಾರದ ಮೋಹ, ತಾಯಿ-ತಂದೆಯ ಮೋಹ ಅತ್ತು

ಶಾಂತಳ ಮೋಹ, ಈ ಮೋಹದ ಬಲೆಯಲ್ಲಿ—ಅಲೆಯಲ್ಲಿ—ಸುಳಿಯಲ್ಲಿ ಗಂಟಿಕ್ಕಿದವನಾಗಿ. ಗರಗರ ಸುತ್ತಿದವನಾಗಿ ಸಂಕಟ ಪಟ್ಟೆ.

ಪ್ರಕೃತಿ ತನ್ನ ಕೆಲಸದಲ್ಲಿ ತಾನು ನಿರತಳಾಗಿದ್ದಳು. ಸೂರ್ಯ ಹುಟ್ಟಿದ—ಏಕೆ ಹುಟ್ಟಿದನೋ?!??!

ಬೆಳಗ್ಗೆ ಆರರ ಸಮಯ ಸುತ್ತಲೂ ಮಂಜು ಮೋಡ. ಜಗತ್ತೇ ದುಃಖದರಮನೆ.

ಆ ಮಬ್ಬಿಲ್ಲದ ಯಾವುದೋ ಮಬ್ಬಿನಲ್ಲಿ ತಾಯಿಯ ಭೌತಿಕ ಶರೀರ ಮಸಣಯಾತ್ರೆ ಹೊರಟಿತ್ತು. ಆಗ ನನ್ನ ದುಃಖ............

ತಾಯಿಯ ಭೌತಿಕ ಶರೀರ "ಮಸಣಯಾತ್ರೆ" ದುಃಖ........ಅಳತೆ ಮೀರಿ ಉಕ್ಕಿಬಂತು.

ತಾಯಿಯ ಪಾರ್ಥಿವ ಶರೀರ ಮಾತ್ರ ಇಲ್ಲವಾಗಿತ್ತು.

ಬೆಂಕಿಯ ಜ್ವಾಲೆ ಭೌತಿಕ ಶರೀರವನ್ನು ಸುಟ್ಟಿತು. ಮುಂದೆ ನನ್ನ ಚಿಂತೆಗೆ ಕಡಿವಾಣ?........

ಆಗತಾನೆ ತಾಯಿಯನ್ನು ಮಸಣದಲ್ಲಿ ಮರೆಮಾಡಿ ಎಲ್ಲರೂ ಮನೆ ಕಡೆ ಹೊರಟಿದ್ದೆವು. ತಂದೆ ದಾರಿಯಲ್ಲಿ ಪ್ರಜ್ಞೆತಪ್ಪಿ ಬಿದ್ದರು. ಅಲ್ಲಿಂದ ಎಲ್ಲರೂ ಅವರನ್ನು ಹೊತ್ತು ಟೆಂಟಿಗೆ ತಂದು ಮಲಗಿಸಿ, ಡಾಕ್ಟರನ್ನು ಕರೆಸಿದೆವು. ಡಾಕ್ಟರ್ ಬಂದು ಇಜಕ್ಷನ್ ಕೊಟ್ಟರು ತಂದೆ ಚೇತರಿಸಿಕೊಂಡು ಕಣ್ಣು ಬಿಟ್ಟಾಗ ಅವರ ಮೈ ಬೆಂಕಿಯಂತೆ ಸುಡುತ್ತಿತ್ತು.

ಈ ಜ್ವರ ಇಳಿಯಲೇ ಇಲ್ಲ. ಹಾಳು ವಿಧಿ ತಂದೆಯನ್ನು ನುಂಗಲು ಯತ್ನಿಸಿತು. ತನ್ನ ಯತ್ನದಲ್ಲಿ ಫಲ ಪಡೆಯಿತು.

"ಸುರೇಶ, ನಿನಗೆ ಏನನ್ನೂ ಹೇಳಲಾರೆ. ಕಪನೀಪತಯ್ಯ ನೀನೇ ನನ್ನ ಮಗನಿಗೂ ಗತಿ"

—ಎಂದು ನನ್ನ ಪ್ರೀತಿಯ ತಂದೆ ಕಣ್ಮುಚ್ಚಿದರು. "ಅಪ್ಪಾ" ಎಂದು ಕಿರಿಚಿ ತಂದೆಯ ಶರೀರದಮೇಲೆ ಬಿದ್ದೆ.

ಮತ್ತೆ ಪ್ರಜ್ಞೆ ತಪ್ಪಿತು. ಈ ಸಾರಿ ನಾನು ಬದುಕಿದ್ದುದೇ ಹೆಚ್ಚಂತೆ. ಡಾಕ್ಟರ್ ವಿಶ್ವ ಪ್ರಯತ್ನದ ಫಲ ನನಗೆ ಪುನರ್ ಜನ್ಮವಿತ್ತಿತಂತೆ.

ಮತ್ತೆ ಅದೇ ಮಸಣಯಾತ್ರೆ...............

ತಂದೆಯವರ ಮಸಣಯಾತ್ರೆ...............

ತಂದೆಯನ್ನು ತಾಯ ಬಳಿಗೆ ಕಳಿಸಿ ದಿನಗಳು ಎರಡಾಗಿತ್ತು. ಕಪನೀಪತಯ್ಯ ನಮ್ಮ ಶೈಲಜಳ ಮಾವ. ಅವರು ನನ್ನನ್ನು ಸಮಾಧಾನ ಮಾಡುತ್ತಾ—

"ಈ ದಿನವೇ ನಾವೆಲ್ಲ ಬೆಂಗಳೂರಿಗೆ ಹೊರಟು ಹೋಗೋಣ ಇಲ್ಲಿರುವುದು ಬೇಡ ಸುರೇಶ"

"ಅದೇಕೆ? ಈ ತಂದೆ-ತಾಯಿ ಎಲ್ಲರನ್ನೂ ಅದ್ಹೇಗೆ ಮರೆತು ನಿಮ್ಮೂರಿಗೆ ನಾನು ಬರಲಿ?"

"ಇದು ಪ್ಲೇಗ್ ಸ್ಥಳ. ಆರೋಗ್ಯವಂತರಾದ ನಾವುಗಳು ಯಾರೂ ಇರಬಾರದು"

ಹೌದು ಸತ್ತವರು ಇಬ್ಬರು. ಎಲ್ಲರೂ ಹೊರಡುವುದೇ ಒಳ್ಳೆಯದು ಎನ್ನಿಸಿತು ನನಗೆ—ನಮ್ಮ ಕಪನೀಪತಯ್ಯನವರನ್ನು ಹಿಂಬಾಲಿಸಿದ್ದ ಅಷ್ಟು ಜನರನ್ನೂ ನೋಡಿ.

ನಮ್ಮ ಭಾವ ರಾಮಯ್ಯನನ್ನು ಬಿಟ್ಟರೆ ಮಿಕ್ಕವರೆಲ್ಲಾ ಡಾಕ್ಟರ್ ಬಳಿ ಇಂಜಕ್ಷನ್ ಮಾಡಿಸಿಕೊಂಡೇ ಬಂದಿದ್ದರಂತೆ. ನಮ್ಮ ಭಾವನಿಗೆ ಅನುಕೂಲವಾಗಲಿಲ್ಲವಂತೆ.

ತಂಗಿ ಕೂಡ—

"ನಮ್ಮೂರಿಗೇ ಬಂದು ಬಿಡಣ್ಣ"

—ಎಂದಿದ್ದಳು.

ಕೂಡಲೇ ನಾನು ನನ್ನ ತಂದೆಯ ತಂದೆ, ನನ್ನ ತಾತನವರ ಬಳಿ ಓಡಿದೆ. ಅವರು ಇಲಿಯೊಂದನ್ನು ಸುಡುತ್ತಾ ಇದ್ದರು.

"ತಾತ....ಇವರೆಲ್ಲಾ ನನ್ನನ್ನು ಬೆಂಗಳೂರಿಗೆ ಈ ದಿನವೇ ಕರೆಯುತ್ತಿದ್ದಾರೆ. ಏನು ಮಾಡಲಿ. ಅದ್ಹೇಗೆ ಈ ಸ್ಥಳವನ್ನು ಬಿಡಲಿ?"

"ನೀನು ಹಾಗೆಲ್ಲಾ ಹೇಳಬಾರದು ಹೊರಡು ಮಗು. ನಿನ್ನ ಆರೋಗ್ಯ ದೃಷ್ಟಿಯಿಂದ ಅದು ಒಳ್ಳೆಯದು" ಎಂದರು.

"ತಾತ ನೀವು...."

“ ನನಗೆ ಪ್ಲೇಗ್ ಬಂದು ಬಿಟ್ಟಿದೆ ಮಗು.”

ಬೆಚ್ಚಿ ಬಿದ್ದು ತಾತನ ಕೈ ಮುಟ್ಟಿ ನೋಡಿದೆ. ಆ ವೃದ್ಧನ ಮೈ ಕುದಿಯುತ್ತಿತ್ತು. ರೋಗ ಗಂಟೆ ಗಂಟೆಗೂ ಉಲ್ಬಣವಾಯಿತು.

ತಾತನೂ ಸತ್ತರು.

ಮತ್ತೆ ಮಸಣಯಾತ್ರೆ...............

ಅಜ್ಜನ ಮಸಣಯಾತ್ರೆ...............

ದುಃಖದ ಮಡು.

ಅಳುವಿನ ಸಾಗರದಲ್ಲಿ ಮಿಂದೆವು ನಾವೆಲ್ಲ.

ಬಾಳು ಗೋಳು.

ತಾತನನ್ನು ಮಸಣ ಮುಟ್ಟಿಸಿದ ಮರುದಿನವೇ ನಾನು ಎಲ್ಲರೊಡನೆ ಬೆಂಗಳೂರನ್ನು ತಲುಪಲಾರದೆ ತಲುಪಿದೆ.

ಅಂದು ಡಾಕ್ಟರ್ ಬಂದು ನನಗೂ ಇಂಜಕ್ಷನ್ ಚುಚ್ಚಿದರು.

ಆದರೆ...........ಆದರೆ...........

ಹೇಳಲಾರೆ ಅದೇಗೆ ಹೇಳಲಿ ?

ಭಾವನಿಗೆ ಇಂಜಕ್ಷನ್ ಚುಚ್ಚಲು ಕರೆದಾಗ—

“ ನನಗೆ ನಿಮ್ಮ ಇಂಜಕ್ಷನ್ ಬೇಡಿ ಡಾಕ್ಟರ್. ನನಗೆ ಇಲಿ ತನ್ನ ಇಂಜಕ್ಷನ್ ಕೊಟ್ಟು ಬಿಟ್ಟಿದೆ ”

—ಎಂದರು.

ನಿಜವಾಗಿತ್ತು ಭಾವನ ಮಾತು.

ಡಾಕ್ಟರ್ ಬ್ರಹ್ಮಬರಹವನ್ನು ತಪ್ಪಿಸಲು ಸಾಧ್ಯವೆ? ಪ್ರೀತಿಯ ತಂಗಿ ಶೈಲಜಳನ್ನು ದೇವರು ಮುಂಡೆ ಎನಿಸಿಯೇ ಬಿಟ್ಟ.

ಶೈಲಜ ನಿನ್ನ ಅಂದಿನ ದುಃಖ ಅದೆಷ್ಟು. ಕೇವಲ ಒಂದು ವಾರದಲ್ಲಿ ನಾಲ್ಕು ಸಾವು.

ಅಬ್ಬ !

ರಾಮಣ್ಣ ಅದೇಕೆ ಮೃತ್ಯು ನಿನ್ನನ್ನೂ ತಿಂದಿತು.........????

ಈ ದುಃಖದಲ್ಲಿ ಮುಂದೆ ಮಾತಾಡಲು ಸಾಧ್ಯವಿಲ್ಲ.

೪

ನಾನು B.Sc. (Hons) ಗೆ ಬೆಂಗಳೂರಲ್ಲಿ ಕಾಲೇಜ್ ಸೇರಿದೆ. ಆಧುನಿಕ ನಾಗರೀಕತೆಯಲ್ಲಿ ಅನುಭವಸ್ಥರಾದ ನಮ್ಮ ಕಪನೀಪತಯ್ಯ ನವರು ಸೊಸೆ ತಲೆಯನ್ನು ಬೋಳಿಸಲು ಒಪ್ಪಲಿಲ್ಲ. ಶೈಲಜ ಎಂದಿನಂತೆ ಹರಿಸಿನ ಕುಂಕುಮವಿಟ್ಟು 'ಸುಮಂಗಲೆ'ಯಾಗಿ ಹೈಸ್ಕೂಲ್ ಸೇರಿದಳು.

ಸಮಾಜ ಕಪನೀಪತಯ್ಯನವರ ಈ ಕೆಲಸಕ್ಕೆ ತನ್ನ ಅಸಾಧಾರಣ ಅಸಮಾದಾನವನ್ನು ಸೂಚಿಸಿತು. ಮನೆಯ ಮೇಲೆ ಕೆಲವುದಿನಗಳ ಕಾಲ ಕಲ್ಲುಗಳು ಬಿದ್ದುವು. ಶೈಲಜಳನ್ನು ಸ್ಕೂಲಿನಂತೆ "ಮುಂಡೆ".... "ಜಡೆ ಮುಂಡೆ" ಎಂದು ಹಂಗಿಸಿದರು. ಕೆಲವು ದಿನಗಳು ಅವಳು ಸ್ಕೂಲ್ ಹೋಗುವಾಗ ಅವಳ ಮೇಲ್ವಿ ಚಾರಣಗೆ, ಶಂಕರ-ನಮ್ಮ ಭಾವನವರ ತಮ್ಮ ಹೋಗಿ ಬರುತ್ತಿದ್ದ. ದಿನಕಳೆದಂತೆ ಎಲ್ಲವೂ ಸರಿಬಂತು. ಕಪನೀಪತಯ್ಯ ಭಾರೀ ಹಣವಂತರಾದ್ದರಿಂದ ನನ್ನಿಂದ ಅವರಿಗೆ ಯಾವ ತೊಂದರೆಯೂ ಆಗಲಿಲ್ಲ.

ಶೈಲಜಳ ಮನಸ್ಸುಮಾತ್ರ ಪತಿಯ ಪಾದದಲ್ಲಿ ಲೀನವಾಗಿತ್ತು. ಅವಳು ಗರಬಡಿದವಳಂತೆ ಯಾವಾಗಲೂ ಯೋಚಿಸುತ್ತಲೇ ಇರುತ್ತಿದ್ದಳು. ಆಗ ಶೈಲಜಳನ್ನು ನಾನು ನೋಡಲಾಗುತ್ತಿರಲಿಲ್ಲ.

ದಿನಕಳೆದಂತೆಲ್ಲಾ ಶೈಲಜಳ ಮನಸ್ಸು ಓದುಬರಹಗಳ ಕಡೆ ಸ್ವಲ್ಪ ಸ್ವಲ್ಪವಾಗಿ ವಾಲಹತ್ತಿತು. ಕಪನೀಪತಯ್ಯನವರು ಮುಗ್ಧೆ ಶೈಲಜಳ ಮನಸ್ಸು ನೋಯದಂತೆ ಶೈಲಜಳ ವಯಸ್ಸಿನ ಕಪನೀಪತಯ್ಯನವರ ಮದುವೆಯಾಗದ ಕುಮುದ, ಕುಸುಮ ಇಬ್ಬರು ಹೆಣ್ಣು ಮಕ್ಕಳೊಡನೆ ಶೈಲಜ ಕಾಲವನ್ನು ನೂಕಹತ್ತಿದಳು.

ಮೂರುವರ್ಷಗಳು ಉರುಳಿತು.

B.Sc. (Hons) ನ್ನು first class (ಫಸ್ಟ್ ಕ್ಲಾಸ್)ನಲ್ಲಿ ಪಾಸ್ ಮಾಡಿದೆ.

" ಕಪನೀಪತಯ್ಯನವರ ಮುಂದೆ ಒಂದುದಿನ ಕುಳಿತು ಕೇಳಿದೆ.—

" ಮುಂದೆ ಓದಲು ಮುಂಬಯಿಗೆ ಹೋಗುವ ಯೋಚನೆಯಲ್ಲಿ ಇದ್ದೇನೆ "

" ಸಂತೋಷ ಹೇಗಿದ್ದರೂ B.Sc. (Hons) ಫಸ್ಟ್ ಕ್ಲಾಸಿನಲ್ಲಿ ಮಾಡಿದ್ದೀಯೇ. ಮುಂದೆ ಓದುವ ಬಯಕೆ ಸಹಜವಾದುದೇ ಹೊರಡು ವಂತಿದ್ದರೆ ಹೊರಡು. ನಿನ್ನ ತಂಗಿಯನ್ನು ಕೇಳಿದೆಯಾ ಸುರೇಶ್ "

" ಕೇಳಿದೆ ಮಾವ. ಅವಳಿಗೂ S.S.L.C. ಆಗಿದೆ. ಆದ್ದರಿಂದ ಮುಂದೆ ಅವಳು ಕಾಲೇಜಿಗೆ ಹೋಗುವುದಿಲ್ಲವಂತೆ. ನನ್ನೊಡನೆ ಮುಂಬಯಿಗೆ ಬರ್ತ್ತಾಳಂತೆ. "

" ಪಾಪ ಆ ಹೆಣ್ಣು ಮಗು ಬೇರೆ ನಿನ್ನೊಡನೆ ಏಕೆ ಅಲ್ಲಿ ಎಣಗಬೇಕು. ಸುಖವಾಗಿ ಇಲ್ಲಿರಲಿ. ನೀನೇನೋ ಹೋಗಲೇಬೇಕು ಹೋಗಿ ಬಾ "

ಈ ಹೊತ್ತಿಗೆ ನಮ್ಮ ತಂದೆಯ ಎಲ್ಲ ಆಸ್ತಿಗಳನ್ನೂ ಮಾರಿ, ಪೊಟ್ಟಣ ಕಟ್ಟಿ ಸುಮಾರು ಐದೂವರೆಲಕ್ಷ ರೂಪಾಯಿಗಳನ್ನು ಬ್ಯಾಂಕಲ್ಲಿ ನನ್ನ ಹೆಸರಿಗೆ ಕೊಳೆಹಾಕಿದ್ದೆ. ಇದರ ಬಡ್ಡಿಯೆ ನನಗೆ, ನನ್ನ ಎಲ್ಲರಿಗೂ ಖರ್ಚಿ ಗಾಗುತ್ತಿತ್ತು- ಮಿಗುತ್ತಿತ್ತು.

ಸರಿ. ಶೈಲಜ ನನ್ನೊಡನೆ ಬರಲು ಹಠ ಸಾಧಿಸಿದಳು. ನನಗೂ ನನ್ನ ಪ್ರೀತಿಯ ತಂಗಿ ಜೊತೆಯಲ್ಲೇ ಇದ್ದರೆ ಚೆನ್ನ ಎನಿಸಿತು. ಅವಳೊಡನೆಯೆ ಮುಂಬಯಿ ಹತ್ತಿ, ವಾಸಕ್ಕೆ ಮನೆಕೊಂಡು, ಮುಂಬಯಿ ಜೀವನ ನಡೆಸಲು ಪ್ರಾರಂಭಿಸಿದೆ.

M.Sc. ಓದಿಗೆ ಪ್ರಾರಂಭಿಸಿದೆ.

ವರುಷವೊಂದು ಶಾಂತಳ ಚಿಂತೆಯಲ್ಲಿ, M.Sc. ವ್ಯಾಸಂಗದಲ್ಲಿ ಕಳೆಯುತ್ತಲಿದ್ದೆ.

೨೩

ಶಾಂತ ತಲೆತಗ್ಗಿಸಿಕೊಂಡು ಕುಳಿತಿದ್ದಳು. ಅವಳ ಕಣ್ಣಿಂದ ನೀರು ತೊಟ್ಟುತ್ತಿತ್ತು. ಕಥೆ ಹೇಳಿ ನಿಲ್ಲಿಸಿದೆ. ನನಗರಿವಿಲ್ಲದಂತೆ ನನ್ನ ಕಣ್ಣಿಂದ ನೀರು ಉರುಳುತ್ತಾ ಭೂಮಿಯನ್ನು ಸೇರುತ್ತಿದ್ದುವು.

“ ಕಥೆ ಹೇಳಿಯಾಯಿತೆ ಸುರೇಶ್. ”

—ಎಂದ ಪ್ರಕಾಶ್.

ಪ್ರಕಾಶನ ಮುಖವನ್ನು ದಿಟ್ಟಿಸಿದೆ. ಮುಖದಲ್ಲಿ ಯಾವುದೊ ದುಃಖ ಮಿಶ್ರವಾದ ಕಳೆಯಿತ್ತು.

“ ಆಯಿತು. ”

—ಎಂದು ಅಲ್ಲಾಡಿಸಿದೆ.

“ ಏಳು ಮೇಲೆ. ಶಾಂತ ನೀನೂ ಮೇಲೇಳು ”
ನನಗೇಕೋ ಭಯವಾಯಿತು. ಮೂಕನಾದೆ. ಆದರೆ ಮಾತ್ರ ಮೇಲೆಳಲೇ ಇಲ್ಲ.

ಪ್ರಕಾಶ ಹಿಂಬದಿಯ ಚೀಲದಿಂದ ಎರಡು ಹೂ-ಮಾಲೆಗಳನ್ನು ಮೇಲೆ ತೆಗೆದು, ನನ್ನ ಕೈಗೊಂದನ್ನು ಇಟ್ಟು, ಶಾಂತಳಿಗೂ ಒಂದನ್ನು ಕೊಟ್ಟು—

“ ಸುರೇಶ್ ನೀನು ಶಾಂತಳನ್ನು ಪ್ರಿತಿಸಿದೆ. ಈಗಲೂ ಅದೇ ಪ್ರೀತಿಯಿಂದ ಅವಳ ಕೊರಳಿಗೆ ನಿನ್ನ ಹೂ-ಮಾಲೆಯನ್ನು ಹಾಕಿ ಅವಳನ್ನು ಸ್ವೀಕರಿಸಿ, ನನ್ನ ಮನಸ್ಸನ್ನೂ, ಅವಳ ಆತ್ಮವನ್ನೂ, ನಿನ್ನ ಮನವನ್ನೂ ಸಮಾಧಾನಪಡಿಸು.”

—ಎಂದ.

ಈ ಪ್ರಕಾಶ ಮಾನವನೆ? ಮನುಷ್ಯನೆ? ಖಂಡಿತ ಅಲ್ಲ. ಈತನೊಬ್ಬ ದೇವಮಾನ್ಯ ಪುರುಷ.

೬

ನನ್ನ–ಶಾಂತಳ "ವಿವಾಹ" ನಡೆದು ತಿಂಗಳೆರಡು ಉರುಳಿತ್ತು ಎಂದು ಕಾಣುತ್ತೆ. ನಮ್ಮಿಬ್ಬರ ವಿವಾಹವಾದ ದಿನದಿಂದ ಪ್ರಕಾಶ್ ನಮ್ಮ ಮನೆಯಲ್ಲೆವಾಸ ಮಾಡಿಕೊಂಡಿದ್ದಾನೆ. ನಾವೆಲ್ಲರೂ ಸುಖಿಗಳಾಗಿದ್ದೇವೆ.

ಪ್ರತಿ ಭಾನುವಾರವೂ ಪಿಚ್ಚರಿಗೆ ಹೋಗುತ್ತಿದ್ದೆವು. ಎಲ್ಲಿ ಹೋಗಲಿ ನಾನು-ಶಾಂತ ಜೊತೆಯಾಗುತ್ತಿದ್ದವು. ಶೈಲಜ ಯಾರ ಜೊತೆ ಬರಬೇಕು ?

'ಶೈಲಜ ಬಾಲ್ಯದಲ್ಲೇ ವಿಧವೆಯಾಗಬಾರದಿತ್ತು....ಆದರೆ'–ಎಂದು ಯೋಚಿಸುತ್ತಿದ್ದೆ.

ಒಂದು ದಿನ ಪ್ರಕಾಶ್ ಸ್ನಾನ ಮಾಡುತ್ತಿದ್ದ. ಶೈಲಜ, ತಿಳಿದೋ, ತಿಳಿಯದೆಯೋ ಸ್ನಾನದ ಮನೆಗೆ ನುಗ್ಗಿಬಿಟ್ಟಳು ಪ್ರಕಾಶ್ ಅವಳ ಕೈ ಹಿಡಿದು ಬರಸೆಳೆದು ಭದ್ರವಾಗಿ ಆಲಂಗಿಸಿ ಚುಂಬಿಸಿದ.

ಶೈಲಜ "ಕೂಗುತ್ತೇನೆ ಬಿಡಿರಿ"—ಎಂದಳು.

"ಕೂಗು ಚಿಂತೆ ಇಲ್ಲ....ಆದರೆ ಇನ್ನೊಂದು"

"ಥೂ....ನನ್ನನ್ನು, ನೀವು ಹೀಗೆ ಗೋಳು ಹುಯ್ಯುವುದೇ ?"

"ನೀನು ಮಾತ್ರ ನನ್ನೊಡನೆ ಸರಸ ಆಡುವುದೇ ?"

ಇದನ್ನು ನಾನು ಕಂಡೆ. ಕೂಡಲೇ ಪ್ರಕಾಶ್ ಶೈಲಜಳ ಕೈ ಬಿಟ್ಟು ಸ್ತಂಭೀಭೂತನಾದ.

ನಾನು ನಕ್ಕು ತೆರಳಿದೆ.

ಇದರಿಂದ ನನ್ನ ಅನುಮತಿಯೇ ಅವರಿಬ್ಬರ ಪ್ರೇಮಕೂಟಕ್ಕೆ ದೊರೆ ತಂತಾಯಿತು.

ಸರಿ, ಇತ್ತ ನಾನು-ಶಾಂತ

ಅತ್ತ ಪ್ರಕಾಶ್-ಶೈಲಜ.

ತಿಂಗಳು ನಾಲ್ಕು ಉರುಳಿತು.

ಅಂದು ಶಾಂತ ಓಡಿ ಬಂದು—

" ಲೈಬ್ರರಿ ರೂಂ ನೋಡಿದಿರಾ ?"—ಎಂದಳು.

ನಾನು ಓಡಿ ಲೈಬ್ರರಿ ರೂಂನಿಂದ ದೂರ ನಿಂತೆ.

ಒಳಗೆ ಶೈಲಜ-ಪ್ರಕಾಶ್ ಇಬ್ಬರೇ ಮಾತಾಡುತ್ತಿದ್ದರು. ನಾನು ಅವಳಿಗೆ ತಿಳಿಯದಂತೆ ಅವರ ಮಾತನ್ನು ಗ್ರಹಿಸಿದೆ.

" ಶೈಲಜ ನೀನು ನನ್ನನ್ನು ಮದುವೆ ಯಾಗುವುದಿಲ್ಲವೇ ?"

—ಎಂದ ಪ್ರಕಾಶ.

" ರಾತ್ರಿ ಎಲ್ಲಾ ಮುಗಿಸಿದಿರಲ್ಲಾ"

" ಥೂ.... ಹೇಳು ಶೈಲಜ...."

" ನಾನು ಮುಂಡೆಯಲ್ಲವೇ ?"....

" ಆದರೂ ಪರವಾಗಿಲ್ಲ"

" ಹಾಗಾದರೆ ಸರಿ"

ಕೂಡಲೇ ಪ್ರಕಾಶ್ ಅವಳನ್ನು ಹಿಡಿದು ತನ್ನೆಡೆಗೆ ಎಳೆದುಕೊಂಡ. ನಾನು ಆ ಸ್ಥಳದಿಂದು ದೂರಾದೆ.

೭

ಅಂದು ಭಾನುವಾರ

ಅಂದು ವಿಶೇಷವಾದ ಅಡಿಗೆಯನ್ನು ಶಾಂತ ಸಿದ್ಧಗೊಳಿಸಿದ್ದಳು. ನಾನು ಮಾರ್ಕೆಟ್ಟಿಂದ ಬೇಕಾದುದನೆಲ್ಲಾ ತಂದೆ.

ಬೆಳಗ್ಗೆ ಪ್ರಕಾಶ್ ಬಂದು—

"ಇದೇನಯ್ಯ ಇದೆಲ್ಲಾ ಸಡಗರ"

—ಎಂದ.

"ನಿನ್ನನ್ನು ಶಿಕ್ಷಿಸಲು"

"ಕಾರಣ....!"

"ಪಾಪ ಎಳೆಮಗು ಗೊತ್ತಿಲ್ಲ"

ಕೂಡಲೇ ಅವನು ರೂಂಗೆ ಓಡಿಹೋದ.

ಶೈಲಜ ಓಡಿಬಂದು ಶಾಂತಳನ್ನು—

"ಇದೇನತ್ತಿಗೆ ಇದೆಲ್ಲಾ"—ಎಂದಳು

"ನೀನು ಮಾಡಬಾರದು ಮಾಡಿದಕ್ಕೆ."

"ಅದೇನು ಮಾಡಿದ್ದು"

"ತಿಳಿಯದೇ? ಬೇಡ–ತಿಳಿಯದೇ ಇರುವುದೇ ಒಳ್ಳೆಯದು."

ಅದೇಕೊ ಶೈಲಜ ನಡುಗಿ, ಕೋಣೆಯತ್ತ ನಡೆದಳು. ಅಲ್ಲೇ ಪ್ರಕಾಶ್ ಮೊದಲೇ ಇದ್ದ...............

ನಾನು–ಶಾಂತ ಇಬ್ಬರೂ ಕೂಡಲೇ ಆ ರೂಂ ಒಳ ಹೊಕ್ಕೆವು.

ಇಬ್ಬರೂ ಮಾತಾಡುತ್ತಾ ಇದ್ದರು.

ಶಾಂತ ಮಾಂಗಲ್ಯವಿದ್ದ ತಟ್ಟೆಯನ್ನು ಪ್ರಕಾಶನ ಮುಂದೆ ನೀಡಿ "ಅಣ್ಣಾ, ಈ ಮಾಂಗಲ್ಯವನ್ನು ಕೈಗೆ ತೆಗೊ"

—ಎಂದಳು.

ಆತ ತೆಗೆದುಕೊಂಡ..